07 December 2025 Sunday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಜೀವನ ಚಿಕ್ಕದು ಎಂದೆನಿಸಿಕೊಳ್ಳಲು ಕಾರಣ ಇವತ್ತು ಇದ್ದವರು ನಾಳೆ ಇರುವುದಿಲ್ಲ ಹೀಗಾಗಿ ಜೀವನ ತುಂಬಾ ಚಿಕ್ಕದಾಗಿ ಕಾಣಿಸುತ್ತದೆ !
— ಸ್ನೇಹಾ ಆನಂದ್

**ಒಂದೊಳ್ಳೆ ಮಾತು**

"ಕಷ್ಟದ ಬೆಲೆ ಗೊತ್ತಿರುವವರು ಯಾರಿಗೂ ಕಷ್ಟ ಕೊಡುವುದಿಲ್ಲ "ಇಷ್ಟದ ಬೆಲೆ ಗೊತ್ತಿರುವವರು ಯಾರನ್ನೂ ದೂರ ಮಾಡಿಕೊಳ್ಳುವುದಿಲ್ಲ "
ಮೈಲಾರ ಸಾವಿತ್ರಿಬಾಯಿ

info.varthaman@gmail.com
9742504916

ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 48 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ಚುಂಚಶ್ರೀ ಕ್ಷಮೆ ಕೇಳಿದ ಎಚ್‌ಡಿಕೆ





**ಮಂಡ್ಯ:** ಆದಿಚುಂಚನಗಿರಿ ನಿರ್ಮಲಾನಂದ ಶ್ರೀಗಳಿಗೆ ನಾನು ನೀಡಿದ್ದ ಹೇಳಿಕೆಯಿಂದ ನೋವಾಗಿದ್ದರೆ ಸಾರ್ವಜನಿಕವಾಗಿ ಕ್ಷಮೆ ಕೇಳುತ್ತೇನೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಬಹಿರಂಗವಾಗಿ ಕ್ಷಮೆ ಕೇಳಿದರು.

ಮಂಡ್ಯದ ವಿಸಿ ಫಾರಂನಲ್ಲಿ ಶನಿವಾರ ಕೃಷಿ ಮೇಳದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಕುಮಾರಸ್ವಾಮಿ ಅವರು, ನಿರ್ಮಲಾನಂದನಾಥ ಸ್ವಾಮೀಜಿ ಅವರಷ್ಟು ವಿದ್ಯಾವಂತರಾದ ಮತ್ತೊಬ್ಬ ಸ್ವಾಮೀಜಿ ಇಲ್ಲ. ಅವರಿಗೆ ಅಗೌರವ ಆಗಬಾರದು ಎಂಬ ದೃಷ್ಟಿಯಿಂದ ಶ್ರೀಗಳನ್ನು ಬಳಕೆ ಮಾಡಿಕೊಳ್ಳಬಾರದು ಎಂದು ಹೇಳಿಕೆ ನೀಡಿದ್ದೆ. ನನ್ನ ಹೇಳಿಕೆಯಿಂದ ಆದಿ ಚುಂಚನಗಿರಿ ನಿರ್ಮಲಾನಂದ ಶ್ರೀಗಳಿಗೆ ನೋವಾಗಿದ್ದರೆ ಸಾರ್ವಜನಿಕವಾಗಿ ಕ್ಷಮೆ ಕೇಳುತ್ತೇನೆಂದು ಹೇಳಿದರು.

ಬಾಲಗಂಗಾಧರನಾಥ ಸ್ವಾಮೀಜಿಗಳು ಸಮಾಜದ ಗೌರವ ಉಳಿಸಲಿಕ್ಕೆ ಬೀದಿಗೆ ಬಂದವರು. ಅವರಿಗೆ ದೇವೇಗೌಡರು ಮುಖ್ಯಮಂತ್ರಿಯಾಗಲಿ ಎಂದು ಮನಸ್ಸಿನಲ್ಲಿತ್ತು. ನನ್ನನ್ನು ಕಂಡರೂ ಅವರಿಗೆ ತುಂಬಾ ವಾತ್ಸಲ್ಯವಿತ್ತು. ನನ್ನಿಂದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿಗಳಿಗೆ ಅಪಚಾರವಾಗಿದ್ದರೆ ಸಾರ್ವಜನಿಕವಾಗಿ ಕ್ಷಮೆ ಕೇಳುತ್ತೇನೆ ಎಂದು ತಿಳಿಸಿದರು.

ಪ್ರಸಕ್ತ ರಾಜಕೀಯ ವಿದ್ಯಮಾನಗಳು ಏನು ನಡೆಯುತ್ತಿವೆ ಎಂದು ಎಲ್ಲರಿಗೂ ಗೊತ್ತು. ಈ ಬಗ್ಗೆ ನಮ್ಮ ನಿರ್ಮಲಾನಂದನಾಥ ಶ್ರೀಗಳು ಮಾತನಾಡಿದ್ದಾರೆ. ಅವರು ಮಾತಾಡಿದ್ದಕ್ಕೆ ಇನ್ಯಾರೋ ಮಾತಾಡಿದ್ದಾರೆ. ಸ್ವಾಮೀಜಿಗಳು ಇಲ್ಲಿಗೆ ಬರಬಾರದು. ಅವರಿಗೆ ಅಗೌರವ ಆಗಬಾರದು ಎಂಬ ದೃಷ್ಟಿಯಿಂದ ಬಳಕೆ ಮಾಡಿಕೊಳ್ಳಬಾರದು ಎಂದು ಹೇಳಿದ್ದೇನೆಂದು ತಿಳಿಸಿದರು.

ಈ ಹಿಂದೆ ಹೇಳಿಕೆ ನೀಡಿದ್ದ ಕುಮಾರಸ್ವಾಮಿ, ರಾಜಕಾರಣಿಗಳು ರಾಜಕಾರಣ ಮಾಡಲಿ. ಆದರೆ ಧರ್ಮಾಧಿಕಾರಿಗಳು ಯಾರೋ ಒಬ್ಬರ ಪರ ಅಭಿಪ್ರಾಯ ವ್ಯಕ್ತಪಡಿಸುವ ವ್ಯಾಮೋಹ ಬಿಡಬೇಕು ಎಂದು ಹೇಳಿದ್ದರು.

## ಡಿಕೆಶಿ ಸಿಎಂ ಸಾಧ್ಯವಿಲ್ಲ: ಆದ್ರೆ ಸಚಿವ ಸ್ಥಾನ ಬೇಡ!

* ಡಿಕೆಶಿ ವಿರುದ್ಧ ಕೆ.ಎನ್.ರಾಜಣ್ಣ ಮತ್ತೆ ವಾಗ್ದಾಳಿ



**ತುಮಕೂರು:** ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆದರೆ ನನಗೆ ಸಚಿವ ಸ್ಥಾನ ಬೇಡ. ಡಿಕೆಶಿ ಸಂಪುಟದಲ್ಲಿ ನಾನು ಸಚಿವನಾಗಲು ಇಷ್ಟಪಡುವುದಿಲ್ಲ. ಆದರೆ, ಡಿಕೆಶಿ ಸಿಎಂ ಆಗ್ತಾರೆ ಅಂದು ಕೊಂಡಿದ್ದೀರಾ? ಅದು ಸಾಧ್ಯವೇ ಇಲ್ಲ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಮತ್ತೆ ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ನಡುವಿನ ಕುರ್ಚಿ ಕದನ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿರುವ ಬೆನ್ನಲ್ಲೇ, ಕೆ.ಎನ್. ರಾಜಣ್ಣ ಸ್ಫೋಟಕ ಹೇಳಿಕೆ ನೀಡುವ ಮೂಲಕ ವಿವಾದದ ಬೆಂಕಿಗೆ ತುಪ್ಪ ಸುರಿದಿದ್ದಾರೆ.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿಕೆಶಿ ಸಂಪುಟದಲ್ಲಿ ನನಗೆ ಸಚಿವ ಸ್ಥಾನ ಬೇಡವೇ ಬೇಡ. ನನಗೆ ಸಾಕು, ಇನ್ನೊಬ್ಬರಿಗೆ ಅವಕಾಶ ಕೊಡಲಿ ಎಂದರು.

ಡಿ.ಕೆ ಶಿವಕುಮಾರ್ ಸಿಎಂ ಆಗುತ್ತಾರೆಯೇ ಎಂದು ವರದಿಗಾರರ ಪ್ರಶ್ನಿಸಿದಾಗ ಗರಂ ಆದ ರಾಜಣ್ಣ, ಒಂದು ವೇಳೆ ಡಿಕೆ ಶಿವಕುಮಾರ್ ಮುಖ್ಯಮಂತ್ರಿಯಾದರೆ ನನಗೆ ಸಚಿವ ಸ್ಥಾನ ಬೇಡ. ಹಾಗಂತ ಡಿ.ಕೆ.ಶಿವಕುಮಾರ್ ಸಿಎಂ ಆಗ್ತಾರೆಂದು ಹೇಳುತ್ತಿಲ್ಲ. ಅವರು ಸಿಎಂ ಆಗೇ ಬಿಡುತ್ತಾರೆ ಅಂದುಕೊಂಡಿದ್ದೀರಾ? ನನಗೆ ಅಧಿಕಾರದ ದಾಹ ಇಲ್ಲ ಎಂದು ಹೇಳಿದರು. ರಾಜಣ್ಣ ಅವರ ಈ ಹೇಳಿಕೆ ಹೊಸ ಚರ್ಚೆಗೆ ಕಾರಣವಾಗಿದೆ. ನಾನು 2028ರ ವಿಧಾನ ಸಭಾ ಚುನಾವಣೆಗೆ ಸ್ಪರ್ಧೆ ಮಾಡುವುದಿಲ್ಲ ಎಂದು ಕೆ.ಎನ್ ರಾಜಣ್ಣ ಘೋಷಿಸಿದ್ದಾರೆ.

ಸಿಎಂ ಮತ್ತು ಡಿಸಿಎಂ ದುಬಾರಿ ವಾಚ್‌ಗಳ ಕುರಿತು ವಿರೋಧ ಪಕ್ಷದ ಟೀಕೆಯ ಬಗ್ಗೆ ಪ್ರತಿಕ್ರಿಯಿಸಿದ ರಾಜಣ್ಣ, ವಿರೋಧ ಪಕ್ಷದವರಿಗೆ ವಿರೋಧ ಮಾಡೋಕೆ ಬೇರೆ ವಿಚಾರ ಇಲ್ಲ. ವಾಚ್ ಬಗ್ಗೆ, ಊಟಕ್ಕೆ ಹೋದರೂ ಆರೋಪ ಮಾಡುತ್ತಾರೆ. ಜ್ವಲಂತ ಸಮಸ್ಯೆಗಳ ಬಗ್ಗೆ ಗಮನ ಹರಿಸಲಿ ಅಂತಾ ಮನವಿ ಮಾಡುತ್ತೇನೆ ಎಂದರು.

# ಸಮಾನತೆಗಾಗಿ ಗ್ಯಾರಂಟಿ ಜಾರಿ

## ಜಾತಿ ವ್ಯವಸ್ಥೆಯಿಂದ ಅಸಮಾನತೆ ಜೀವಂತ । ಸಿದ್ದರಾಮಯ್ಯ ವಿಷಾದ

**ಹಾಸನ:** ಸಮಾಜದಲ್ಲಿ ಸಮಾನತೆ ತರುವ ದೃಷ್ಟಿಯಿಂದ ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಕೋಟಿಗಟ್ಟಲೇ ಹಣ ಖರ್ಚು ಮಾಡ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ನಗರದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಸರ್ಕಾರಿ ಸೇವೆಗಳ ಸಮರ್ಪಣಾ ಕಾರ್ಯಕ್ರಮ ಉದ್ಘಾಟಿಸಿ ಸಿದ್ದರಾಮಯ್ಯ ಮಾತನಾಡಿದರು. ಸಂವಿಧಾನ ಜಾರಿಗೆ ಬಂದು 75 ವರ್ಷಗಳಾದರೂ ಸಮಾಜದಲ್ಲಿ ಸಮಾನತೆ ಬಂದಿಲ್ಲ. ಶ್ರೀಮಂತರು ಶ್ರೀಮಂತರಾಗಿ ಮತ್ತು ಬಡವರು ಬಡವರೇ ಆಗಿದ್ದಾರೆ. ಜಾತಿ ವ್ಯವಸ್ಥೆಯಿಂದಾಗಿ ಸಮಾನ ಅವಕಾಶ ಸಿಗದೇ ಅಸಮಾನತೆ ಇನ್ನೂ ಇದೆ. ಅಸಮಾನತೆ ತೊಡದು ಹಾಕದವರೆಗೆ ಸ್ವಾತಂತ್ರ್ಯದ ಉದ್ದೇಶ ಈಡೇರುವುದಿಲ್ಲ. ಇದನ್ನು ಅರ್ಥ ಮಾಡಿಕೊಂಡಿರುವ ನಮ್ಮ ಸರ್ಕಾರ ಗ್ಯಾರಂಟಿ ಯೋಜನೆಗಳ ಮೂಲಕ ಅಸಮಾನತೆ ತೊಡದು ಹಾಕುವ ಪ್ರಯತ್ನ ಮಾಡುತ್ತಿದೆ ಎಂದು ತಿಳಿಸಿದರು.

2023 ಮೇ 23ಕ್ಕೆ ಅಧಿಕಾರಕ್ಕೆ ಬಂದೆವು. ಜೂನ್ 11ರಿಂದ ಶಕ್ತಿ ಯೋಜನೆ ಜಾರಿ ಮಾಡಿದ್ದೇವೆ. 600 ಕೋಟಿಗೂ ಹೆಚ್ಚು ಮಹಿಳೆಯರು ಬಸ್‌ನಲ್ಲಿ ಉಚಿತ ಪ್ರಯಾಣ ಮಾಡಿದ್ದಾರೆ. ಜುಲೈನಲ್ಲಿ ಅನ್ನಭಾಗ್ಯ, ಗೃಹ ಜ್ಯೋತಿ, ಆಗಸ್ಟ್‌ನಲ್ಲಿ ಗೃಹಲಕ್ಷ್ಮಿ, 2024 ಜನವರಿಗೆ ಯುವನಿಧಿ ಯೋಜನೆ ಜಾರಿ ಮಾಡಿದೆವು. 1,08,135 ಕೋಟಿ ರೂ.ಗಳನ್ನು ಗ್ಯಾರಂಟಿ ಮೂಲಕ ಜನರಿಗೆ ನೀಡಿದ್ದೇವೆ. ಲೋಕಸಭೆ ಚುನಾವಣೆಯ ನಂತರ ಗ್ಯಾರಂಟಿ ನಿಲ್ಲುತ್ತವೆ ಎಂದು ಪ್ರತಿಪಕ್ಷದವರು ಹೇಳಿದರು. ಆದರೆ ನಿಂತಿವೆಯೇ ಎಂದು ಸಿದ್ದರಾಮಯ್ಯ ಪುಟ 2ಕ್ಕೆ



### ಭೂ ಗ್ಯಾರಂಟಿ ಯೋಜನೆ ಜಾರಿ

- ರಾಜ್ಯ ಸರ್ಕಾರದ 6ನೇ ಗ್ಯಾರಂಟಿ
- ಡಿ.ಕೆ.ಶಿವಕುಮಾರ್ ಘೋಷಣೆ

**ಹಾಸನ:** ಸರ್ಕಾರದ 6ನೇ ಗ್ಯಾರಂಟಿಯಾಗಿ ಭೂ ಗ್ಯಾರಂಟಿ ಯೋಜನೆ ಜಾರಿ ಮಾಡಲಾಗಿದೆ. ನೂರಾರು ವರ್ಷಗಳಿಂದ ಬಾಕಿ ಇದ್ದ ಕೆಲಸಗಳಿಗೆ ಮುಕ್ತಿ ನೀಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ನಗರದಲ್ಲಿ ಶನಿವಾರ ಆಯೋಜಿಸಿದ್ದ ಸರ್ಕಾರಿ ಸೇವೆಗಳ ಸಮರ್ಪಣಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎತ್ತಿನಹೊಳೆ ಯೋಜನೆಯ ನೀರನ್ನು ಹೊರಕ್ಕೆ ತರುವಲ್ಲಿ ಜಿಲ್ಲೆಯ ಅಧಿಕಾರಿಗಳ ಪಾತ್ರ ದೊಡ್ಡದು. ಕೇಂದ್ರ ಸರ್ಕಾರ ಒಪ್ಪಿಗೆ ಕೊಟ್ಟ ನಾಲ್ಕೈದು ತಿಂಗಳಲ್ಲಿ ಎತ್ತಿನಹೊಳೆ ನೀರನ್ನು ಬರಪೀಡಿತ ಜಿಲ್ಲೆಗಳಿಗೆ ಹರಿಸುವ ಕೆಲಸ ಮಾಡಲಾಗುವುದು ಎಂದರು.

ಮೇಕೆದಾಟು ಯೋಜನೆಗೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶ ನಮಗೆ ದೊಡ್ಡ ಜಯ. ಮೇಕೆದಾಟು ಯೋಜನೆ ಕಾರ್ಯಗತವಾದರೆ, ಹಾಸನ, ಮಂಡ್ಯ, ಚಾಮರಾಜನಗರ ಜಿಲ್ಲೆಗಳಿಗೆ ಅನುಕೂಲ ಆಗಲಿದೆ. ಮೇಕೆದಾಟಿನಲ್ಲಿ 400 ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುವುದು. ಈ ಯೋಜನೆಯನ್ನು ಯಾವ ರೀತಿ ಆರಂಭಿಸಬೇಕು ಎನ್ನುವುದರ ಬಗ್ಗೆ ಮುಖ್ಯಮಂತ್ರಿ ಜೊತೆ ಸೇರಿ ಕಾರ್ಯ ಮಾಡಲಾಗುವುದು ಎಂದು ತಿಳಿಸಿದರು.

ಮನುಷ್ಯ ಹುಟ್ಟುವಾಗ ಖಾಲಿ ಕೈಯಲ್ಲಿ ಬರುತ್ತೇವೆ. ಹೋಗುವಾಗ ಪಾಪ– ಪುಣ್ಯ ಬಿಟ್ಟು ಹೋಗುತ್ತೇವೆ. ಅದೇ ರೀತಿ ಪುಟ 2ಕ್ಕೆ

## ಅಹಿಂದಕ್ಕೆ ಎಚ್‌ಡಿಕೆ ಕೊಡುಗೆ ಏನು?

### ಮೇಕೆದಾಟುಗೆ ಏಕೆ ಒಪ್ಪಿಗೆ ಕೊಡಿಸಿಲ್ಲ: ಸಿದ್ದರಾಮಯ್ಯ ಕಿಡಿ

**ಹಾಸನ:** ರಾಜ್ಯದಲ್ಲಿ ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿರುವುದು ಯಾರಿಗಾಗಿ? ಬಡವರಿಗೆ, ದಲಿತರಿಗೆ. ಹಿಂದುಳಿದವರಿಗೆ. ಇದು ಅಹಿಂದಕ್ಕಾಗಿ ಅಲ್ಲವೇ? ಅಹಿಂದಕ್ಕೆ ಅವರದ್ದೇನು ಕೊಡುಗೆ ಎಂದು ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು.

ಅಹಿಂದಕ್ಕೆ ಸಿದ್ದರಾಮಯ್ಯ ಕೊಡುಗೆ ಏನು? ಎಂಬ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಶನಿವಾರ ಪ್ರತಿಕ್ರಿಯಿಸಿದ ಅವರು, ಕುಮಾರಸ್ವಾಮಿ ರೈತನ ಮಗನ ಮಗ ಅಲ್ವಾ? ಮೇಕೆದಾಟು ಯೋಜನೆಗೆ ಒಪ್ಪಿಗೆ ಕೊಡಿಸುವುದು ಅವರಿಗೆ ಏಕೆ ಆಗಿಲ್ಲ ಎಂದು ಪ್ರಶ್ನಿಸಿದರು.

ಮೇಕೆದಾಟು ಯೋಜನೆ ಕುರಿತು ಸುಪ್ರೀಂ ಕೋರ್ಟ್ ರಾಜ್ಯದ ಪರ ತೀರ್ಪು ನೀಡಿದೆ. ಆದರೆ ಕೇಂದ್ರ ಸರ್ಕಾರ ರಾಜ್ಯದ ವಿರುದ್ಧವಾಗಿ ನಡೆದುಕೊಳ್ಳುತ್ತಿದೆ. ಈ ಬಗ್ಗೆಯೂ ಕುಮಾರಸ್ವಾಮಿ ಧ್ವನಿ ಎತ್ತಿಲ್ಲ. ಇದರಿಂದ ಮಂಡ್ಯ ಜಿಲ್ಲೆಗೆ ಸಾಕಷ್ಟು ಅನ್ಯಾಯವಾಗಿದೆ. ಹಾಗಾದರೆ ಮಂಡ್ಯ ಜಿಲ್ಲೆಗೆ ಕುಮಾರಸ್ವಾಮಿ ಕೊಡುಗೆ ಏನು ಎಂದು ಅಸಮಾಧಾನ ವ್ಯಕ್ತಪಡಿಸಿದರು. ಭದ್ರಾ ಮೇಲ್ದಂಡೆ ಯೋಜನೆಗೆ ನಿರ್ಮಲಾ ಸೀತಾ ರಾಮನ್, 5,300 ಕೋಟಿ ಕೊಡುವುದಾಗಿ



ಬಜೆಟ್‌ನಲ್ಲಿ ಘೋಷಣೆ ಮಾಡಿದ್ದರು. ಆದರೆ, ಯಾವುದೇ ಅನುದಾನ ವನ್ನು ನೀಡಿಲ್ಲ ಎಂದು ಟೀಕಿಸಿದರು.

ಕೇಂದ್ರ ಸರ್ಕಾರ ಜಿಎಸ್‌ಟಿ ಕಡಿಮೆ ಮಾಡಿದ್ದರಿಂದ ರಾಜ್ಯಕ್ಕೆ 12 ಸಾವಿರ ಕೋಟಿ ನಷ್ಟ ಉಂಟಾಗುತ್ತಿದೆ. ಪ್ರಸಕ್ತ ವರ್ಷ 1.20 ಲಕ್ಷ ಕೋಟಿ ತೆರಿಗೆ ಸಂಗ್ರಹದ ಗುರಿ ಹೊಂದಲಾಗಿತ್ತು ಆದರೆ ಕೇಂದ್ರದ ನೀತಿಯಿಂದ ರಾಜ್ಯಕ್ಕೆ ನಷ್ಟ ಉಂಟಾಗಿದೆ. ಕುರಿತು ಸಚಿವ ಕುಮಾರಸ್ವಾಮಿ ಏಕೆ ಮಾತನಾಡುವುದಿಲ್ಲ ಎಂದು ಪ್ರಶ್ನಿಸಿದರು. ಪ್ರತಿಪಕ್ಷಗಳು ಕಾಂಗ್ರೆಸ್ ಸರ್ಕಾರದ ವಿರುದ್ಧ ಅವಿಶ್ವಾಸ ಪುಟ 2ಕ್ಕೆ

## ಬಿಜೆಪಿ ಜೊತೆ ಕೈಜೋಡಿಸಿ ಎಚ್‌ಡಿಕೆ ಮನುವಾದಿ: ಸಿದ್ದರಾಮಯ್ಯ ಲೇವಡಿ

**ಬೆಂಗಳೂರು:** ಬಿಜೆಪಿ ಜೊತೆ ಕೈಜೋಡಿಸಿದ ಮೇಲೆ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಕೂಡ ಮನುವಾದಿ ಆಗಿಬಿಟ್ಟಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಲೇವಡಿ ಮಾಡಿದರು.

ವಿಧಾನಸೌಧದ ಮುಂಭಾಗ ಶನಿವಾರ ಆಯೋಜಿಸಿದ್ದ ಅಂಬೇಡ್ಕರ್ ಅವರ 69ನೇ ಮಹಾ ಪರಿನಿರ್ವಾಣ ಕಾರ್ಯಕ್ರಮದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕುಮಾರಸ್ವಾಮಿ ನಡೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಕಾಲಾತೀತ, ಮೌಲ್ಯಾಧರಿತ ಆದರ್ಶಗಳನ್ನ ಒಳಗೊಂಡಿರುವ ಭಗವದ್ಗೀತೆಯನ್ನು ಶಾಲಾ ವಿದ್ಯಾರ್ಥಿಗಳಿಗೆ ಬೋಧಿಸಲು ಪಠ್ಯದಲ್ಲಿ ಸೇರಿಸಬೇಕು ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರಿಗೆ ಮನವಿ ಮಾಡಿದ್ದರು. ಈ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ ಅವರು, ಬಿಜೆಪಿ ಜೊತೆ ಸೇರಿಕೊಂಡ ಮೇಲೆ ಕುಮಾರಸ್ವಾಮಿ ಮನುವಾದಿ ಆಗಿಬಿಟ್ಟಿದ್ದಾರೆಂದು ಕಿಡಿಕಾರಿದರು. ಗೃಹ ಸಚಿವ ಪರಮೇಶ್ವರ್ ಪ್ರತಿಕ್ರಿಯಿಸಿ, ಅವರಿಗೆ ಪುಟ 2ಕ್ಕೆ

### ಮನುವಾದಕ್ಕೂ ಭಗವದ್ಗೀತೆಗೂ ಏನು ಸಂಬಂಧ: ಎಚ್‌ಡಿಕೆ ತಿರುಗೇಟು



**ಮಂಡ್ಯ:** ಮನುವಾದಕ್ಕೂ ಭಗವದ್ಗೀತೆಗೂ ಏನು ಸಂಬಂಧ? ಸಿದ್ದರಾಮಯ್ಯ ಮಕ್ಕಳಿಗೆ ಮತ್ತೇನನ್ನು ಬೋಧಿಸಲು ಹೇಳುತ್ತಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿರುಗೇಟು ನೀಡಿದ್ದಾರೆ.

ನಗರದಲ್ಲಿ ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಭಗವದ್ಗೀತೆಯನ್ನು ಶಾಲಾ ಪಠ್ಯದಲ್ಲಿ ಸೇರಿಸುವಂತೆ ಹೇಳಿದ್ದೇನೆ. ನಾನೇನು ಮತಾಂತರ ಮಾಡಲಿಕ್ಕೆ ಈ ಹೇಳಿಕೆ ನೀಡಿಲ್ಲ. ಇಂದಿನ ಮಕ್ಕಳ ಬದುಕು, ಇವತ್ತಿನ ಸಮಾಜವನ್ನು ಸಿದ್ದರಾಮಯ್ಯ ನೇತೃತ್ವದಲ್ಲಿ ಯಾವ ರೀತಿ ಬೆಳೆಸುತ್ತಿದ್ದಾರೆ. ಇದೆಲ್ಲವನ್ನು ಗಮನಿಸಿ ಹೇಳಿದ್ದೇನೆ ಎಂದು ಕಿಡಿಕಾರಿದರು. ಪುಟ 2ಕ್ಕೆ

## ಉಪಲೋಕಾಯುಕ್ತರು ಹೇಳಿಕೆಗೆ ಸೀಮಿತ

**ಮಂಡ್ಯ:** ಉಪ ಲೋಕಾಯುಕ್ತರು ಹೇಳಿಕೆಗೆ ಮಾತ್ರ ಸೀಮಿತವಾಗಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಟೀಕಿಸಿದರು.

ಸರ್ಕಾರಿ ಇಲಾಖೆಗಳಲ್ಲಿ ಶೇ.63ರಷ್ಟು ಭ್ರಷ್ಟಾಚಾರ ಆರೋಪಕ್ಕೆ ಪ್ರತಿಕ್ರಿಯಿಸಿದ ಎಚ್‌ಡಿಕೆ, ಉಪ ಲೋಕಾಯುಕ್ತರಾಗಿ ಏನು ಕೆಲಸ ಮಾಡ್ತಿದ್ದಾರೆ? ಅವರ ಜವಬ್ದಾರಿ ಏನು? ಮಾಧ್ಯಮಗಳ ಮುಂದೆ ಹೇಳಿಕೆ ನೀಡಲಷ್ಟೇ ಅವರಿಗೆ ಅಧಿಕಾರ ನೀಡಲಾಗಿದೆಯಾ? ಇಲ್ಲವೇ ದಾಖಲೆಗಳನ್ನು ಸಂಗ್ರಹಿಸಿ ಕ್ರಮ ತೆಗೆದುಕೊಳ್ಳಲಿಕ್ಕೆ ಅಧಿಕಾರ ನೀಡಲಾಗಿದೆ ಯಾ? ಯಾರ ಕಾಲದಲ್ಲಿ ಭ್ರಷ್ಟಾಚಾರ ನಡೆಯುತ್ತಿತ್ತು ಅನ್ನೋದು ಬೇರೆ ಚರ್ಚೆ. ಭ್ರಷ್ಟಾಚಾರ ಗೊತ್ತಿದ್ದೂ ಉಪ ಲೋಕಾಯುಕ್ತರು ಹೇಳಿಕೆಗೆ ಸೀಮಿತವಾಗಿದ್ದಾರೆ. ಹೀಗಾದರೆ ಪ್ರಯೋಜನವೇನು ಎಂದು ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು 2019ರ ಭ್ರಷ್ಟಾಚಾರ ಬಗ್ಗೆ ಉಪ ಲೋಕಾಯುಕ್ತರು ಮಾತಾನಾ ಡಿದ್ದಾರೆಂದು ಸಿಎಂ ಟ್ವೀಟ್ ಮಾಡಿದ್ದಾರೆಂಬ ವಿಚಾರದ ಬಗ್ಗೆ ಪ್ರತಿಕ್ರಿಯಿಸಿ, ಅಧಿಕಾರಕ್ಕೆ ಬಂದು 3 ವರ್ಷ ಆಗಿದೆ. ಈ ಮೂರು ವರ್ಷದ ಆಡಳಿತ ಎಷ್ಟು ಪರಿಶುದ್ಧ, ಪಾರದರ್ಶಕವಾಗಿದೆ ಎಂಬ ಬಗ್ಗೆ ವರದಿ ಮಾಡಿಸಲಿ ಎಂದು ಸವಾಲು ಹಾಕಿದರು.

## 5ನೇ ದಿನವೂ ಹಾರಾಡದ ಇಂಡಿಗೊ

**ಬೆಂಗಳೂರು:** ಐದನೇ ದಿನವಾದ ಶನಿವಾರವೂ ಇಂಡಿಗೊ ಏರ್‌ಲೈನ್ಸ್‌ಗೆ ಸೇರಿದ ವಿಮಾನಗಳ ಹಾರಾಟದಲ್ಲಿ ತೀವ್ರ ವ್ಯತ್ಯಯವಾಗಿದೆ. ಬೆಂಗಳೂರು, ದೆಹಲಿ, ಮುಂಬೈ ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರು ಪರದಾಡಿದ್ದಾರೆ.

ಸೋಮವಾರದಿಂದ ಈವರೆಗೆ 1,400ಕ್ಕೂ ಇಂಡಿಗೊ ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಉಂಟಾಗಿದೆ. ಡಿಸೆಂಬರ್ 10ರಿಂದ 15ರ ವೇಳೆಗೆ ಸಂಚಾರ ಸಹಜಸ್ಥಿತಿಗೆ ಬರಲಿದೆ ಎಂದು ಇಂಡಿಗೊದ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಪೀಟರ್ ಎಲ್ಬರ್ಸ್ ಶುಕ್ರವಾರ ತಿಳಿಸಿದ್ದಾರೆ.





ಏತನ್ಮಧ್ಯೆ, ಡಿಜಿಸಿಎ ಇಂಡಿಗೊಗೆ ನೀಡಿದ ಆಯ್ದ ಮತ್ತು ಅಸುರಕ್ಷಿತ ಪರಿಹಾರಕ್ಕೆ ಏರ್‌ಲೈನ್ಸ್ ಪೈಲಟ್‌ಗಳ ಸಂಘ (ಎಎಲ್‌ಪಿಎ) ಬಲವಾದ ಆಕ್ಷೇಪಣೆ ವ್ಯಕ್ತಪಡಿಸಿದೆ. ಪುಟ 2ಕ್ಕೆ

## ಭೂ ಮಾಲೀಕತ್ವ ಖಚಿತ ಗ್ಯಾರಂಟಿ

### 1.15 ಲಕ್ಷ ಪೋಡಿ ದುರಸ್ತು: ಸಚಿವ ಕೃಷ್ಣ ಬೈರೇಗೌಡ

**ಹಾಸನ:** ಭೂ ಮಾಲೀಕತ್ವಕ್ಕೆ ಖಚಿತತೆ ಕೊಡುವ ಮೂಲಕ ಭೂ ಗ್ಯಾರಂಟಿ ಯೋಜನೆ ಜಾರಿಗೆ ಸರ್ಕಾರ ಬದ್ಧವಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಹೇಳಿದರು.



ನಗರದ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಶನಿವಾರ ಆಯೋಜಿಸಿದ್ದ ಸರ್ಕಾರಿ ಸೇವೆಗಳ ಸಮರ್ಪಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ದಶಕಗಳಿಂದ ಕಗ್ಗಂಟಾಗಿದ್ದ ಈ ವಿಷಯವನ್ನು ಕಳೆದ ಬಜೆಟ್‌ನಲ್ಲಿ ಸರಳೀಕೃತ ಮಾಡಲಾಗಿದೆ. ದರಖಾಸ್ತು ಪೋಡಿ ದುರಸ್ತು ಅಭಿಯಾನ ಮಾಡಲಾಗಿದೆ. ಇದು ಅಸಾಧ್ಯ ಎಂದು ವಿರೋಧ ಪಕ್ಷದ ನಾಯಕರು ಹೇಳಿದ್ದರು. ಆ ಸವಾಲನ್ನು ಸ್ವೀಕರಿಸಿ, ಕೆಲಸ ಮಾಡಿದ್ದೇವೆ. ಒಂದೇ ವರ್ಷದಲ್ಲಿ 24 ಸಾವಿರ ರೈತರ ಜಮೀನು ಪೋಡಿ ದುರಸ್ತು ಮಾಡಲಾಗಿದೆ. 2013–18ರವರೆಗೆ ರಾಜ್ಯದಲ್ಲಿ 8,500 ಆಗಿತ್ತು. ಈಗ 1.15 ಲಕ್ಷ ಪ್ರಕರಣ ದುರಸ್ತು ಮಾಡಿದ್ದೇವೆ. ಜನರ ಮನೆ ಬಾಗಿಲಿಗೆ ಹೋಗಿ ಕೆಲಸ ಮಾಡಲಾಗುತ್ತಿದೆ ಎಂದು ತಿಳಿಸಿದರು. ಪುಟ 2ಕ್ಕೆ

## ರೈಟ್ ಟು ಡಿಸ್‌ಕನೆಕ್ಟ್ ಬಿಲ್: ಸುಪ್ರಿಯಾ ಖಾಸಗಿ ಮಸೂದೆ

**ನವದೆಹಲಿ:** ಆಫೀಸ್ ಕೆಲಸದ ಬಳಿಕವೂ ಉದ್ಯೋಗಿಗಳಿಗೆ ಕರೆ, ಇಮೇಲ್ ಮಾಡುವುದನ್ನು ತಡೆಯಲು ಅವಕಾಶ ನೀಡುವ ರೈಟ್ ಟು ಡಿಸ್‌ಕನೆಕ್ಟ್ ಬಿಲ್ ಅನ್ನು ಲೋಕಸಭೆಯಲ್ಲಿ ಮಂಡಿಸಲಾಯಿತು.

ಎನ್‌ಸಿಪಿ ಸಂಸದೆ ಸುಪ್ರಿಯಾ ಸುಳೆ ಅವರು ಈ ಖಾಸಗಿ ಮಸೂದೆಯನ್ನು ಮಂಡಿಸಿದರು. ಅಧಿಕೃತ ಕೆಲಸದ ಅವಧಿ ಮೀರಿ ಮತ್ತು ರಜಾದಿನಗಳಲ್ಲಿ ಕೆಲಸಕ್ಕೆ ಸಂಬಂಧಿಸಿದ ಕರೆಗಳು ಮತ್ತು ಇಮೇಲ್‌ಗಳಿಂದ ಸಂಪರ್ಕ ಕಡಿತಗೊಳಿಸುವ ಹಕ್ಕನ್ನು ಪ್ರತಿ ಉದ್ಯೋಗಿಗೆ ಈ ಮಸೂದೆ ನೀಡುತ್ತದೆ. ಇದರ ಜೊತೆ ನೌಕರರ ಕಲ್ಯಾಣ ಪ್ರಾಧಿಕಾರವನ್ನು ಸ್ಥಾಪಿಸಬೇಕೆಂಬ ಅಂಶ ಈ ಮಸೂದೆಯಲ್ಲಿದೆ.

**ಏನಿದು ಖಾಸಗಿ ಮಸೂದೆ:** ಸಚಿವರಲ್ಲದ ಸಂಸತ್ ಸದಸ್ಯರು ಮಂಡಿಸುವ ಮಸೂದೆ ಇದು. ಇದನ್ನು ಸರ್ಕಾರೇತರ ಮಸೂದೆ ಎಂದು ಕರೆಯುತ್ತಾರೆ. ಇದು ಸಾರ್ವಜನಿಕ ಮಸೂದೆ ವಿರುದ್ಧವಾಗಿದ್ದು, ಇದು ಒಬ್ಬ ವ್ಯಕ್ತಿ, ಗುಂಪು ಅಥವಾ ಪ್ರದೇಶದ ಮೇಲೆ ಪರಿಣಾಮ ಬೀರುವ ಪುಟ 2ಕ್ಕೆ

# ನೋಟಿಸ್ ನೀಡಿದರೂ ನಾನು ಹೆದರಲ್ಲ

## ಕೇಂದ್ರದಿಂದ ಕಿರುಕುಳ ನೀಡುವ ಯತ್ನ । ಡಿ.ಕೆ.ಶಿವಕುಮಾರ್ ಆಕ್ರೋಶ

**ಹಾಸನ:** ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ನನಗೆ ಮತ್ತು ಸಹೋದರನಿಗೆ ನೋಟಿಸ್ ನೀಡುವ ಮೂಲಕ ನನ್ನನ್ನು ಹೆದರಿಸಬಹುದು ಎಂದುಕೊಂಡಿದ್ದರೆ ಅದು ತಪ್ಪು. ನಾನು ಇದಕ್ಕೆಲ್ಲಾ ಹೆದರುವುದಿಲ್ಲ. ನಮ್ಮ ಪಕ್ಷಕ್ಕೆ ದುಡ್ಡು ಕೊಡದೇ ಇನ್ಯಾರಿಗೆ ಕೊಡೋಣ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕಿಡಿಕಾರಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಎಲ್ಲ ವಿವರವನ್ನು ಜಾರಿ ನಿರ್ದೇಶನಾಲಯಕ್ಕೆ ಕೊಟ್ಟಿದ್ದೇನೆ. ಚಾರ್ಜ್‌ಶೀಟ್‌ನಲ್ಲಿ ನಮ್ಮ ಹೆಸರು ಸೇರಿಸಿಲ್ಲ. ನಮ್ಮ ಹೇಳಿಕೆ ತೆಗೆದುಕೊಂಡಿದ್ದಾರೆ. ನಮ್ಮನ್ನು ಅವರು ಕರೆಯಬಾರದಿತ್ತು. ಈ ಹಂತದಲ್ಲಿ ಏಕೆ ಕರೆದಿರುವುದು ನನಗೆ ಗೊತ್ತಿಲ್ಲ. ಆದರೆ ನಾನು ಹೋಗುತ್ತೇನೆ ಎಂದು ಹೇಳಿದರು.



ಇದು ನನಗೆ ಆಘಾತಕಾರಿಯಾಗಿದೆ. ನಾವು ಇದನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ಹೋರಾಡುತ್ತೇವೆ. ಕೇಂದ್ರ ಸರ್ಕಾರ ನನಗೆ ಕಿರುಕುಳ ನೀಡುವ ದುರುದ್ದೇಶವೇ ಹೊರತು ಬೇರೇನೂ ಅಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನನ್ನ ಸೋದರ ಮತ್ತು ನನಗೆ ಈ ಹಿಂದೆ ಸಮನ್ಸ್ ನೀಡಿದ್ದಾಗ ಜಾರಿ ನಿರ್ದೇಶನಾಲಯಕ್ಕೆ ಎಲ್ಲಾ ವಿವರಗಳನ್ನು ನೀಡಿದ್ದೇನೆ. ನ್ಯಾಷನಲ್ ಹೆರಾಲ್ಡ್ ಮತ್ತು ಯಂಗ್ ಇಂಡಿಯಾ ಸಂಸ್ಥೆಗಳು ಕಾಂಗ್ರೆಸ್ ಪಕ್ಷದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿವೆ. ಪಕ್ಷದ ಸಂಕಷ್ಟದ ಸಮಯದಲ್ಲಿ, ನಮ್ಮಂತಹ ಕಾಂಗ್ರೆಸ್ಸಿಗರು ಟ್ರಸ್ಟ್‌ಗಳ ಮೂಲಕ ಆ ಸಂಸ್ಥೆಗಳಿಗೆ ಸಹಾಯ ಮಾಡಿದ್ದೇವೆ ಎಂದು ಪುಟ 2ಕ್ಕೆ


### ಬಿಜೆಪಿ ಬೆದರಿಕೆ ತಂತ್ರ

**ಕಲಬುರಗಿ:** ಕಾಂಗ್ರೆಸ್ ನಾಯಕರ ಮೇಲೆ ಕೇಳಿಬರುತ್ತಿರುವ ನ್ಯಾಷನಲ್ ಹೆರಾಲ್ಡ್ ಪ್ರಕರಣವನ್ನು ಬಿಜೆಪಿಯ ಬೆದರಿಕೆ ತಂತ್ರ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್‌ಎಸ್‌ಎಸ್ ಹಣಕಾಸಿನ ಮೂಲದ ಬಗ್ಗೆ ತನಿಖಾ ಸಂಸ್ಥೆಗಳು ಏಕೆ ತನಿಖೆ ಮಾಡುತ್ತಿಲ್ಲ. ತನಿಖಾ ಸಂಸ್ಥೆಗಳು ಕೇಂದ್ರ ಸರ್ಕಾರದ ಕೈಗೊಂಬೆ. ಹಣದ ವ್ಯವಹಾರವೇ ಇಲ್ಲದ ಮನಿ ಲ್ಯಾಂಡರಿಂಗ್ ಕೇಸ್ ಇದು, ಇದೆಲ್ಲಾ ಬಿಜೆಪಿಯವರ ಹೆದರಿಸುವ ಬೆದರಿಸುವ ತಂತ್ರಗಾರಿಕೆ ಅಷ್ಟೇ ಎಂದು ಕೇಂದ್ರದ ವಿರುದ್ಧ ಕಿಡಿಕಾರಿದರು ಪುಟ 2ಕ್ಕೆ

## ಶ್ರೇಷ್ಠ ಸಂವಿಧಾನ ಕೊಟ್ಟ ಅಂಬೇಡ್ಕರ್

### ಎಲ್ಲಾ ಶೋಷಿತರಿಗೆ ಗೌರವ ತಂದುಕೊಡಲು ಯತ್ನ: ಸಿದ್ದರಾಮಯ್ಯ



**ಬೆಂಗಳೂರು:** ಅಂಬೇಡ್ಕರ್ ಅವರು ಇತರೆ ದೇಶಗಳ ಸಂವಿಧಾನಗಳನ್ನು ಸಮಗ್ರ ಅಭ್ಯಾಸ ಮಾಡಿ, ಭಾರತಕ್ಕೆ ಅತ್ಯಂತ ಶ್ರೇಷ್ಠ ಸಂವಿಧಾನ ಕೊಟ್ಟಿದ್ದಾರೆ. ನಮ್ಮ ಸಾಮಾಜಿಕ ವ್ಯವಸ್ಥೆ ಬದಲಾವಣೆಯಾಗಬೇಕು. ಎಲ್ಲರಿಗೂ ಸಮಾನ ಅವಕಾಶ ದೊರಕಬೇಕು ಹಾಗೂ ಸಾಮಾಜಿಕ ನ್ಯಾಯ ಸ್ಥಾಪನೆಯಾಗಬೇಕು ಎಂದು ಅಂಬೇಡ್ಕರ್ ಸಂವಿಧಾನದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 69ನೇ ಮಹಾ ಪರಿನಿರ್ವಾಣ ದಿನದ ಅಂಗವಾಗಿ ಶನಿವಾರ ವಿಧಾನಸೌಧ ಆವರಣದಲ್ಲಿ ಬಾಬಾ ಸಾಹೇಬರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡಿದ ಅವರು, ಬಾಬಾ ಸಾಹೇಬ್ ಅಂಬೇಡ್ಕರ್ ದೇಶಕ್ಕೆ ಎಂತಹ ಸಂವಿಧಾನದ ಅಗತ್ಯವಿದೆ ಎಂದು ಯೋಚಿಸಿ ರಚಿಸಿದ್ದಾರೆ. ಅಂಬೇಡ್ಕರ್ ಅವರೊಬ್ಬ ಮಹಾನ್ ವ್ಯಕ್ತಿ ಹಾಗೂ ದೇಶ ಕಂಡ ಒಬ್ಬ ಅಪರೂಪದ ನಾಯಕ. ದಲಿತರಿಗೆ ಮಾತ್ರವಲ್ಲದೆ ಎಲ್ಲಾ ಶೋಷಿತರಿಗೆ ಗೌರವ ತಂದುಕೊಡಲು ಪ್ರಯತ್ನಿಸಿದರು. ದೇಶದಲ್ಲಿ ಸಾಮಾಜಿಕ ಪುಟ 2ಕ್ಕೆ

**ಮೊದಲ ಪುಟದಿಂದ**

## ಏನು ಸಂಬಂಧ: ಎಚ್‌ಡಿಕೆ ತಿರುಗೇಟು

ಸಿದ್ದರಾಮಯ್ಯ ತಲೆಯಲ್ಲಿ ಇರುವುದು ಸಮಾಜದಲ್ಲಿ ಘರ್ಷಣೆ ಉಂಟು ಮಾಡುವುದಷ್ಟೆ. ಕಳೆದ 10 ವರ್ಷಗಳಿಂದ ಅಹಿಂದ ಹೆಸರಿನಲ್ಲಿ ಸಿದ್ದರಾಮಯ್ಯ ಮಜಾ ಮಾಡಿದ್ದಾರೆ. ಅವರಿಂದ ಅಹಿಂದಕ್ಕೆ ಸಿಕ್ಕ ಕೊಡುಗೆ ಏನು? ಅಹಿಂದ ಸಮಸ್ಯೆ ಎಷ್ಟು ಬಗೆಹರಿಸಿದ್ದಾರೆ? ಅಹಿಂದಲ್ಲಿ ಅನೇಕ ಸಣ್ಣ ಜಾತಿಗಳಿವೆ. ಆ ಸಮಾಜಗಳಿಗೆ ಅವರ ಕೊಡುಗೆ ಏನು? ಅವರು ಯಾರಿಗೆ ಆದ್ಯತೆ ಕೊಟ್ಟಿದ್ದಾರೆಯೇ ಎಂದು ಪ್ರಶ್ನಿಸಿದರು.

ಸಂಬಂಧಿಕರ ಜೊತೆ ರಕ್ತದೋಕುಳಿ ನಡೆಸುವುದು ಬೇಡ ಅನ್ನುವುದು ಭಗವದ್ಗೀತೆಯಲ್ಲಿದೆ. ಈ ಸರ್ಕಾರ ಕಾನೂನುಬಾಹಿರ ಚಟುವಟಿಕೆ ಬೆಂಬಲಿಸುತ್ತದೆ. ಇದರಿಂದ ಭಗವದ್ಗೀತೆ ಈ ಸಂದರ್ಭದಲ್ಲಿ ಅವಶ್ಯವಿದೆ ಎಂದು ನಾನು ಪ್ರತಿಪಾದಿಸಿದ್ದೇನೆ ಎಂದರು.

ಇಲ್ಲಸಲ್ಲದ ಆರೋಪ ಮಾಡಿ ಸಿದ್ದರಾಮಯ್ಯ ಅವರನ್ನು ಕೆಳಗಿಳಿಸುವ ಕೆಲಸ ಆಗುತ್ತಿದೆ ಎಂಬ ಶಾಸಕ ಯತೀಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲಿ ಸಿದ್ದರಾಮಯ್ಯ ಅವರು ನಡೆದು ಬಂದ ಹಿನ್ನೆಲೆ ಏನು? ಈ ಮಟ್ಟಕ್ಕೆ ಅವರು ಬರಲು ಯಾರು ಕಾರಣ? ಇವರಿಗೆ ಯಾರಿಂದ ತೊಂದರೆಯಾಗಿದೆ? ಅವೆಲ್ಲವನ್ನೂ ಸಹ ಅವರು ಹೇಳಬೇಕು. ಯತೀಂದ್ರ ನಿನ್ನೆ ಮೊನ್ನೆಯಷ್ಟೇ ಬಂದಿದ್ದಾರೆ, ಅವರಿಗೆ ಇತಿಹಾಸ ಗೊತ್ತಿಲ್ಲ ಎಂದು ಕುಮಾರಸ್ವಾಮಿ ಟೀಕಿಸಿದರು.

### ಭೂ ಗ್ಯಾರಂಟಿ ಯೋಜನೆ ಜಾರಿ

ನಮ್ಮ ಸರ್ಕಾರ ಸಾಕ್ಷಿಗುಡ್ಡೆಗಳನ್ನು ನೀಡಲಿದೆ. ಕೊಟ್ಟ ಮಾತಿನಂತೆ 1 ಲಕ್ಷ ಕೋಟಿ ಅನ್ನು ಜನರ ಖಾತೆಗಳಿಗೆ ಕೊಡಲಾಗಿದೆ. ಇಂಧನ ಇಲಾಖೆಯಿಂದ ಪಂಪ್‌ಸೆಟ್‌ಗಳಿಗೆ ವರ್ಷಕ್ಕೆ 20 ಸಾವಿರ ಕೋಟಿ ಕೊಡಲಾಗುತ್ತಿದೆ ಎಂದು ಹೇಳಿದರು. ನಮ್ಮದು ಅಭಿವೃದ್ಧಿ ಪರ ಸರ್ಕಾರ. ವಿಜಯಪುರದಲ್ಲಿ 1.11 ಲಕ್ಷ ಜನರಿಗೆ ಹಕ್ಕುಪತ್ರ ಕೊಡಲಾಗಿತ್ತು. ಅದೇ ಕೆಲಸವನ್ನು ಹಾಸನದಲ್ಲಿಯೂ ಮಾಡಲಾಗಿದೆ. 142 ಭರವಸೆಗಳನ್ನು ಈಡೇರಿಸಿದ್ದೇವೆ. ರಾಜ್ಯದ ಜನತೆಯ ಕಲ್ಯಾಣದ ಕೆಲಸ ಮುಂದುವರಿಯಲಿದೆ ಎಂದರು. ಕೃಷ್ಣ ಬೈರೇಗೌಡರ ಕಾರ್ಯವೈಖರಿ ಯಿಂದ ಭೂ ಗ್ಯಾರಂಟಿ ಯೋಜನೆಯನ್ನು ಸಮರ್ಪಕ ಜಾರಿ ಮಾಡಲಾಗುತ್ತಿದೆ. ಹಾಸನಾಂಬೆ ದರ್ಶನ ವ್ಯವಸ್ಥೆಗೆ ಕೃಷ್ಣ ಬೈರೇಗೌಡರು ಹೊಸ ರೂಪ ನೀಡಿದರು. ಹಾಸನಾಂಬೆಯ ದರ್ಶನ ಪಡೆದಿದ್ದು, ಅರಸೀಕೆರೆಯ ಜೇನುಕಲ್ಲು ಸಿದ್ದೇಶ್ವರ ಸ್ವಾಮಿಗೆ ನಮಸ್ಕಾರ ಸಲ್ಲಿಸುತ್ತೇನೆ ಎಂದರು.

### ಎಚ್‌ಡಿಕೆ ಕೊಡುಗೆ ಏನು?

ನಿರ್ಣಯ ಮಂಡಿಸುವ ಕುರಿತು ಮಾತನಾಡುತ್ತಿವೆ. ನಾವು ಯಾವುದೇ ಸವಾಲು ಎದುರಿಸಲಿದ್ದೇವೆ. ನಮ್ಮ ಸರ್ಕಾರ ಪರದರ್ಶಕ ಆಡಳಿತ ನೀಡುತ್ತಿದೆ. ನವೆಂಬರ್, ಡಿಸೆಂಬರ್ ಕ್ರಾಂತಿ ಎಂಬುದಿಲ್ಲ. ಕಾಂಗ್ರೆಸ್ ಹೈಕಮಾಂಡ್ ತೀರ್ಪಿಗೆ ನಾನು ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬದ್ಧರಾಗಿದ್ದೇವೆ ಎಂದು ಸಿದ್ದರಾಮಯ್ಯ ಪುನರುಚ್ಚರಿಸಿದರು.

### ಸಮಾನತೆಗಾಗಿ ಗ್ಯಾರಂಟಿ ಜಾರಿ

ಪ್ರಶ್ನಿಸಿದರು. ಗ್ಯಾರಂಟಿ ಸರಿಯಲ್ಲ ಎಂದು ಹೇಳುವವರಿಗೆ ಜನರೇ ಉತ್ತರ ಕೊಡಬೇಕು. 1 ಲಕ್ಷ ಕೋಟಿಯನ್ನು ಖರ್ಚು ಮಾಡುತ್ತಿರುವುದು ಅಸಮಾನತೆಯನ್ನು ನಿವಾರಿಸುವುದಕ್ಕಾಗಿ. ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರನ್ನು ನೆನೆಯೋಣ. ಅಸಮಾನತೆ ತೊಡದು ಹಾಕುವ ಕೆಲಸ ಮಾಡೋಣ. ನಮ್ಮದು ಸಂವಿಧಾನದ ಪರವಾಗಿರುವ ಸರ್ಕಾರ ಎಂದು ಹೇಳಿದರು. ಡಾ.ಅಂಬೇಡ್ಕರ್ ಅವರು ದೇಶಕ್ಕೆ ಸಂವಿಧಾನ ಕೊಟ್ಟರು. ಸಮಾನತೆ, ಭ್ರಾತೃತ್ವ, ಸಮಸಮಾಜ ನಿರ್ಮಾಣ ಮಾಡಬೇಕು. ಎಲ್ಲರಿಗೂ ಸಮಾನ ಅವಕಾಶ, ಸಮಾನ ಹಕ್ಕುಗಳನ್ನು ಕೊಡಬೇಕು ಎಂದು ಅವರು ಹೇಳಿದ್ದರು. ಸಮಾನ ಅವಕಾಶ ಇಲ್ಲದಿದ್ದರೆ, ದೇಶಕ್ಕೆ ಸ್ವಾತಂತ್ರ್ಯ ಬಂದರೂ ಸಾರ್ಥಕವಾಗಲ್ಲ. ಕೇವಲ ರಾಜಕೀಯ ಸ್ವಾತಂತ್ರ್ಯ ಬಂದರೆ ಸಾಲದು ಎಂದು ಪ್ರತಿಪಾದಿಸಿದ್ದರು. ಅದಕ್ಕೆ ಅನುಗುಣವಾಗಿ ಎಲ್ಲ ಜಾತಿ, ಧರ್ಮಗಳ ಬಡವರಿಗೆ ಗ್ಯಾರಂಟಿಗಳನ್ನು ಜಾರಿ ಮಾಡಲಾಗಿದೆ ಎಂದು ಸಿಎಂ ತಿಳಿಸಿದರು. ಹಾಸನ ನಮಗೆ ಪಕ್ಕದ ಜಿಲ್ಲೆ. ಇಲ್ಲಿನ ರಾಜಕೀಯ, ಸಂಸ್ಕೃತಿ ನನಗೆ ಗೊತ್ತು. ಅನೇಕ ಸಮಸ್ಯೆಗಳಿಗೆ ಪರಿಹಾರ ನೀಡುವ ಕೆಲಸ ಮಾಡಲಾಗುತ್ತಿದೆ. ಚುನಾವಣೆಯಲ್ಲಿ 492 ಭರವಸೆ ನೀಡಿದ್ದೇವು. ಎರಡೂವರೆ ವರ್ಷದಲ್ಲಿ 242 ಭರವಸೆಗಳನ್ನು ಈಡೇರಿಸಿದ್ದೇವೆ. ಇಲ್ಲಿಯವರೆಗೆ ನೀಡಿರುವ ಎಲ್ಲ ಭರವಸೆಗಳನ್ನು ಈಡೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇವೆ. ಕೊಟ್ಟ ಮಾತಿನಂತೆ ನಡೆದುಕೊಂಡ ಸರ್ಕಾರ ಇದ್ದರೆ ಅದು ಕಾಂಗ್ರೆಸ್ ಸರ್ಕಾರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

### 5ನೇ ದಿನವೂ ಹಾರಾಡದ ಇಂಡಿಗೊ

ಡಿಜಿಸಿಎ ಕ್ರಮದಿಂದ ನಿಯಂತ್ರಕ ಸಮಾನತೆಯನ್ನು ನಾಶಪಡಿಸುವುದಲ್ಲದೆ, ಲಕ್ಷಾಂತರ ಪ್ರಯಾಣಿಕರನ್ನು ಹೆಚ್ಚಿನ ಅಪಾಯಕ್ಕೆ ಸಿಲುಕಿಸಿದೆ ಎಂದು ಕಿಡಿಕಾರಿದೆ.

### ಬಿಜೆಪಿ ಬೆದರಿಕೆ ತಂತ್ರ

ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕ ಸಂಬಂಧಿಸಿದಂತೆ ಡಿಕೆ ಸಹೋದರರಿಗೆ ದೆಹಲಿ ಪೊಲೀಸರು ನೋಟಿಸ್ ನೀಡಿರುವುದು 'ವಿಶ್ವದಲ್ಲೇ ವಿಶಿಷ್ಟ ಪ್ರಕರಣ' ಎಂದು ವ್ಯಂಗ್ಯವಾಡಿದರು.

### ಎಚ್‌ಡಿಕೆ ಮನುವಾದಿ

ಏನು ಅನಿಸಿದೆಯೋ ಅದನ್ನ ಕೇಂದ್ರಕ್ಕೆ ಬರೆದಿದ್ದಾರೆ. ಅದೆಲ್ಲ ಕೇಂದ್ರ ಸರ್ಕಾರಕ್ಕೆ ಬಿಟ್ಟ ವಿಚಾರ ಎಂದು ಹೇಳಿದರು.

# ಪರಿನಿಬ್ಬಾಣ ದಿನ: ಅಂಬೇಡ್ಕರ್ ಅವರಿಗೆ ಗೌರವ ನಮನ



ಎಚ್.ಡಿ.ಕೋಟೆ: ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಆವರಣದಲ್ಲಿ ಇರುವ ಅಂಬೇಡ್ಕರ್ ಅವರ ಪುತ್ಥಳಿಗೆ ಅಧಿಕಾರಿಗಳು ಹಾಗೂ ಮುಖಂಡರು ಮಾಲಾರ್ಪಣೆ ಮಾಡಿ, ವೇದಿಕೆ ಮೇಲೆ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಿದರು.

ತಹಸಿಲ್ದಾರ್ ಶ್ರೀನಿವಾಸ್ ಮಾತನಾಡಿ, ಈ ದೇಶದ ಸರ್ವ ಜಾತಿ, ಜನಾಂಗ, ಧರ್ಮ, ಪಂಗಡ ಭಾಷೆಗಳನ್ನ ಸಂವಿಧಾನದ ಮೂಲಕ ಒಂದುಗೂಡಿಸಿದ ಮಹಾನ್ ಚೇತನ ಡಾ.ಬಿ.ಆರ್.ಅಂಬೇಡ್ಕರ್ ಅವರು. ಈ ದೇಶಕ್ಕೆ ಕೊಟ್ಟ ಸಂವಿಧಾನದ ಫಲವಾಗಿಯೇ ಇಂದು ಎಲ್ಲ ಜಾತಿ ಜನಾಂಗವು ತಹಸಿಲ್ದಾರ್, ಎಸಿ, ಡಿಸಿ, ಶಾಸಕ, ಸಂಸದ, ಮಂತ್ರಿ, ಮುಖ್ಯಮಂತ್ರಿ, ಪ್ರಧಾನಿ ಆಗಲು ಸಾದ್ಯವಾಗಿದೆ. ಅದ್ದರಿಂದ, ಇಂತಹ ಮಹಾನ್ ನಾಯಕನನ್ನ ಪ್ರತಿನಿತ್ಯವೂ ಸ್ಮರಿಸಿಕೊಳ್ಳುವ ಜವಾಬ್ದಾರಿ ಅರಿಯಬೇಕಾಗಿದೆ ಎಂದು ತಿಳಿಸಿದರು.

ಬಿಇಒ ಸಿ.ರಾಜು ಮಾತಾನಾಡಿ, ಜಗತ್ತಿನಲ್ಲೇ ಅತ್ಯಂತ ಶ್ರೇಷ್ಠ ಸಂವಿಧಾನ ಭಾರತ ಸಂವಿಧಾನ.ಈ ಸಂವಿಧಾನದ ಕರ್ತೃ ಬಾ.ಬಾ ಸಾಹೇಬ್ ಅಂಬೇಡ್ಕರ್. ಇಂತಹ ಶ್ರೇಷ್ಠ ಸಾಧಕನನ್ನ ಇಡಿ ಜೀವ ಸಂಕುಲವೇ ನೆನೆಸಿಕೊಳ್ಳಬೇಕು ಅವರ ಕೊಡುಗೆಯಿಂದ ನಾವು ಇಂದು ಪಡೆಯುತ್ತಿರುವ ಹಕ್ಕು, ಅಧಿಕಾರಿ, ಅವಕಾಶ, ಹುದ್ದೆ, ಆಸ್ತಿ ಅಂತಸ್ತು ಗಳನ್ನ ಪಡೆಯಲು ಸಾಧ್ಯವಾಗಿದೆ. ಇಂತಹ ಮಹನೀಯ ನಿಬ್ಬಾಣ ಹೊಂದಿದ ಈ ದಿನವನ್ನ ನೆನಪಿಸಿಕೊಂಡರೆ ಕಣ್ಣೀರು ಬರುತ್ತದೆ. ನಾವು ಅವರ ಆದರ್ಶ, ತತ್ವಗಳನ್ನ ಅನುಸರಿಸಬೇಕಾಗಿದೆ ಎಂದು ಹೇಳಿದರು.

ಮುದ್ದುಮಲ್ಲಯ್ಯ, ಶಿವಯ್ಯ, ಎಂ. ಡಿ.ಮಂಚಯ್ಯ, ಕಾಡುಮನೆ ಪ್ರಸನ್ನ, ಕುರ್ಣೆಗಾಲ ಬೆಟ್ಟಸ್ವಾಮಿ ಸೇರಿದಂತೆ ಅನೇಕರು ಬಾ.ಬಾ ಸಾಹೇಬ್ ಅಂಬೇಡ್ಕರ್ ಅವರ ಕುರಿತಾಗಿ ಮಾತಾನಾಡಿದರು.

ಆದಿಕರ್ನಾಟಕ ಮಹಾ ಸಭಾ ಮಾಜಿ ಅಧ್ಯಕ್ಷರಾದ ಎಚ್.ಸಿ. ನರಸಿಂಹ ಮೂರ್ತಿ, ಮುಖಂಡರಾದ ಮುದ್ದು ಮಲ್ಲಯ್ಯ, ಸೋಗಹಳ್ಳಿ ಶಿವಣ್ಣ, ಜೀವಿಕ ಸಂಚಾಲಕ ಉಮೇಶ್, ಮುಖಂಡರಾದ ಜೀವಿಕ ಬಸವರಾಜು, ಚಾ.ನಂಜುಂಡ ಮೂರ್ತಿ, ಮಲಾರ ಪುಟ್ಟಯ್ಯ, ಹೈರಿಗೆ ಮಲ್ಲೇಶ್, ಪರಶಿವ ಮೂರ್ತಿ, ಶಿವಯ್ಯ, ಸೌಮ್ಯ ಮಂಜುನಾಥ್, ಅನುಷ, ನಂಜಪ್ಪ, ಪ್ರೇಮ್ ಸಾಗರ್, ಪುಟ್ಟಮಾದು, ಕುಮಾರ್, ಸದಾಶಿವ, ಸಣ್ಣ ಕುಮಾರ್, ಇಒ ಧರಣೇಶ್, ಟಿಎಚ್‌ಒ ಡಾ ರವಿಕುಮಾರ್, ಬಿಇಒ ರಾಜು, ಅಬಕಾರಿ ನಿರೀಕ್ಷಕ ಶಿವರಾಜ್, ಬೆಟ್ಟಸ್ವಾಮಿ, ಚಂದ್ರಶೇಖರ ಮೂರ್ತಿ, ನಟರಾಜ್, ತೇಜು ಗುರುಮಲ್ಲು, ಚಲುವರಾಜ್, ನೆನಪು ರವಿ ಸೇರಿದಂತೆ ಅಧಿಕಾರಿಗಳು ಭಾಗವಹಿಸಿದ್ದರು.

> ಇಂದು ಇಡಿ ವಿಶ್ವವೇ ಅಂಬೇಡ್ಕರ್ ಅವರನ್ನ ನೆನಪಿಸಿಕೊಳ್ಳುತ್ತದೆ. ಆದರೆ, ಭಾರತದಲ್ಲಿ ಕೆಲವೇ ಜಾತಿ, ಜನಾಂಗದವರು ಅಂಬೇಡ್ಕರ್ ಜಯಂತಿ ಆಚರಿಸಿ ಅವರನ್ನ ಇಂದು ಜಾತಿಗೆ ಸೀಮಿತ ಮಾಡಿರುವುದು ಬೇಸರದ ಸಂಗತಿ.
>
> **ಹೈರಿಗೆ ಶಿವರಾಜು** ತಾಲೂಕು ಅಧ್ಯಕ್ಷ, ಆದಿ ಕರ್ನಾಟಕ ಮಹಾಸಭಾ.

**ಮೊದಲ ಪುಟದಿಂದ**

## ಭೂ ಮಾಲೀಕತ್ವ ಖಚಿತ ಗ್ಯಾರಂಟಿ

ಜಿಲ್ಲೆಯ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ. 94 ಸಿ ಅಡಿ ಹಕ್ಕುಪತ್ರ, ಕೃಷಿ, ತೋಟಗಾರಿಕೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸೌಲಭ್ಯಗಳನ್ನು ನೀಡಲಾಗುತ್ತಿದೆ. ವಿಮಾನ ನಿಲ್ದಾಣ ಕಾಮಗಾರಿ ಅರ್ಧಕ್ಕೆ ನಿಂತಿದೆ. ಅದಕ್ಕೆ ಮುಕ್ತಿ ನೀಡಬೇಕು. ಹೇಮಾವತಿ ನಾಲೆಗಳ ಆಧುನೀಕರಣಕ್ಕೆ ಒತ್ತು ನೀಡಬೇಕು. ಹಂತಹಂತವಾಗಿ ಆದರೂ ಕೆಲಸ ಕೈಗೆತ್ತಿಕೊಳ್ಳಲಾಗುವುದು ಎಂದು ಅವರು ಭರವಸೆ ನೀಡಿದರು. ಹಾಸನ ರಾಜಕೀಯವಾಗಿ ಪ್ರಭಾವ ಹಾಗೂ ಮಹತ್ವ ಹೊಂದಿರುವ ಜಿಲ್ಲೆ. ಘಟಾನುಘಟಿ ರಾಜಕಾರಣಿಗಳ ತವರೂರು. ಈ ಜಿಲ್ಲೆಯವರೇ ಸಚಿವರಾಗಬೇಕು ಎಂಬ ಕೂಗು ಇದೆ. ಇದಕ್ಕೆ ಅವಕಾಶ ಮಾಡಿಕೊಡಬೇಕು ಎಂದರು.

### ಸಂವಿಧಾನ ಕೊಟ್ಟ ಅಂಬೇಡ್ಕರ್

ನ್ಯಾಯ ಸಿಗದವರ ಪರವಾಗಿ ಹೋರಾಟ ಮಾಡಿದವರು ಎಂದು ಹೇಳಿದರು. ಶಾಲಾ, ಕಾಲೇಜು ಮಕ್ಕಳಿಗೆ ಇದರ ಅರಿವು ಮೂಡಿಸಲು ಸಂವಿಧಾನ ಪೀಠಿಕೆಯನ್ನು ನಿತ್ಯ ಬೋಧಿಸಲಾಗುತ್ತಿದೆ. ಸಂವಿಧಾನವು ಪ್ರತಿಯೊಬ್ಬರಿಗೂ ಹಕ್ಕು ಮತ್ತು ಬಾಧ್ಯತೆಗಳನ್ನು ನೀಡಿದೆ. ಸಂವಿಧಾನದ ಧ್ಯೇಯೋದ್ದೇಶಗಳು ಎಲ್ಲರಿಗೂ ಅರ್ಥವಾಗಬೇಕು ಎಂಬ ಕಾರಣದಿಂದ ಸರ್ಕಾರ ಇದನ್ನು ಜಾರಿ ಮಾಡಿದೆ ಎಂದು ತಿಳಿಸಿದರು.

ಅಂಬೇಡ್ಕರ್ ಪರಿನಿರ್ವಾಣ ದಿನದಂದು ನಾವು ಅವರನ್ನು ಸ್ಮರಿಸುವ ಕೆಲಸವನ್ನು ಮಾಡಿದ್ದೇವೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಕೊನೆಯ ದಿನಗಳಲ್ಲಿ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಹುಟ್ಟುವಾಗ ಹಿಂದೂವಾಗಿದ್ದೆ, ಸಾಯುವಾಗ ಹಿಂದೂವಾಗಿ ಸಾಯಲಾರೆ ಎಂದಿದ್ದರು. ಹಿಂದೂ ಧರ್ಮದ ಸುಧಾರಣೆಗೆ ಪ್ರಯತ್ನಪಟ್ಟು, ಅದು ಸಾಧ್ಯವಾಗದ ಹಿನ್ನೆಲೆಯಲ್ಲಿ ಬೌದ್ಧ ಧರ್ಮ ಸ್ವೀಕರಿಸಿದ್ದೇನೆ ಎಂದೂ ಹೇಳಿದ್ದರು. ಹಿಂದೂ ಧರ್ಮದಲ್ಲಿರುವ ಸಾಮಾಜಿಕ ವ್ಯವಸ್ಥೆಗೆ ರೋಸಿಹೋಗಿ ಹೀಗೆ ಮಾಡಿದ್ದರು ಎಂದು ಸಿಎಂ ಅಭಿಪ್ರಾಯಪಟ್ಟರು.

### ನೋಟಿಸ್ ನೀಡಿದರೂ ಹೆದರಲ್ಲ

ಸ್ಪಷ್ಟಪಡಿಸಿದರು. ಇದಕ್ಕೆ ಪೊಲೀಸ್ ಪ್ರಕರಣದ ಅಗತ್ಯವಿಲ್ಲ. ಈ ಪ್ರಕರಣದಲ್ಲಿ ತಮಗೆ ಇಡಿ ನೋಟಿಸ್ ಬಂದ ಕೂಡಲೇ ಅಗತ್ಯವಿರುವ ಎಲ್ಲ ಮಾಹಿತಿ ಹಾಗೂ ಉತ್ತರಗಳನ್ನು ಈಗಾಗಲೇ ನೀಡಲಾಗಿದೆ. ಚಾರ್ಜ್‌ಶೀಟ್ ಕೂಡ ಸಲ್ಲಿಕೆಯಾಗಿದೆ. ಇದೀಗ ದೆಹಲಿ ಪೊಲೀಸರು ಈ ತಿಂಗಳ 19ರೊಳಗೆ ಬಂದು ಮಾಹಿತಿ ನೀಡುವಂತೆ ತಿಳಿಸಿದ್ದಾರೆ. ಇದನ್ನು ಕಾನೂನಾತ್ಮಕವಾಗಿ ಪರಿಶೀಲಿಸುವುದಾಗಿ ಡಿಕೆ ಶಿವಕುಮಾರ್ ಹೇಳಿದರು.

ಈ ಬೆಳವಣಿಗೆಯನ್ನು ಕಿರುಕುಳ ನೀಡುವ ಯತ್ನ ಎಂದು ಬಣ್ಣಿಸಿರುವ ಅವರು, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಅವರ ಬೆಂಬಲಿಗರಿಗೆ ಕಿರುಕುಳ ನೀಡಲು, ಗೊಂದಲ ಸೃಷ್ಟಿಸಲು ಪ್ರಯತ್ನಿಸುತ್ತಿದ್ದಾರೆ. ನನಗೆ ನಿನ್ನೆ ನೊಟೀಸ್ ಬಂದಿದೆ, ನನ್ನ ಸೋದರ ಡಿಕೆ ಸುರೇಶ್ ಅವರಿಗೂ ನೋಟಿಸ್ ಬಂದಿದೆ ಎಂದು ತಿಳಿಸಿದರು.

### ಸುಪ್ರಿಯಾ ಖಾಸಗಿ ಮಸೂದೆ

ಕಾನೂನಿನ ಪ್ರಸ್ತಾವನೆಯಾಗಿರುತ್ತದೆ. ಸಂಸತ್ ಸದಸ್ಯರು ಮಂಡಿಸುವ ಈ ಮಸೂದೆಯನ್ನು ಅಂಗೀಕರಿಸುವ ಪ್ರಕ್ರಿಯೆಯಲ್ಲಿ ಸರ್ಕಾರಿ ಮಸೂದೆಯಂತೆಯೇ ಅಂಗೀಕರಿಸಬೇಕಾಗುತ್ತದೆ.

# ಅಂಬೇಡ್ಕರ್ ಆದರ್ಶ ಮತ್ತು ವ್ಯಕ್ತಿತ್ವ ನಮಗೆಲ್ಲ ಪ್ರೇರಣೆ: ಶಾಸಕ ತನ್ವೀರ್



ಮೈಸೂರು:ಡಾ.ಬಿ.ಆರ್.ಅಂಬೇಡ್ಕರ್ ಭೌತಿಕವಾಗಿ ನಮ್ಮ ಜೊತೆ ಇಲ್ಲದೆ ಇರಬಹುದು. ಆದರೆ ಅವರು ನಡೆದುಬಂದ ಹಾದಿ, ಅವರ ಆದರ್ಶ ಹಾಗೂ ವ್ಯಕ್ತಿತ್ವ ನಮಗೆಲ್ಲರಿಗೂ ಇಂದಿಗೂ ಪ್ರೇರಣೆಯಾಗಿದೆ ಎಂದು ಶಾಸಕ ತನ್ವೀರ್ ಸೇಠ್ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಮಾಜ ಕಲ್ಯಾಣ ಇಲಾಖೆ ಹಾಗೂ ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ ರಾಷ್ಟ್ರ ನಾಯಕರಾದ ಡಾ.ಬಿ.ಆರ್.ಅಂಬೇಡ್ಕರ್ 69ನೇ ಮಹಾ ಪರಿನಿರ್ವಾಣ ಕಾರ್ಯಕ್ರಮದ ಪ್ರಯುಕ್ತ ಟೌನ್ ಹಾಲ್ ಆವರಣದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡುವುದರ ಮೂಲಕ ನಮನ ಸಲ್ಲಿಸಿ ಮಾತನಾಡಿದರು. ಭಾರತದ ಎಲ್ಲಾ ವರ್ಗದ ಜನರಿಗೆ ಸಮಾನತೆಯನ್ನು ಸಾರುವ ಸಂವಿಧಾನವನ್ನು ಕೊಟ್ಟಿರುವವವರು ಬಾಬಾ ಸಾಹೇಬ್ ಅಂಬೇಡ್ಕರ್ ಅವರು. ಅವರು ಇಂದು ಅಂಬೇಡ್ಕರ್ ಅವರು ಕಟ್ಟಕಡೆಯ ಭಾರತೀಯನಿಗೂ ಸಿಗದೆ ಇರುವ ಸಮಾನತೆ ಎಂಬ ಶಕ್ತಿಯನ್ನು ಸಂವಿಧಾನದ ಮೂಲಕ ನೀಡಿದ್ದಾರೆ. ಸಂವಿಧಾನ ಆಶಯಗಳನ್ನು ಯಥಾ ವತ್ತಾಗಿ ಜಾರಿ ಮಾಡುವುದಕ್ಕೆ ಕರ್ನಾಟಕ ಸರ್ಕಾರ ಪ್ರತಿ ಶಾಲಾ ಕಾಲೇಜುಗಳಲ್ಲಿ , ಸಭೆ ಸಮಾರಂಭಗಳಲ್ಲಿ ಕಾರ್ಯಕ್ರಮಗಳಲ್ಲಿ ಬೋಧನೆ ಮಾಡಲಾಗುತ್ತಿದೆ. ಮೈಸೂರಿನಲ್ಲಿ ಅಂಬೇಡ್ಕರ್ ಭವನ ಆದಷ್ಟು ಬೇಗ ಲೋಕಾರ್ಪಣೆ ಯಾಗಲಿ ಎಂದು ಆಶಿಸಿದರು.

ಶಾಸಕ ಕೆ.ಹರೀಶ್ ಗೌಡ ಮಾತನಾಡಿ ಬಾಬಾ ಸಾಹೇಬ್ ಅಂಬೇಡ್ಕರ್ ಪರಿನಿರ್ವಾಣದ ದಿನವನ್ನು ಇಂದು ಭಾರತ ದೇಶದಾದ್ಯಂತ ಆಚರಣೆ ಮಾಡಲಾಗುತ್ತಿದ್ದು, ಅವರು ನೀಡಿರುವ ಸಂವಿಧಾನವನ್ನು ಭಾರತದ 140 ಕೋಟಿ ಜನರು ಅಳವಡಿಸಿಕೊಂಡು ಬದುಕುತ್ತಿದ್ದೇವೆ ಅವರ ತತ್ವಗಳೇ ನಮಗೆ ಆದರ್ಶ ಎಂದು ಹೇಳಿದರು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ ಅಂಬೇಡ್ಕರ್ ಬಿಟ್ಟು ಹೋದ ದಿನವನ್ನು ಪರಿನಿರ್ವಾಣ ದಿನ ಎಂದು ಗೌರವ ಸಮರ್ಪಣೆ ಮಾಡಲಾಗುತ್ತಿದ್ದು, ಅವರು ದಲಿತರಿಗೆ ಹಾಗೂ ಮಹಿಳೆಯರಿಗೆ ಸಮಾಜದಲ್ಲಿ ಸಮಾನ ಅವಕಾಶವನ್ನು ಕೊಟ್ಟಂತಹ ಮೇರು ವ್ಯಕ್ತಿತ್ವ ಅಂಬೇಡ್ಕರ್ ಅವರದ್ದು. ಅವರು ನಡೆದು ಬಂದ ಹಾದಿ ನಮಗೆಲ್ಲರಿಗೂ ಸ್ಪೂರ್ತಿದಾಯಕವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕಲ್ಯಾಣ ಶ್ರೀ ಬಂತೇಜಿ ಮಾತನಾಡಿ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆಗಳು, ತತ್ವಗಳು ಅವರು ನಡೆದು ಬಂದಂತಹ ಹಾದಿ ಎಲ್ಲರಿಗೂ ಸಹ ಅಮೂಲ್ಯವಾದದ್ದು, ಹಾಗೂ ಮಾರ್ಗದರ್ಶಕವಾಗಿದೆ. ಆಧುನಿಕ ಯುಗದಲ್ಲಿ ನಮಗೆ ಸಿಕ್ಕಂತಹ ಭಾಗ್ಯವಿದಾತರು ಹಾಗೂ ಜ್ಯಾತ್ಯಾತೀತವಾಗಿ ಧರ್ಮತೀತವಾಗಿ ಎಲ್ಲಾ ಜನಾಂಗವು ಒಪ್ಪಿಕೊಳ್ಳಬಹುದಾದಂತಹ ರತ್ನ ಎಂದರೆ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಎಂದು ಹೇಳಿದರು. ಡಾ.ಕಲ್ಯಾಣ ಶ್ರೀ ಬಂತೇಜಿ, ಬೋಧಿ ರತ್ನ ಬಂತೇಜಿ ಹಾಗೂ ಬುದ್ಧ ಪ್ರಕಾಶ್ ಬಂತೇಜಿ ಬುದ್ಧ ವಂದನೆ, ಧರ್ಮ ವಂದನೆ ಹಾಗೂ ಸಂಘ ವಂದನೆಯನ್ನು ಭೋದಿಸಿದರು.ವಿಧಾನ ಪರಿಷತ್ ಸದಸ್ಯ ಮಂಜೇಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ್ ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಯುಕೇಶ್ ಕುಮಾರ್, ಮೈಸೂರು ಮಹಾನಗರ ಪಾಲಿಕೆಯ ಆಯುಕ್ತ ಶೇಕ್ ತನ್ವೀರ್ ಅಸೀಫ್, ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಮೈಸೂರು ವಿಶ್ವವಿದ್ಯಾಲಯದ ಕುಲಸಚಿವೆ ಸವಿತಾ, ಡಿಸಿಪಿ ಬಿಂದು ಮಣಿ, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಬಿ.ರಂಗೇಗೌಡ, ಸಹಾಯಕ ನಿರ್ದೇಶಕ ಜನಾರ್ಧನ್ ಉಪಸ್ಥಿತರಿದ್ದರು.

# ಜನವರಿ 1 ರಿಂದ ಚುಂಚನಕಟ್ಟೆ ಜಾತ್ರೆ

**ಜಾನುವಾರು ಮತ್ತು ರಥೋತ್ಸವಕ್ಕೆ ಆಗಮಿಸುವ ಭಕ್ತರಿಗೆ ಸೌಲಭ್ಯ ಕಲ್ಪಿಸಲು ಶಾಸಕ ರವಿಶಂಕರ್ ಸೂಚನೆ**



ಕೆ.ಆರ್.ನಗರ: ಇತಿಹಾಸ ಪ್ರಸಿದ್ಧ ಶ್ರೀರಾಮ ಚುಂಚನಕಟ್ಟೆ ಜಾನುವಾರುಗಳ ಜಾತ್ರೆ ಜನವರಿ ಒಂದರಿಂದ ಪ್ರಾರಂಭವಾಗಲಿದ್ದು ರಥೋತ್ಸವ ಜನವರಿ 16ರಂದು ನಡೆಯಲಿದೆ ಹಾಗಾಗಿ ಜಾನುವಾರುಗಳಿಗೆ ಮತ್ತು ರಥೋತ್ಸವಕ್ಕೆ ಆಗಮಿಸುವ ಭಕ್ತರಿಗೆ ಎಲ್ಲ ರೀತಿಯ ಸೌಲಭ್ಯ ಕಲ್ಪಿಸಬೇಕು ಎಂದು ತಾಲೂಕು ಆಡಳಿತಕ್ಕೆ ಶಾಸಕ ರವಿಶಂಕರ್ ಸೂಚಿಸಿದರು. ಶನಿವಾರ ಚುಂಚನಕಟ್ಟೆ ದೇವಸ್ಥಾನದ ಆವರಣದಲ್ಲಿ ನಡೆದ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜನವರಿ ಒಂದರಿಂದಲೇ ದೇವಸ್ಥಾನಕ್ಕೆ ವಿದ್ಯುತ್ ಅಲಂಕಾರ ಮಾಡಬೇಕು ಜಾನುವಾರುಗಳು ಬಿಡಾರಹೂಡುವ ಎಲ್ಲಾ ಕಡೆ ವಿದ್ಯುತ್ ವ್ಯವಸ್ಥೆ ಮಾಡಿ ಎಂದು ಚೆಸ್ಕಾಂ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು. ಕುಪ್ಪೆ ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ದೇವಸ್ಥಾನದ ಸುತ್ತ ಮತ್ತು ಜಾತ್ರೆ ಕಟ್ಟುವ ಸುತ್ತಮುತ್ತ ಸ್ವಚ್ಚತೆ ಮಾಡುವುದರ ಜೊತೆಗೆ ಜಾನುವಾರುಗಳಿಗೆ ಮತ್ತು ಜನರಿಗೆ ನೀರಿನ ವ್ಯವಸ್ಥೆ ಮಾಡಬೇಕು ಎಂದರು.

ಲೋಕಪಯೋಗಿ ಇಲಾಖೆ ಅಧಿಕಾರಿಗಳು ರಥೋತ್ಸವಕ್ಕೆ ಬೇಕಾಗುವ ಎಲ್ಲಾ ವ್ಯವಸ್ಥೆಗಳು ಮತ್ತು ಚುಂಚನಕಟ್ಟೆಗೆ ಬರುವ ಎಲ್ಲಾ ಗ್ರಾಮಗಳ ರಸ್ತೆಯ ಗುಂಡಿಗಳನ್ನು ಮುಚ್ಚಬೇಕು ಮತ್ತು ರಸ್ತೆ ಬದಿ ಗಿಡಗಂಟೆಗಳನ್ನ ತೆರವು ಮಾಡಬೇಕು. ಪೊಲೀಸ್ ಇಲಾಖೆ ಜೊತೆ ರಸ್ತೆ ಅಗಲೀಕರಣ ಮತ್ತು ತಿರುವುಗಳಲ್ಲಿ ರಸ್ತೆ ದಿಬ್ಬ ಹಾಕಬೇಕು. ಪ್ರತಿ ಕ್ರಾಸ್ ಗಳನ್ನು ವಾಹನಗಳಿಗೆ ಸಿಗ್ನಲ್ ತೋರಿಸುವ ರೀತಿಯಲ್ಲಿ ಯಾವುದೇ ಅಪಘಾತ ಸಂಭವಿಸದ ರೀತಿ ಸೂತನ ಫಲಕಗಳನ್ನು ಅಳವಡಿಸಿ ಎಂದರು.

ಪಶು ಇಲಾಖೆ ಅಧಿಕಾರಿಗಳು ಜಾತ್ರೆಯ ಆವರಣದ ಎರಡು ಕಡೆ ತಾತ್ಕಾಲಿಕ ಪಶು ಆಸ್ಪತ್ರೆಗಳನ್ನು ತೆರೆಯಬೇಕು. ಬೇಕಾಗುವ ಆರೋಗ್ಯಕರ ವ್ಯವಸ್ಥೆಯನ್ನು ಕಲ್ಪಿಸಬೇಕು ಜೊತೆಗೆ ವಿವಿಧ ಜಿಲ್ಲೆ ಮತ್ತು ಅಂತರ ಜಿಲ್ಲೆಗಳಿಂದ ಬರುವ ವಿವಿಧ ತಳಿಯ ಜಾನುವಾರುಗಳಿಂದ ಯಾವುದೇ ರೋಗಗಳು ಹರಡದಂತೆ ಮುನ್ನೆಚ್ಚರಿಕೆ ವಹಿಸಬೇಕು. ಇವರೊಂದಿಗೆ ಪ್ರಥಮಿಕ ಆರೋಗ್ಯ ಕೇಂದ್ರ ಸಿಬ್ಬಂದಿಗಳು ಸಹಕಾರ ನೀಡುವ ಮೂಲಕ ಪ್ರವಾಸಿ ಮಂದಿರದ ಆವರಣವನ್ನು ಜನರ ತಾತ್ಕಾಲಿಕ ಆಸ್ಪತ್ರೆಯಾಗಿ ಬಳಸಿಕೊಂಡು ಭಕ್ತರಿಗೆ ಮತ್ತು ರೈತರಿಗೆ ಯಾವುದೇ ರೀತಿ ತೊಂದರೆ ಆಗದ ರೀತಿಯಲ್ಲಿ ಆರೋಗ್ಯದ ವ್ಯವಸ್ಥೆ ಕಲ್ಪಿಸಬೇಕು ಎಂದು ತಾಲೂಕು ಆರೋಗ್ಯ ಆಡಳಿತ ಮತ್ತು ಪಶು ವೈದ್ಯ ಅಧಿಕಾರಿಗಳಿಗೆ ತಿಳಿಸಿದರು.

ಅಬಕಾರಿ ಇಲಾಖೆ ಅಧಿಕಾರಿಗಳು ರಥೋತ್ಸವದ ದಿನ ಚುಂಚನಕಟ್ಟೆ ಮತ್ತು ಸಮೀಪ ಇರುವ ಎಲ್ಲಾ ಮದ್ಯದ ಅಂಗಡಿಗಳನ್ನು ಬಂದ್ ಮಾಡಿಸಬೇಕು ಜೊತೆಗೆ ಅಕ್ಕಪಕ್ಕ ಅಂಗಡಿಗಳಲ್ಲೂ ಮಾರಾಟ ಮಾಡುವವರ ಮೇಲೆ ಕಟ್ಟುನುಟ್ಟಿನ ಕ್ರಮ ಕೈಗೊಳ್ಳಬೇಕು. ಏಕೆಂದರೆ ಜಾತ್ರೆಗೆ ಲಕ್ಷಾಂತರ ಜನ ಭಕ್ತರು ಆಗಮಿಸುತ್ತಿದ್ದು ಅವರ ಹಿತದೃಷ್ಟಿ ಕಾಪಾಡುವುದು ನಮ್ಮೆಲ್ಲರ ಜವಾಬ್ದಾರಿ ಆಗಿದೆ ಹಾಗಾಗಿ ಪೊಲೀಸರ ಸಹಕಾರ ಪಡೆದು ಸೂಕ್ತ ವ್ಯವಸ್ಥೆ ಕಲ್ಪಿಸಿಕೊಳ್ಳಿ ಎಂದ ಅವರು ಕೆ ಎಸ್ ಆರ್ ಟಿ ಸಿ ಇಲಾಖೆಯವರು ಜಿಲ್ಲಾ ಸಾರಿಗೆ ಅಧಿಕಾರಿಗಳೊಂದಿಗೆ ಮಾತನಾಡಿ ಎಲ್ಲಾ ಜಿಲ್ಲೆಗಳಿಂದಲೂ ಜಾತ್ರೆಗೆ ಆಗಮಿಸುವ ಭಕ್ತರಿಗೆ ಅನುಕೂಲವಾಗುವ ರೀತಿಯಲ್ಲಿ ಸಾರಿಗೆ ವ್ಯವಸ್ಥೆ ಮಾಡಿಸಬೇಕು ಜೊತೆಗೆ ವಿಧಾನಸಭಾ ಕ್ಷೇತ್ರದಿಂದ ಆಗಮಿಸುವ ಭಕ್ತರಿಗೂ ಬಸ್ಸಿನ ವ್ಯವಸ್ಥೆಗಳು ಸಿಗುವಂತಾಗಬೇಕು ಎಂದರು.

ಕಳೆದ ಬಾರಿ ನಡೆದಂತೆ ಜಾತ್ರಾ ಮಹೋತ್ಸವ ಈ ಬಾರಿಯೂ ಸುರಕ್ಷಿತವಾಗಿ ನಡೆಯಬೇಕು ಹಾಗಾಗಿ ನಿಮ್ಮೆಲ್ಲರ ಸಲಹೆ ಸೂಚನೆ ಪಡೆಯಲು ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆ ನಡೆಸಲಾಗುತ್ತಿದೆ. ಯಾವುದೇ ಸಮಸ್ಯೆಗಳಿದ್ದರೂ ತಿಳಿಸಿ ಏಕೆಂದರೆ ಈ ಬಾರಿ ಜಾನುವಾರುಗಳ ಜಾತ್ರೆ ಮತ್ತು ರಥೋತ್ಸವ ವಿಜೃಂಭಣೆಯಿಂದ ಆಗಬೇಕು. ಕಾವೇರಿ ನದಿ ತೀರದಲ್ಲಿ ಯಾರು ಕೂಡ ನದಿಗೆ ಈಜಲು ಬಿಡದಂತೆ ಅಗ್ನಿಶಾಮಕ ದಳ ಸಿಬ್ಬಂದಿಗಳು ಎಚ್ಚರ ವಹಿಸಬೇಕು. ವಿವಿಧ ಇಲಾಖೆಗಳ ಸಹಕಾರ ಪಡೆದು ತಾತ್ಕಾಲಿಕ ಶೌಚಾಲಯ ಮತ್ತು ಡ್ರೆಸ್ ರೂಮ್ ಗಳನ್ನು ಭಕ್ತಾದಿಗಳಿಗೆ ಕಲ್ಪಿಸಿ ಎಂದರು. ತಹಸಿಲ್ದಾರ್ ರವರು ಎಲ್ಲಾ ಇಲಾಖೆಗಳ ಸಹಕಾರ ಪಡೆದು ಜಾತ್ರೆ ಸಿದ್ಧತೆ ಮಾಡಿಕೊಳ್ಳಿ. ದೇವಸ್ಥಾನದ ಒಳಗೆ ಮತ್ತು ಹೊರಗೆ ಆಗಬೇಕಾದ ಕೆಲಸ ಕಾರ್ಯಗಳನ್ನು ಕೂಡಲೇ ಪ್ರಾರಂಭಿಸಿ. ಭಕ್ತಾದಿಗಳಿಗೆ ರಥೋತ್ಸವದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಪ್ರಸಾದ ವಿನಿಯೋಗ ನಡೆಯಲಿದೆ. ಇನ್ನು ತುರ್ತಾಗಿ ಆಗಬೇಕಾದ ಕೆಲಸ ಕಾರ್ಯಗಳ ಬಗ್ಗೆ ಅಧಿಕಾರಿಗಳು ನೇರವಾಗಿ ಸಂಪರ್ಕಿಸಿ ಅದರೊಂದಿಗೆ ಚರ್ಚಿಸಿ ಎಲ್ಲ ರೀತಿಯ ವ್ಯವಸ್ಥೆ ಮಾಡಿಕೊಳ್ಳೋಣ. ತಾಲೂಕಿನ ಎಲ್ಲಾ ಜನರು ಯಾವುದೇ ಜಾತಿ ಭೇದ ಮತ್ತು ಪಕ್ಷಗಳನ್ನ ಮಾಡದೆ ಎಲ್ಲವನ್ನು ಬದಿಗೊತ್ತಿ ಶ್ರೀರಾಮ ದೇವರ ಜಾತ್ರಾ ಮಹೋತ್ಸವ ಮತ್ತು ಜಾನುವಾರಗಳ ಜಾತ್ರೆಯನ್ನು ನಡೆಸಲು ಮುಂದಾಗೋಣ ಎಂದು ಕರೆ ನೀಡಿದರು.

ಪೂರ್ವಭಾವಿ ಸಭೆಯಲ್ಲಿ ತಹಸಿಲ್ದಾರ್ ರುಕೀಯ ಬೇಗಂ, ಇಒ ರವಿಕುಮಾರ್, ಗ್ಯಾರಂಟಿ ಸಮಿತಿ ಅಧ್ಯಕ್ಷ ಉದಯಶಂಕರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂಎಸ್ ಮಹದೇವ್, ಎಸ್ ಸಿ ಘಟಕದ ಅಧ್ಯಕ್ಷ ಕಂಠಿಕುಮಾರ್, ವಕ್ತಾರ ಜಬೀರ್, ನಗರ ಅಧ್ಯಕ್ಷ ಪ್ರಭಾಕರ್, ಗ್ರಾಪಂ ಸದಸ್ಯ ಮಂಜುನಾಥ್, ಮಾಜಿ ಅಧ್ಯಕ್ಷೆ ಗೌರಮ್ಮ, ತೇಜೋಮೂರ್ತಿ, ಕೃಷಿ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ್, ಬಿಇಒ ಕೃಷ್ಣಪ್ಪ, ಹನಸೋಗೆ ನವೀನ್, ಪ್ರಸನ್ನ, ಚೆಲುವನಾಯಕ, ಕೃಷ್ಣನಾಯಕ, ಚಂದ್ರು, ಕೆಡಗ ನಟರಾಜ್, ಪರಮೇಶ್, ದೇವಸ್ಥಾನದ ಪಾಲ್ ಪತ್ತೆದಾರ ಯತಿರಾಜ್, ಪಿಡಿಒ ಚಿದಾನಂದ, ಬಲರಾಮ್ ಕುಪ್ಪೆ ಗ್ರಾಮ ಪಂಚಾಯಿತಿ ಆಡಳಿತ ಮಂಡಳಿ ಮತ್ತು ದೇವಸ್ಥಾನದ ಸಮಿತಿ ಅಧ್ಯಕ್ಷರು ಸದಸ್ಯರು ಹಾಗೂ ಸಿಬ್ಬಂದಿಗಳು ಸೇರಿದಂತೆ ಮುಖಂಡರು ಇದ್ದರು

# ಅಂಬೇಡ್ಕರ್ ಸರ್ವಕಾಲಿಕ ಸತ್ಯ




ಮೈಸೂರು: ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಸರ್ವಕಾಲಕ್ಕೂ ಸಲ್ಲಿಕೆಯಾಗುವ ಸತ್ಯವಾಗಿದ್ದಾರೆಂದು ಪ್ರೊ.ಪ್ರಸನ್ನ ಕೆರೆಗೋಡು ಅಭಿಪ್ರಾಯ ಪಟ್ಟರು.

ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ನಗರದ ಇಂದಿರಾ ಕಾಂಗ್ರೆಸ್ ಭವನದಲ್ಲಿ ಡಾ ಬಿ ಆರ್ ಅಂಬೇಡ್ಕರ್ ಅವರ 69ನೇ ನೇ ಪರಿನಿರ್ವಾಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಒಂದು ವರ್ಗದಲ್ಲಿ ಗುರುತಿಸಿಕೊಳ್ಳದೆ ಸಮಾಜದ ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಜ್ಞಾನ ಪ್ರೌಢಿಮೆಯನ್ನು ಹರಿಸಿದವರು ಎಂದು ಹೇಳಿ ಬಹಳಷ್ಟು ಜನರಿಗೆ ಅವರ ಕೊನೆಯ ದಿನಗಳ ಬಗ್ಗೆ ಭಿನ್ನ ಅಭಿಪ್ರಾಯಗಳಿದ್ದು ಅದನ್ನು ನಾವು ಅಧ್ಯಯನಗಳ ಮೂಲಕ ನಿವಾರಿಸಿಕೊಳ್ಳಬೇಕು ಎಂಬ ಸಲಹೆಯನ್ನು ನೀಡಿದರು. ಹಲೋ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕೊನೆಯ ದಿನಗಳಲ್ಲಿ ಅವರ ಆರೋಗ್ಯ ತೀರ ಹದಗೆಟ್ಟಿದ್ದರು ಕೂಡ ಅವರ ಚಿಂತನಾಶೀಲತೆ ಮತ್ತು ಉತ್ಸಾಹ ಭರಿತ ಆಲೋಚನೆಗಳು ಎಂದೂ ಕೂಡ ಕುಂದಿರಲಿಲ್ಲ ಎಂದು ಹೇಳಿ 1957ರ ಚುನಾವಣೆಗೆ ನಿಲ್ಲಲು ಚುರುಕಾದ ತಯಾರಿ ನಡೆಸಿದರು ಎಂಬ ಐತಿಹಾಸಿಕ ವಿಷಯವನ್ನು ಪ್ರಸ್ತುತಪಡಿಸಿದರು. 'ನಾನು ಈ ದೇಶದ ಭಾಗ ಅದರಲ್ಲೂ ಅವಿಭಾಜ್ಯ ಭಾಗ ನನ್ನನ್ನು ಯಾರು ಪಕ್ಕಕ್ಕೆ ಇಡುವ ಅವಶ್ಯಕತೆ ಇಲ್ಲ' ಎಂಬ ಹೇಳಿಕೆಯನ್ನು ನೀಡಿ ಇಂಗ್ಲಿಷ್ ನ ಅಪಾರ್ಟ್ ಅಪಾರ್ಟ್ ಎಂಬ ಪುಸ್ತಕದ ಉಲ್ಲೇಖವನ್ನು ನೀಡಿದರು.


ಇಂದಿನ ದಿನಮಾನಗಳಲ್ಲಿ ಹೆಚ್ಚು ಪ್ರಸ್ತುತವಿರುವ ದೃಶ್ಯ ಮಾಧ್ಯಮಗಳ ಮೂಲಕ ಅಂಬೇಡ್ಕರ್ ರವರ ಚಿಂತನೆಗಳನ್ನು ಒಳಗೊಂಡಂತಹ ಚಿತ್ರಗಳು ಮತ್ತು ಸರಣಿಗಳನ್ನು ಹೊರ ತರುವುದರಿಂದ ಸಮಾಜದ ಮೇಲೆ ಹೆಚ್ಚು ಪ್ರಭಾವ ಬೀರುತ್ತದೆ ಎಂದರು.

ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಮಾತನಾಡಿ, ತಾವು ಸಹ ಕೃಷ್ಣ ನೀ ಬೇಗನೆ ಬಾರೋ, ಭೂಮಿ ತಾಯಿಯ ಚೊಚ್ಚಲ ಮಗ ಹೀಗೆ ಹಲವಾರು ದಲಿತ ಮತ್ತು ಅಸ್ಪೃಶ್ಯದ ಕುರಿತಾದ ಸಿನಿಮಾಗಳನ್ನು ನಾನು ನಿರ್ದೇಶನ ಮಾಡಿದ್ದೇನೆ ಎಂದು ಹೇಳಿ ಬಾಬಾ ಸಾಹೇಬ್ ಅಂಬೇಡ್ಕರ್ ಈ ಭೂಮಿ ಇರುವವರೆಗೂ ಉಳಿಯುವಂತಹ ಮಹಾ ಚೇತನ ಎಂದು ನುಡಿದರು. 10 ಗಂಟೆಗಳ ಸಂವಿಧಾನಕ್ಕೆ ಸಂಬಂಧಪಟ್ಟ ಸಂಚಿಕೆಯನ್ನು ನಾನು ಸಿದ್ಧಪಡಿಸಿದ್ದೇನೆ. ಇದನ್ನು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಸಚಿವರು ಗಮನಕ್ಕೂ ತಂದಿದ್ದೇನೆ ಆದರೆ ಇದನ್ನು ಶಾಲಾ–ಕಾಲೇಜುಗಳಲ್ಲಿ ಪ್ರಸಾರ ಮಾಡಲು ಯಾವ ಸರ್ಕಾರಗಳು ಮೇಲಾಗಿ ಅಧಿಕಾರಿಗಳು ಇದಕ್ಕೆ ಬೆಂಬಲ ಹಾಗೂ ಗಮನ ಹರಿಸುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಮಾತನಾಡಿ ಈಗ ಭಾರತದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಗೆ ಅಲ್ಪ ಮಟ್ಟದ ಹಿನ್ನಡೆಯ ಆರಂಭವಾಗಿದೆ. ಇದು ಶಾಶ್ವತವದಂತ ಹಿನ್ನಡೆಯಲ್ಲ. ಆದರೆ ಕಾಂಗ್ರೆಸ್ಸಿಗರಾದ ನಾವು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಗಾಂಧಿಯ ಐಡಿಯಾಲಜಿ ಆಧಾರದ ಮೇಲೆ ಮತ್ತೆ ಕಾಂಗ್ರೆಸ್ ಕಟ್ಟುವ ದೊಡ್ಡ ನೈತಿಕ ಜವಾಬ್ದಾರಿ ಇದೆ. ಸೈಧ್ಯಾಂತಿಕ ಗಟ್ಟಿತನವಿಲ್ಲದ ಚುನಾವಣೆಗಳ ಗೆಲುವು ದೇಶವನ್ನು ಒಗ್ಗೂಡಿಸುವುದು ಅಸಾಧ್ಯ. ಯಾವ ರಾಜಕೀಯ ಪಕ್ಷಕ್ಕೆ ಆ ದೇಶದ ಸಂವಿಧಾನದ ವಿಚಾರವಾಗಿ ಅಸಹನೆ ಹೊಂದಿರುತ್ತೋ ಅಂತಹ ಸಂದರ್ಭದ ಆಡಳಿತದಲ್ಲಿ ಸಾಮಾಜಿಕ ಅಶಾಂತಿಯೇ ಮೇಲುಗೈ ಸಾಧಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಎಸ್ಸಿ ಘಟಕದ ಅಧ್ಯಕ್ಷ ರಮೇಶ್, ಸಿದ್ದರಾಜು, ಉಪಾಧ್ಯಕ್ಷ ಎಡತಲೆ ಮಂಜು ನಾಥ್, ಪ್ರಧಾನ ಕಾರ್ಯದರ್ಶಿ ಶಿವಪ್ರಸಾದ್, ಗಿರೀಶ್ ಪಿ.ತೊರೆ ಮಾವು, ಈಶ್ವರ್ ಎಕ್ಕಡಿ, ಮಾಜಿ ಮೇಯರ್ ಪುಷ್ಪಲತಾ ಚಿಕ್ಕಣ್ಣ, ಚಿಕ್ಕಣ್ಣ, ಮೋದಮಣಿ, ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳಾದ ಸುರೇಶ್ ಪಾಳ್ಯ, ಶಿವಶಂಕರಮೂರ್ತಿ, ಸಿದ್ದಯ್ಯ, ಮಹೇಶ್ ನಾಯಕ್, ಶಾಮ. ಯೋಗೇಶ್, ಎಂ.ಕೆ. ಅಶೋಕ್, ಮುರುಡೇಶ್, ರಾಮು, ಮೋಹನ್, ಸುಶೀಲಾ ಇತರರು ಭಾಗವಹಿಸಿದ್ದರು.

# 70ನೇ ಪರಿನಿರ್ವಾಣ ದಿನಾಚರಣೆ



ಚಾಮರಾಜನಗರ ಅಂಬೇಡ್ಕರ್ ನೀಡಿರುವ ಸಂವಿಧಾನದಿಂದ ವಿದ್ಯಾರ್ಥಿಗಳು ಉನ್ನತ ವ್ಯಾಸಂಗ ಮಾಡಲು ಸಾಧ್ಯವಾಗಿದೆ ಎಂದು ಶ್ರೀರಾಮಚಂದ್ರ ವಿದ್ಯಾಸಂಸ್ಥೆಯ ಅಧ್ಯಕ್ಷ ಎಂ.ಎಸ್.ಮಾದಯ್ಯ ತಿಳಿಸಿದರು.

ನಗರದ ನ್ಯಾಯಾಲಯ ರಸ್ತೆಯಲ್ಲಿ ಇರುವ ಶ್ರೀರಾಮಚಂದ್ರ ವಿದ್ಯಾ ಸಂಸ್ಥೆಯಲ್ಲಿ ಡಾ.ಬಿ.ಆರ್. ಅಂಬೇಡ್ಕರ್‌ರವರ 69ನೇ ಪರಿನಿರ್ವಾಣ ದಿನಚರಣೆ ಕಾರ್ಯಕ್ರಮದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭಾವಚಿತ್ರದ ಮುಂದೆ ಕ್ಯಾಂಡಲ್ ಬೆಳಗಿಸಿ ನಮನ ಸಲ್ಲಿಸಿದ ಬಳಿಕ ಮಾತನಾಡಿದರು. ನಮ್ಮದೇಶದಲ್ಲಿ ಡಾ,ಬಿ.ಆರ್.ಅಂಬೇಡ್ಕರ್ ಅವರನ್ನು ಪ್ರತಿಸುವ ವ್ಯಕ್ತಿಗಳು ಹೆಚ್ಚಾಗಿದ್ದಾರೆ. ಅವರು ಸರ್ವರಿಗೂ ನ್ಯಾಯವನ್ನು ಒದಗಿಸಿಕೊಟ್ಟಿದ್ದಾರೆ. ಅವರ ಚಿಂತನೆಗಳನ್ನು ವಿದ್ಯಾರ್ಥಿಗಳು ಅರಿತರೆ ಉತ್ತಮ ವಿದ್ಯಾಥಿಯಾಗಬಹುದು ಎಂದು ಹೇಳಿದರು.

ಸಂಸ್ಥೆಯ ಕಾರ್ಯದರ್ಶಿ ರುದ್ರಮೂರ್ತಿ ಮಾತನಾಡಿ ಡಾ.ಬಿ.ಆರ್.ಅಂಬೇಡ್ಕರ್ ಅವರು 'ಬುದ್ಧ ಮತ್ತು ಅವರ ಧಮ್ಮ' ಎಂಬ ಪುಸ್ತಕ ಬರೆಯುತ್ತಿದ್ದರು. ಪುಸ್ತಕವನ್ನು ಪೂರ್ಣಗೊಳಿಸಿದ ಕೆಲವೇ ದಿನಗಳಲ್ಲಿ ಅವರು ಕೊನೆಯುಸಿರೆಳೆದರು ಎಂದು ತಿಳಿಸಿದರು. ಮುಖ್ಯ ಶಿಕ್ಷಕಿ ರತ್ನಮ್ಮ, ದೈಹಿಕ ಶಿಕ್ಷಕ ರಂಗಸ್ವಾಮಿ, ಶಿಕ್ಷಕ ಕುಮಾರ್ ಯಶ್‌ಪಾಲ್, ಪರಶಿವಮೂರ್ತಿ, ಮಂಜುಳ ಇದ್ದರು

# ಸಮಾನತೆಗಾಗಿ ನಿರಂತರ ಹೋರಾಟ: ಭಾರ್ಗವ ಕೆಂಪರಾಜ್

ಗುಂಡ್ಲುಪೇಟೆ: ಅಂಬೇಡ್ಕರ್ ಸಮಾನತೆಗಾಗಿ ನಿರಂತರ ಹೋರಾಟ ನಡೆಸಿದರು ಎಂದು ನಿವೃತ್ತ ಪ್ರಾಂಶುಪಾಲರಾದ ನಾಟಕ ಭಾರ್ಗವ ಕೆಂಪರಾಜ್ ಅಭಿಪ್ರಾಯ ಪಟ್ಟರು.

ಅವರು ಮಾನವ ಬಂಧುತ್ವ ವೇದಿಕೆ ಹಾಗೂ ಚಿಜಲ ನರ್ಸಿಂಗ್ ಶಾಲೆಯ ಸಹಯೋಗದೊಂದಿಗೆ ನಡೆದ ಡಾ ಅಂಬೇಡ್ಕರ್ ರವರ 69 ನೇ ಪರಿ ನಿಬ್ಬಾಣ ದಿನದ ಆಚರಣೆ ಕಾರ್ಯಕ್ರಮದಲ್ಲಿ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು. ಸಮಾಜದಲ್ಲಿ ಅಸಮಾನತೆ ತಾಂಡವಾಡುತ್ತಿದೆ. ಇದರ ವಿರುದ್ಧ ಅಂಬೇಡ್ಕರ್ ರವರು ಬದುಕಿನ ಉದ್ದಕ್ಕೂ ಹೋರಾಟ ಮಾಡಿದ್ದಾರೆ. ಹಾಗೂ ಸಂವಿಧಾನದಲ್ಲಿ ನಿಯಮಗಳನ್ನು ರೂಪಿಸಿ ಪರಿಹಾರವನ್ನು ತೋರಿದ್ದಾರೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಿರಿಯ ಕನ್ನಡ ಪರ ಹೋರಾಟಗಾರ ಬ್ರಹ್ಮಾನಂದ ರವರು ಮಾತನಾಡಿ ಫಲಾಪೇಕ್ಷೆ ಇಲ್ಲದೆ ಭಾರತದ ಭವಿಷ್ಯ ಬರೆದವರು ಅಂಬೇಡ್ಕರ್ . ಹಾಗಾಗಿ ಅವರಿಗೆ ದೇಶದ ಜನತೆ ಅಪಾರ ಗೌರವವನ್ನು ಇಟ್ಟು ಕೊಂಡಿದೆ ಎಂದರು.

ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ಸುಭಾಷ್ ಮಾಡ್ರಹಳ್ಳಿ ರವರು ಅಂಬೇಡ್ಕರ್ ಗಳಿಸಿದ್ದ ಅಪಾರ ಪಾಂಡಿತ್ಯವನ್ನು ದೇಶದ ಸರ್ವೋತ್ಮೋಖ ಅಭಿವೃದ್ಧಿಗೆ ವಿನಿಯೋಗಿಸಿದರು.



ಸ್ವಾತಂತ್ರ್ಯ , ಸಮಾನತೆ ಹಾಗೂ ಬಾತೃತ್ವದ ಸಮಾಜವನ್ನು ಬಯಸಿದ್ದರು. ಸಂವಿಧಾನ ರಚನೆಯಲ್ಲಿ ಅವರ ಬಹುಮುಖ್ಯ ಪಾತ್ರವನ್ನು ವಹಿಸಿ ಮಾರ್ಗದರ್ಶಿ ಆಗಿ ಉಳಿದಿದ್ದಾರೆ ಎಂದರು.

ಈ ಸಂಧರ್ಭದಲ್ಲಿ ಮಾನವ ಬಂಧುತ್ವ ವೇದಿಕೆ ತಾಲ್ಲೂಕು ಸಂಚಾಲಕರಾದ ಆರ್ ಸೋಮಣ್ಣ , ಆರ್ ಡಿ ಉಲ್ಲಾಸ್ ( ಮಹಾ ಕಾರ್ಯದರ್ಶಿ , ಗ್ರಾ.ಪಂ . ಸದಸ್ಯರ ಮಹಾ ಒಕ್ಕೂಟ), ರವಿ ಸೋಮಹಳ್ಳಿ ( ಮುಖಂಡರು), ಸಂಸ್ಥೆಯ ಅಧ್ಯಕ್ಷರಾದ ಮಹದೇವಮ್ಮ, ಸಂಸ್ಥೆಯ ಆಡಳಿತಾಧಿಕಾರಿ ಮಹದೇವ ಚಿಜಲ, ಮುತ್ತಣ್ಣ ( ಜಿಲ್ಲಾ ಅಧ್ಯಕ್ಷರು. ಗಡಿನಾಡು ರಕ್ಷಣಾ ಸೇನೆ), ತಿಬ್ಬಯ್ಯ (ಸದಸ್ಯರು ಗ್ರಾ .ಪಂ) ಸಾಧಿಕ್ ಪಾಷಾ ( ಉಪಾಧ್ಯಕ್ಷರು ಕರ್ನಾಟಕ ಕಾವಲು ಪಡೆ), ಮಿಮಿಕ್ರಿ ರಾಜೀವ್ ( ಟೌನ್ ಸಂಚಾಲಕರು ಕಾವಲು ಪಡೆ ) ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ಬಿಡದಿ ಟೌನ್‌ಶಿಪ್‌ಗೆ ಭೂಸ್ವಾಧೀನ: ನಗದು ಪರಿಹಾರ, 50:50 ಅನುಪಾತಕ್ಕೆ ಸ್ವಾಗತ

## ಹೊಸೂರು ಗ್ರಾಮದಲ್ಲಿ ಭೂಮಾಲೀಕರ ಸಭೆ
## ಅಪಪ್ರಚಾರದ ವಿರುದ್ಧ ಯೋಜನೆ ಪರವಾಗಿರುವ ಮಾಲೀಕರ ಅಸಮಾಧಾನ

ರಾಮನಗರ: ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವತಿಯಿಂದ ಸರ್ಕಾರ ನಿರ್ಮಿಸಲು ಉದ್ದೇಶಿಸಿರುವ ಬಿಡದಿ ಟೌನ್‌ಶಿಪ್‌ಗಾಗಿ ಸ್ವಾಧೀನಕ್ಕೆ ಗುರುತಾಗಿರುವ ಭೂಮಿಯ ಮಾಲೀಕರು, ರೈತರು ಬಿಡದಿ ಹೋಬಳಿ ಹೊಸೂರು ಗ್ರಾಮದಲ್ಲಿ ಸಭೆ ಸೇರಿ ಚರ್ಚೆ ನಡೆಸಿದರು.

ಟೌನ್‌ಶಿಪ್ ವಿಚಾರದಲ್ಲಿ ಸರ್ಕಾರ ಏಳು ಸಾವಿರಕ್ಕೂ ಅಧಿಕ ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡು ಎಐ ಸಿಟಿ ನಿರ್ಮಿಸಲು ಮುಂದಾಗಿದ್ದು, ಯೋಜನೆ ಪರ ಮತ್ತು ವಿರೋಧ ವ್ಯಕ್ತವಾಗಿದೆ. ಪ್ರತಿ ಎಕರೆ ಭೂಮಿಗೆ 2.07 ಕೋಟಿ ರೂ 2.55 ಕೋಟಿ ರೂ ಪರಿಹಾರಕ್ಕೆ ಸರ್ಕಾರ ಒಪ್ಪಿಗೆ ಸೂಚಿಸಿದೆ. ಆದರೆ ಭೂ ಮಾಲೀಕರಲ್ಲಿ ಅನೇಕ ವಿಚಾರಗಳಲ್ಲಿ ಸ್ಪಷ್ಟನೆ ಸಿಗದ ಹಿನ್ನಲೆಯಲ್ಲಿ ಭೂಮಾಲೀಕರ ಸಭೆ ನಡೆದಿದೆ.

ಯೋಜನೆ ಬಗ್ಗೆ ಅನಗತ್ಯ ಗೊಂದಲ

ಯೋಜನೆ ಬಗ್ಗೆ ಅಪಪ್ರಚಾರಗಳು ವ್ಯಾಪಕವಾಗಿ ಕೇಳಿ ಬಂದಿದ್ದು, ಭೂ ಮಾಲೀಕರಲ್ಲಿ ಗೊಂದಲ ಮೂಡಿರುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪವಾಯಿತು. ಯೋಜನೆಗೆ ಸರ್ಕಾರದ ಬಳಿ ಹಣ ಇಲ್ಲ. ಸ್ವಾಧೀನ ಪಡಿಸಿಕೊಂಡಿರುವ ಭೂಮಿಗೆ ಪರಿಹಾರ ಕೊಡಲು ಸಹ ಸರ್ಕಾರದ ಬಳಿ ಹಣ ಇಲ್ಲ ಹೀಗೆ ಹಲವಾರು ವಿಚಾರಗಳ ಬಗ್ಗೆ ಸಭೆಯಲ್ಲಿ ಚರ್ಚೆಗಳು ನಡೆದವು.

**ಕುಮಾರಸ್ವಾಮಿ ಅಧಿಕಾರಾವಧಿಯಲ್ಲಿ ಘೋಷಣೆ – ರಾಜಣ್ಣ**

ಸಭೆಯಲ್ಲಿ ಹಾಜರಿದ್ದ ತಾಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಎಚ್.ಸಿ.ರಾಜಣ್ಣ ಮಾತನಾಡಿ ಎಚ್.ಡಿ.ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ ವೇಳೆ ಬಿಡದಿ ಬಳಿಯಲ್ಲಿ ಟೌನ್‌ಶಿಪ್ ನಿರ್ಮಿಸಲು ಉದ್ದೇಶಿಸಲಾಗಿತ್ತು. ಡಿ.ಎಲ್.ಎಫ್ ಕಂಪನಿಯಿಂದ ಸರ್ಕಾರಕ್ಕೆ 300 ಕೋಟಿ ರೂ ಪಡೆದು ಗುತ್ತಿಗೆ ನೀಡಲಾಗಿತ್ತು. ಆಗಲೂ ಟೌನ್‌ಶಿಪ್ ವಿರುದ್ದ ಪ್ರತಿಭಟನೆಗಳು ನಡೆದಿದ್ದವು. ಆಗ ಕುಮಾರಸ್ವಾಮಿಯವರು ರೈತರ



ಸಭೆ ಕರೆದು ಅನುಕೂಲ ಮಾಡಿಕೊಡುವುದಾಗಿ ತಿಳಿಸಿದ್ದರು. ತದ ನಂತರ ಯೋಜನೆಗೆ ಗುರುತಾಗಿದ್ದ ಭೂಮಿ ಕೆಂಪುವಲಯವಾಗಿ ಘೋಷಣೆಯಾಯಿತು. ಆದರೂ ಉದ್ದೇಶಿತ ಯೋಜನೆ ಕಾರ್ಯಗತವಾಗಲಿಲ್ಲ. ಆದರೂ ಈ ಭೂಮಿ ಕೆಂಪುವಲಯವಾಗಿಯೇ ಮುಂದುವರೆದಿದ್ದರಿಂದ ಅಭಿವೃದ್ಧಿ ಕಾಣದೆ ಹೋಯಿತು. ಮೂಲ ಸೌಕರ್ಯಗಳು ಸಿಗಲಿಲ್ಲ ಎಂದರು.

ಮದುವೆ ಮುಂತಾದ ಸಂದರ್ಭಗಳ ವೇಳೆ ಭೂಮಾಲೀಕರು ತೀರಾ ಕಡಿಮೆ ಬೆಲೆಗೆ ತಮ್ಮ ಜಮೀನು ಮಾರಿಕೊಂಡು ನಷ್ಟ ಅನುಭವಿಸಿದರು. ಅಂದಿನ ಸರ್ಕಾರ ಟೌನ್‌ಶಿಪ್ ಘೋಷಿಸಿದ್ದೇಕೆ? ನಂತರ ನಿಲ್ಲಿಸಿದ್ದೇಕೆ? ಆಗ ರೈತರಿಗಾದ ನಷ್ಟಕ್ಕೆ ಯಾರು ಹೊಣೆ? ಎಂದು ಪ್ರಶ್ನಿಸಿದರು.

ಹಾಲಿ ಸರ್ಕಾರ ಟೌನ್‌ಶಿಪ್ ನಿರ್ಮಿಸಲು ಮುಂದಾಗಿದೆ. ಕುಮಾರಸ್ವಾಮಿಯವರು ಸೇರಿದಂತೆ ಕೆಲವರು ವಿರೋಧಿಸುತ್ತಿದ್ದಾರೆ. ಅವರು ಚರ್ಚೆಗೆ ಬರಲಿ ನಾವು ಭಾಗವಹಿಸುತ್ತೇವೆ ಎಂದು ಸವಾಲು ಎಸೆದರು.

ಭೂಸ್ವಾಧೀನಕ್ಕೆ ಪರಿ ಹಾರ ಪಡೆಯಲು ರೈತರೇ ಎಲ್ಲ ದಾಖಲೆಗಳನ್ನು ಒದಗಿಸಬೇಕಿತ್ತು. ಆದರೆ ಡಿ.ಕೆ.ಸುರೇಶ್ ಅವರ ಸಲಹೆ ಮೇರೆಗೆ ಎಲ್ಲ ದಾಖಲೆಗಳನ್ನು ಪ್ರಾಧಿಕಾರವೇ ಪಡೆದುಕೊಂಡಿದೆ. ಈ ವಿಚಾರದಲ್ಲಿ ರೈತರು ಯಾವ ಶ್ರಮವನ್ನು ಪಡಬೇಕಾಗಿಲ್ಲ. ಕೆಲವು ಕುಟುಂಬಗಳಲ್ಲಿ ಭೂಮಿಯ ಭಾಗ ಮಾಡಿಕೊಳ್ಳುವ ವಿಚಾರದಲ್ಲಿ ತಗಾದೆ ಇರಬಹುದು. ಎಂದಾದರು ಇದಕ್ಕೆ ಪರಿ ಹಾರ ಕಂಡುಕೊಳ್ಳಲೇ ಬೇಕು. ಅದನ್ನು ಈಗಲೇ ಪರಿಹಾರ ಕಂಡುಕೊಳ್ಳಿ ಎಂದು ಕಿವಿಮಾತು ಹೇಳಿದರು.

ರಾಜ್ಯದಲ್ಲಿ ಹಾಲಿ ಇರುವ ಸರ್ಕಾರ ಟೌನ್‌ಶಿಪ್ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಪ್ರತಿ ಎಕರೆಗೆ ಕನಿಷ್ಠ 2 ಕೋಟಿ ರೂ ಪರಿಹಾರ ನೀಡಲು ಮುಂದಾಗಿದೆ. ನಗದು ಪರಿಹಾರ ಬೇಡ ಎನ್ನುವವರಿಗೆ ಶೇ 50:50 ಅನುಪಾತದಲ್ಲಿ ಅಭಿವೃದ್ಧಿ ಪಡಿಸಿದ ಭೂಮಿಯನ್ನು/ನಿವೇಶನ ಕೊಡುವುದಾಗಿಯೂ ತಿಳಿಸಿದೆ. ಈ ವಿಚಾರದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತು ಮಾಗಡಿ ಕ್ಷೇತ್ರದ ಶಾಸಕ ಬಾಲಕೃಷ್ಣ ನಮ್ಮ ಭಾವನೆಗಳಿಗೆ ಸ್ಪಂದಿಸಿದ್ದಾರೆ ಎಂದು ಕೆಲವು ಸಭಿಕರು ದನಿಗೂಡಿಸಿದರು. ಬೈರಮಂಗಲ ವಿ.ಎಸ್.ಎಸ್.ಎನ್ ಅಧ್ಯಕ್ಷ ಎಚ್.ಎಸ್.ಸಿದ್ದರಾಜು ಮಾತನಾಡಿ, ಪರಿಹಾರ ಹೆಚ್ಚಳಕ್ಕೆ ಶಾಸಕ ಬಾಲಕೃಷ್ಣ ನಡೆಸಿದ ಪ್ರಯತ್ನಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ನಗರದ ಪರಿಹಾರ ಬೇಡದವರಿಗೆ ಅಭಿವೃದ್ಧಿ ಪಡಿಸಿದ ಭೂಮಿಯಲ್ಲಿ ಶೇ 50ರಷ್ಟು ರೈತರಿಗೆ ವಾಪಸ್ಸು ಬರಲಿದೆ. ಅಪಪ್ರಚಾರಗಳಿಗೆ ಕಿವಿಗೊಡಬೇಡಿ ಎಂದರು. ಸಭೆಯಲ್ಲಿ ಪ್ರಮುಖರಾದ ಶಿವರಾಮ್, ಕೃಷ್ಣಮೂರ್ತಿ, ಗೌತಮ್ ಗೌಡ,ಬೈರಪ್ಪ, ಬಾಲಕೃಷ್ಣ, ಕುಮಾರ್ ಮುಂತಾದವರು ಉಪಸ್ಥಿತರಿದ್ದರು.

**ರೈತರ ಭಾವನೆಗಳಿಗೆ ಸ್ಪಂದನೆ ಸಿಕ್ಕಿದೆ: ಕಲ್ಯಾಣಕುಮಾರಿ**

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸದಸ್ಯೆ ಕಲ್ಯಾಣ ಕುಮಾರಿ ಅವರು ಮಾತನಾಡಿ, ಸ್ವಾಧೀನಕ್ಕೆ ಒಳಪಡುತ್ತಿರುವ ಭೂಮಿಗೆ ಸೂಕ್ತ ಪರಿಹಾರ ದೊರಕಿಸಿಕೊಡುವ ವಿಚಾರದಲ್ಲಿ ರೈತರ ಭಾವನೆಗಳಿಗೆ ಸ್ಪಂದಿಸಬೇಕು ಎಂದು ತಾವು ಸಹ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾಗಿ. ಸಾಧಕ-ಬಾಧಕಗಳನ್ನು ಚರ್ಚೆ ನಡಸಿ ಉತ್ತಮ ಬೆಲೆಯನ್ನು ಘೋಷಿಸಲಾಗುತ್ತಿದೆ. ಭೂಸ್ವಾಧೀನಕ್ಕೆ ಒಪ್ಪಿಗೆ ನೀಡಿದ ನಂತರವೂ ಅಭಿವೃದ್ಧಿ ಪಡಿಸುವವರೆಗೂ ರೈತರು ತಮ್ಮ ಭೂಮಿಯನ್ನು ಬಳಸಿಕೊಳ್ಳಬಹುದಾಗಿದೆ ಎಂದರು. ಭೂ ಸ್ವಾಧೀನದ ಪರಿಹಾರದ ವಿಚಾರಗಳ ಬಗ್ಗೆ ಅವರು ಮಾಹಿತಿ ಕೊಟ್ಟರು.

**ಸುಳ್ಳು ಸುದ್ದಿ ಹಬ್ಬಿಸದಿರಿ**

ಯೋಜನೆಯನ್ನು ವಿರೋಧಿಸುತ್ತಿರುವವರು ಸೈದ್ಧಾಂತಿಕ ಹೋರಾಟ ಮಾಡಬೇಕು. ಅದು ಬಿಟ್ಟು ಸುಳ್ಳು ಸುದ್ದಿ ಹರಡಿಸುವಲ್ಲಿ ನಿರತರಾಗಿದ್ದಾರೆ. ರೈತರಲ್ಲಿ ಅನಗತ್ಯ ಗೊಂದಲ ಸೃಷ್ಟಿಸುತ್ತಿದ್ದಾರೆ ಎಂದು ಕೆಲವರು ಆಕ್ರೋಶ ವ್ಯಕ್ತಪಡಿಸಿದರು.

# ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಪರಿನಿರ್ವಾಣ ದಿನ ಆಚರಣೆ



ಚಾಮರಾಜನಗರ: ಅಂಬೇಡ್ಕರ್ ಅವರು ಉತ್ಕಟ ವಾದ ದೇಶಪ್ರೇಮಿ ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್ ಹೇಳಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ಶನಿವಾರ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರ 69ನೇ ಪರಿನಿರ್ವಾಣ ಅಂಗವಾಗಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಅಂಬೇಡ್ಕರ್ ಅವರು ಬಾಲ್ಯದ ದಿನಗಳಿಂದ ಅಸ್ಪೃಶ್ಯತೆಯ ಕಷ್ಟವನ್ನು ಅನುಭವಿಸಿ ಬಂದವರು. ಶಾಲೆಯ ಹೊರಗೆ ಕುಳಿತು ಪಾಠವನ್ನು ಕಲಿತು ಚೆನ್ನಾಗಿ ಓದಿದರು. ಅಂದು ಕಷ್ಟವನ್ನು ಅರಿತು ಓದಿದ ಬಾಬಾ ಸಾಹೇಬರಿಗೆ ವಿಶ್ವಸಂಸ್ಥೆ ಅಂಬೇಡ್ಕರ್ ಜ್ಞಾನದ ಸಂಕೇತ ಎಂದು ಘೋಷಣೆ ಮಾಡಿತು. ವಿಶ್ವದ ಯಾವುದೇ ತತ್ವ ಜ್ಞಾನಿಗೂ ಈ ಬಿರುದು ಸಿಕ್ಕಿಲ್ಲ. ಹಾಗಾಗಿ ಅಂಬೇಡ್ಕರ್ ಅವರನ್ನು ಪ್ರತಿಯೊಬ್ಬ ಭಾರತೀಯನೂ ಓದಬೇಕು ಅರ್ಥ ಮಾಡಿಕೊಳ್ಳಬೇಕು ಎಂದರು. ನವೆಂಬರ್ 26, 2015 ರಂದು ನರೇಂದ್ರ ಮೋದಿಯವರು ಸಂವಿದಾನ ದಿನ ಎಂದು ಘೋಷಣೆ ಮಾಡಿ ಮೊದಲ ಬಾರಿಗೆ ಎರಡು ದಿನ ಸದನದಲ್ಲಿ ಸಂವಿಧಾನ ಕುರಿತು ಚರ್ಚೆ ನಡೆದವು. ಅಂಬೇಡ್ಕರ್ ಅವರ ಸಂವಿಧಾನ ರಚನಾ ಸಭೆಯ ಕೊನೆಯ ಭಾಷಣವನ್ನು ಎಲ್ಲರೂ ಓದಬೇಕಿದೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಪಿ.ವೃಷಭೇಂದ್ರಪ್ಪ, ಹೊನ್ನೂರು ಮಹಾದೇವ ಸ್ವಾಮಿ, ಒಬಿಸಿ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ನೂರೊಂದು ಶೆಟ್ಟಿ, ಎಸ್ಸಿ ಮೋರ್ಚಾದ ಜಿಲ್ಲಾಧ್ಯಕ್ಷ ಮೂಡಹಳ್ಳಿ ಮೂರ್ತಿ, ಎಸ್ಟಿ ಮೋರ್ಚಾ ಜಿಲ್ಲಾಧ್ಯಕ್ಷ ಚಂದ್ರು, ಯುವ ಮೋರ್ಚಾ ಸೂರ್ಯ ಕುಮಾರ್, ಮಂಜು ಕೊಡಿಉಗನೆ, ರೈತ ಮೋರ್ಚಾದ ಜಿಲ್ಲಾಧ್ಯಕ್ಷ ಬೇಡರಪುರ ಬಸವಣ್ಣ, ಗ್ರಾಮಾಂತರ ಮಂಡಲದ ಅಧ್ಯಕ್ಷ ಕಾಡಹಳ್ಳಿ ಕುಮಾರ್, ಜಿ.ಪಂ.ಮಾಜಿ ಸದಸ್ಯ ಬಾಲರಾಜು, ನಗರಸಭೆ ಮಾಜಿ ಸದಸ್ಯ ಕುಮುದಾ, ಪರಶಿವ, ಪುರುಷೋತ್ತಮ್, ಮಾದಪ್ಪ, ಹೇಮಂತ್, ಕುಲಗಾಣ ಶಾಂತಮೂರ್ತಿ, ಶಿವಣ್ಣ, ವೇಣುಗೋಪಾಲ್, ಮಾದಪ್ಪ ಮಾಧ್ಯಮ ಪ್ರಮುಖ್ ಮಂಜು, ಸಹ ಪ್ರಮುಖ್ ಶಿವಣ್ಣ ಇದ್ದರು.

# ಸಾಲುಮರದ ತಿಮ್ಮಕ್ಕ, ಮಹಾಂತೇಶ್ ಬೀಳಗಿಗೆ ನುಡಿ ನಮನ

ಮೈಸೂರು: ನಂಜನಗೂಡಿನ ಮಲ್ಲನ ಮೂಲೆಯ ಶ್ರೀ ಚನ್ನಬಸವ ಸ್ವಾಮೀಜಿ, ಪದ್ಮಶ್ರೀ ಪ್ರಶಸ್ತಿ ಪುರಸ್ಕೃತೆ ಸಾಲುಮರದ ತಿಮ್ಮಕ್ಕ ಹಾಗೂ ಐಎಎಸ್ ಅಧಿಕಾರಿ ಮಹಾಂತೇಶ್ ಬೀಳಗಿ, ನಿವೃತ್ತ ಪೊಲೀಸ್ ಅಧಿಕಾರಿ ಪಡಗೂರು ಮಹಾದೇವು ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು

ಸರ್ದಾರ್ ವಲ್ಲಭಬಾಯಿ ಪಟೇಲ್ ನಗರದ ಏಕಮ್ ಕೆಫೆ ಆವರಣದಲ್ಲಿ ಬಸವ ಬಳಗ ಪೂರ್ವ ವಲಯ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಹನೀಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮುಖಾಂತರ ಮೌನ ಆಚರಣೆ ಮಾಡಲಾಯಿತು. ಟ್ರಸ್ಟಿನ ಗೌರವಾಧ್ಯಕ್ಷ ಹಾಗೂ ಆಲನಹಳ್ಳಿಯ ಕುದೇರು ಶಾಖ ಮಠದ ಶ್ರೀ ಗುರುಶಾಂತ ಸ್ವಾಮೀಜಿ ಮತ್ತು ಟ್ರಸ್ಟ್ ಅಧ್ಯಕ್ಷ ಎಸ್ ಶಿವಸ್ವಾಮಿ, ಸಾಹಿತಿ ಮುಡುಗುಂಡ ಪುಟ್ಟಪ್ಪ, ಪೊಲೀಸ್ ಆರಕ್ಷಕ ನಿರೀಕ್ಷಕ ನಾಗೇಶ್, ಗಂಗಾಧರ್, ಪ್ರಧಾನ ಕಾರ್ಯದರ್ಶಿ ಡಿ.ಲೋಹಿತ್, ಉಪಾಧ್ಯಕ್ಷ ಶ್ರೀಕಂಠಮೂರ್ತಿ, ಸಂಘಟನಾ ಕಾರ್ಯದರ್ಶಿ ಮಹೇಶ್, ಜಯಶಂಕರ್, ನಿರ್ದೇಶಕರಾದ ಮಹದೇವ ಪ್ರಸಾದ್, ಪ್ರಭುಸ್ವಾಮಿ, ದೇವಪ್ಪಾಜಿ, ಮಹೇಶ್, ನಾಗೇಂದ್ರ, ಮಾದಪ್ಪ ಸ್ವಾಮಿ, ಆನಂದಮೂರ್ತಿ, ನಂದೀಶ್, ಶ್ರೀಶೈಲ ಕುಂಬಾರ್, ಮಧು, ಮಹದೇವಪ್ಪ, ಚೇತನ್, ವಿಶ್ವನಾಥ್, ಪುಟ್ಟ ಬುದ್ಧಿ ಮುಂತಾದವರು ಉಪಸ್ಥಿತರಿದ್ದರು.



**ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳ ಮೇಲೆ ವಕೀಲ ಕೆ.ಬೋರೇಗೌಡ ಹಲ್ಲೆ, ಬೆದರಿಕೆ**

# ಕಾನೂನು ಕ್ರಮಕ್ಕೆ ಮನವಿ

ಕೆ.ಆರ್.ಪೇಟೆ: ಪಟ್ಟಣದ ದಲಿತ ಶಿಕ್ಷಣ ಸಂಸ್ಥೆಯ ಕಟ್ಟಡದಲ್ಲಿರುವ ವಕೀಲ ಕೆ.ಬೋರೇಗೌಡ ಅವರು ತಮ್ಮ ಕಚೇರಿಗೆ ಬಂದಿದ್ದ ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷರಾದ ಎಂ.ಆರ್.ನಾಗೇಗೌಡ ಮತ್ತು ಪದಾಧಿಕಾರಿಗಳ ಮೇಲೆ ಹಲ್ಲೆ ನಡೆಸಿ, ಕೊಲೆ ಬೆದರಿಕೆ ಹಾಕಿರುತ್ತಾರೆ. ಈ ಸಂಬಂಧ ಕೆ.ಆರ್.ಪೇಟೆ ಟೌನ್ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್.ದಾಖಲಾಗಿದೆ. ಅನಂತರ ತಮ್ಮ ಮೇಲೂ ಹಲ್ಲೆ ನಡೆಸಿದ್ದಾರೆ ಎಂದು ಪ್ರತಿ ದೂರು ನೀಡಿದ್ದಾರೆ ಹಾಗಾಗಿ ಪೊಲೀಸರು ನಿಷ್ಪಕ್ಷಪಾತ ತನಿಖೆ ನಡೆಸಿ ಸೂಕ್ತ ಕಾನೂನು ಕ್ರಮ ವಹಿಸುವಂತೆ ತಾಲ್ಲೂಕು ವಕೀಲರ ಸಂಘದ ಮಾಜಿ ಅಧ್ಯಕ್ಷ ಎಂ. ಆರ್.ಪ್ರಸನ್ನಕುಮಾರ್ ಹೇಳಿದರು.

ಕೆ.ಆರ್.ಪೇಟೆ ಪಟ್ಟಣದ ನ್ಯಾಯಾಲಯದ ಸಂಕೀರ್ಣದಲ್ಲಿರುವ ವಕೀಲರ ಸಂಘದ ಸಭಾಂಗಣದಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಎಂ.ಆರ್.ಪ್ರಸನ್ನಕುಮಾರ್ ಅವರು ವಕೀಲರಾದ ಕೆ.ಬೋರೇಗೌಡ ಅವರು 2014ರಿಂದ 2017ವರೆಗೆ ಮುಖ್ಯಮಂತ್ರಿ ಪರಿಹಾರ ನಿಧಿಯ ಲಕ್ಷಾಂತರ ರೂಪಾಯಿಗಳನ್ನು ಸುಳ್ಳು ದಾಖಲೆಗಳನ್ನು ಸೃಷ್ಠಿಸಿ ದುರುಪಯೋಗ ಮಾಡಿಕೊಂಡಿದ್ದಾರೆ. ಸದರಿ ಪ್ರಕರಣದ ಹಿನ್ನೆಲೆಯಲ್ಲಿ ಸಿಐಡಿ ತನಿಖೆ ನಡೆದು ಕೆ.ಬೋರೇಗೌಡ ಅವರು ತಪ್ಪಿತಸ್ಥರೆಂದು ಸಾಬೀತಾದ ಹಿನ್ನೆಲೆಯಲ್ಲಿ ಜೈಲಿಗೂ ಸಹ ಹೋಗಿ ಬಂದಿದ್ದಾರೆ. ಇದರಿಂದಾಗಿ ತಾಲ್ಲೂಕು ವಕೀಲರ ಸಂಘದಲ್ಲಿ ಅವರಿಗೆ ಸದಸ್ಯತ್ವ ನಿರಾಕರಿಸಲಾಗಿದೆ. ಇದರಿಂದಾಗಿ ಸಂಘಕ್ಕೆ ಕೆಟ್ಟ ಹೆಸರ ತರಬೇಕೆಂಬ ದುರುದ್ದೇಶದಿಂದ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಸ್ಪಷ್ಟನೆ ನೀಡಿದರು. ಪತ್ರಿಕಾಗೋಷ್ಠಿಯಲ್ಲಿ ಹಿರಿಯ ವಕೀಲರಾದ ಕೆ.ಎನ್.ನಾಗೇಗೌಡ, ಜಿ.ಜೆ.ಲೋಕೇಶ್, ಕೆ. ಆರ್.ಮಹೇಶ್, ತಾಲ್ಲೂಕು ವಕೀಲರ ಸಂಘದ ಉಪಾಧ್ಯಕ್ಷ ಪುರುಷೋತ್ತಮ್, ನಿರಂಜನ್, ಶಂಕರೇಗೌಡ ಸೇರಿದಂತೆ ಹಲವು ವಕೀಲರುಗಳು ಉಪಸ್ಥಿತರಿದ್ದರು.



# ಶೇಖರಣ ಘಟಕ ನಿರ್ಮಾಣಕ್ಕೆ ಭೂಮಿ ಪೂಜೆ

ಎಚ್.ಡಿ.ಕೋಟೆ: ತಾಲೂಕಿನ ಚಿಕ್ಕಕೆರೆಯೂರು ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ಪಶು ಆಹಾರ ಶೇಖರಣೆ ಘಟಕ ನಿರ್ಮಾಣಕ್ಕೆ ಶಾಸಕ ಅನಿಲ್ ಚಿಕ್ಕಮಾದು ಹಾಗೂ ಮೈಮುಲ್ ಅಧ್ಯಕ್ಷ ಕೆ. ಈರೇಗೌಡ ಭೂಮಿಪೂಜೆ ನೆರವೇರಿಸಿದರು.



ಅಕ್ರಮ, ಸಕ್ರಮ ಸಮಿತಿ ಸದಸ್ಯ ಕೆಂಡಗಣ್ಣೇಗೌಡ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಮಂಜೇಗೌಡ, ಕಾರ್ಯದರ್ಶಿ ಸಿ. ಎಸ್.ರಾಜೇಶ್, ತಾಪಂ ಮಾಜಿ ಅಧ್ಯಕ್ಷ ಬಾಲಚಂದ್ರ, ಡಾ.ಬಾಬು ಜಗಜೀವನರಾಂ ವಿಚಾರ ವೇದಿಕೆ ಮಾಜಿ ಅಧ್ಯಕ್ಷ ಪಿ. ನಾಗರಾಜು, ಡಾ. ಮರಿದೇವಯ್ಯ, ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯ ಮಂಜುನಾಥ್, ನಟರಾಜು, ಮಂಜುನಾಥ್, ವಿಎಸ್‌ಎಸ್‌ಎನ್ ಅಧ್ಯಕ್ಷ ಕಾಳಸ್ವಾಮೇಗೌಡ, ಮಾಜಿ ಅಧ್ಯಕ್ಷ ಮಹೇಶ್, ಒಕ್ಕಲಿಗ ಸಂಘದ ಸದಸ್ಯ ಕೃಷ್ಣೇಗೌಡ, ಸುಪ್ರೀತ್, ಹಾಲು ಉತ್ಪಾದಕರ ಸಂಘದ ಸದಸ್ಯರಾದ ಡಿ. ಕುಮಾರ್, ನಾಗೇಂದ್ರ, ಮಂಜು, ಮಹೇಶ್, ಲೋಕೇಶ್, ಸಿದ್ದರಾಜು, ಸಿದ್ದಶೆಟ್ಟಿ, ಮಹಿಳಾ ಉಪಾಧ್ಯಕ್ಷೆ ಜಯಮ್ಮ ಗೋವಿಂದನಾಯ್ಕ, ಸದಸ್ಯರಾದ ರತ್ನಮ್ಮ, ಪುಟ್ಟಮ್ಮ, ಮುಖಂಡರಾದ ಕೆ.ಟಿ ಶ್ರೀನಿವಾಸ್, ಸಿ.ಎನ್ ರವಿ, ಸಂಘದ ಮುಖ್ಯ ಸಿಬ್ಬಂದಿಗಳಾದ ಶ್ರೀನಿವಾಸ್, ರವಿ, ಯಾಜಮಾನರಾದ ಚಂದ್ರೇಗೌಡ, ಚಂದ್ರಪ್ಪ, ಬಸವರಾಜು, ಲೋಕೇಶ್, ಕಂಸರಾಜು, ರವೀಶ, ಮಹದೇವಪ್ಪ, ರಾಜೇಶ್, ಶ್ರೀನೀವಾಸ, ಗೋವಿಂದೇಗೌಡ, ವೇಂಕಟೇಗೌಡ, .ಸಿ.ಕೆ ರವಿ, ಮಾದೇಶ್, ಶಿವರಾಜ್ ಇದ್ದಾರೆ.

**ತಹಸೀಲ್ದಾರ್ ತನ್ಮಯ್ ಸಲಹೆ । ಪರಿನಿರ್ವಾಣ ದಿನ ಆಚರಣೆ**

# ಅಂಬೇಡ್ಕರ್ ತತ್ವ, ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಿ

ಗುಂಡ್ಲುಪೇಟೆ: ಸಂವಿಧಾನಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ದೇಶಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಯುವಕರು ಅವರ ತತ್ವ, ಸಿದ್ಧಾಂತಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು' ಎಂದ ತಹಸೀಲ್ದಾರ್. ತನ್ಮಯ್ ಸಲಹೆ ನೀಡಿದರು

ಪಟ್ಟಣದ ತಾಲೂಕು ಕಚೇರಿಯ ಸಭಾಂಗಣದಲ್ಲಿ ತಾಲೂಕು ಆಡಳಿತ ಹಾಗೂ ಸಮಾಜ ಕಲ್ಯಾಣ ಇಲಾ ಖೆಯ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ರವರ 69ನೇ ಪರಿನಿರ್ವಾಣ ದಿನ ಆಚರಣೆ ಮಾಡಲಾ ಯಿತು. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು. ಜಗತ್ತಿಗೆ ಮಾದರಿ ಸಂವಿಧಾನ ಕೊಟ್ಟ ಅಂಬೇಡ್ಕರ್ ಅವರ ಶಿಕ್ಷಣ, ಸಂಘ ಟನೆ ಮತ್ತು ಸಾಮಾಜಿಕ ನ್ಯಾಯಕತ್ವ ಹಾಗೂ ಮೌಲ್ಯ ಗಳು ಭೂಮಿ ಇರುವವರೆಗೂ ಸರ್ವಕಾಲೀಕ ಎಂದರು.

ಇಂದು ವೇದಿಕೆಯಲ್ಲಿ ನಾವೆಲ್ಲರೂ ಒಟ್ಟಿಗೆ ಕುಳಿತಿರುವುದಕ್ಕೆ ಅಂಬೇಡ್ಕರ್ ರವರು ಹಾಕಿಕೊಟ್ಟ ಅಮೂಲ್ಯವಾದ ಸಂವಿಧಾನ ಕಾರಣವಾಗಿದೆ. ಅವರು



ನೀಡಿರುವ ಸಂವಿಧಾನ ಯಾವುದೇ ಒಂದು ಜಾತಿ, ಧರ್ಮ, ಭಾಷೆಗೆ ಸೀಮಿತವಾಗದೇ ಎಲ್ಲರಿಗೂ ನೀಡಲಾಗಿದೆ. ಹಾಗಾಗಿ ಅವರ ತತ್ವ ಮತ್ತು ಮೌಲ್ಯಗಳನ್ನು ನಾವೆಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಮುಖ್ಯ ಬಾಷಣಕಾರರಾದ ಡಾ.ಸರೋಜ ಮಾತನಾಡಿ ಅಂಬೇಡ್ಕರ್ ಅವರು ಸಾಮಾಜಿಕ ಬದಲಾವಣೆಯ ಹರಿಕಾರರು ಮತ್ತು ನ್ಯಾಯಶಾಸ್ತ್ರಜ್ಞ ರಾಗಿ, ಶಿಕ್ಷಣತಜ್ಞರಾಗಿ, ಅರ್ಥಶಾಸ್ತ್ರಜ್ಞರಾಗಿ, ಸಮಾಜ ಸುಧಾರಕರಾಗಿ ಮತ್ತು ರಾಜಕೀಯ ನಾಯಕರಾಗಿ ನಮ್ಮ ದೇಶ ಮತ್ತು ಸಮಾಜಕ್ಕೆ ಅಸಾಮಾನ್ಯ ಕೊಡುಗೆಗಳನ್ನು ನೀಡಿದ ಬಹುಮುಖ ವ್ಯಕ್ತಿತ್ವ. ಸಾಂವಿಧಾನಿಕ ವ್ಯವಸ್ಥೆಯಲ್ಲಿ ಅವರ ಬಲವಾದ ನಂಬಿಕೆ ನಮ್ಮ ಪ್ರಜಾಪ್ರಭುತ್ವದ ಅಡಿಪಾಯವಾಗಿದೆ.

ಅಂಬೇಡ್ಕರ್ ಅವರು ತಮ್ಮ ಇಡೀ ಜೀವನವನ್ನು ಸಮಾನತೆಯ ಸಮಾಜ ಸ್ಥಾಪನೆಗೆ ಮುಡಿಪಾಗಿಟ್ಟರು ಮತ್ತು ದೀನದಲಿತರ ಉನ್ನತಿಗಾಗಿ ಹೋರಾಡಿದರು ಎಂದು ಹೇಳಿದರು ಸಮಾಜದ ಎಲ್ಲಾ ವರ್ಗಗಳಿಗೆ ಹಕ್ಕನ್ನು ನೀಡುವ ಮೂಲಕ ಸಮಾನತೆ ಸಾರಿದರು. ಇವರನ್ನು ಗುರುವಾಗಿ, ಮಾರ್ಗದರ್ಶಕರಾಗಿ ಅನುಸರಿಸಬೇಕು. ಸಮಾಜದ ಸುಧಾರಣೆಗಾಗಿ ತಮ್ಮ ಜೀವನವನ್ನೇ ಮೂಡಿಪಾಗಿಟ್ಟವರು ಡಾ.ಬಿ.ಆರ್. ಅಂಬೇಡ್ಕರ್ ಎಂದರು. ತಾ.ಪಂ.ಕಾರ್ಯನಿರ್ವಹಣ ಅಧಿಕಾರಿಗ ಷಣ್ಮುಗಂ.ಕ್ಷೇತ್ರ ಶಿಕ್ಷಣಾಧಿಕಾರಿ ಟಿ.ಆರ್. ಸ್ವಾಮಿ,ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಮೋಹನ್ ಕುಮಾರ್,ಪುರಸಭೆ ಮುಖ್ಯಾಧಿಕಾರಿ ಟಿ.ಶರವಣ, ಲೋಕೋಪಯೋಗಿ ಇಲಾಖೆಯ ವಿ. ಶ್ರೀನಿವಾಸ್, ಪುರಸಭಾ ಮಾಜಿ ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಮುಖಂಡರಾದ ಸುಭಾಷ್ ಮಾಡ್ರಹಳ್ಳಿ, ರಾಘವಾಪುರ ಗ್ರಾಪಂ ಮಾಜಿ ಅಧ್ಯಕ್ಷ ಆರ್.ಡಿ.ಉಲ್ಲಾಸ್, ಮುತ್ತಣ್ಣ, ಸುರೇಶ್ ನಾಯಕ್, ಶ್ರೀನಿವಾಸ್ ನಾಯಕ್ ಹಾಜರಿದ್ದರು.

# ಪಲ್ಸ್ ಪೋಲಿಯೋ ಲಸಿಕಾ ಕುರಿತತರಬೇತಿ ಕಾರ್ಯಾಗಾರ



ಚಾಮರಾಜನಗರ: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಖೆ ವತಿಯಿಂದ ಇದೇ ಡಿ, 21 ರಂದು ನಡೆಯಲಿರುವ ರಾಷ್ಟ್ರೀಯ ಪಲ್ಸ್ ಪೋ?ಲಿಯೋ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಆರೋಗ್ಯ ಇಲಖೆ ಅಧಿಕಾರಿ ಹಾಗೂ ಸಿಬ್ಬಂದಿಗೆ ತರಬೇತಿ ಕಾರ್ಯಾಗಾರ ನಡೆಯಿತು. ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪಲ್ಸ್ ಪೋಲಿಯೋ ಲಸಿಕಾ ಹಾಗೂ ವಿ.ಪಿ.ಡಿ. ಸರ್ವಲೆನ್ಸ್ ಕುರಿತ ತರಬೇತಿ ಕಾರ್ಯಾಗಾರಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ ಅವರು ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ನೀಡಿದರು.

ಇದೇ ಸಂದರ್ಭದಲ್ಲಿ ಕಾರ್ಯಗಾರವನ್ನು ಉದ್ದೇಶಿಸಿ ಮಾತನಾಡಿದ ಡಾ. ಚಿದಂಬರ ಅವರು ಎಲ್ಲರ ಸಹಕಾರದಿಂದ ಪೋ?ಲಿಯೋ ನಿರ್ಮೂಲನೆಯನ್ನು ಮಾಡಿದ್ದೇವೆ. ನಮ್ಮ ದೇಶದಲ್ಲಿ 2011ರಲ್ಲಿ ಕೊನೆಯ ಪ್ರಕರಣ ವರದಿಯಾಗಿರುತ್ತದೆ. ತದನಂತರ 2014ರ ಮಾರ್ಚ್ 27 ರಂದು ಪೋ?ಲಿಯೋ ಮುಕ್ತ ಭಾರತ ಎಂದು ವಿಶ್ವ ಆರೋಗ್ಯ ಸಂಸ್ಥೆ ಘೋಷಣೆ ಮಾಡಿದೆ ಎಂದರು.

ಲಸಿಕೆಯಿಂದ ತಡೆಗಟ್ಟಬಹುದಾದ 12 ಖಾಯಿಲೆಗಳಿಗೆ ವ್ಯಾಕ್ಸಿನ್ ನೀಡುತ್ತಿದ್ದು, ಇದರಿಂದ ಮಗುವಿನ ರೋಗನಿರೋಧಕ ಶಕ್ತಿ ವೃದ್ಧಿಯಾಗಿ ಮಗು ಆರೋಗ್ಯವಾಗಿರುತ್ತದೆ. ಯಾವುದೇ ಒಂದು ಮಗುವು ಲಸಿಕೆಯಿಂದ ವಂಚಿತವಾಗದಂತೆ ಕ್ಷೇತ್ರಮಟ್ಟದಲ್ಲಿ ಕಾರ್ಯನಿರ್ವಹಿಸಬೇಕೆಂದು ಡಾ. ಚಿದಂಬರ ಅವರು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದ ವಿಶ್ವ ಆರೋಗ್ಯ ಸಂಸ್ಥೆಯ ಸಲಹೆಗಾರಾರು ಹಾಗೂ ಸರ್ವಲೆನ್ಸ್ ವೈದ್ಯಾಧಿಕಾರಿಯಾದ ಡಾ. ಸುಧೀರ್ ನಾಯಕ್ ಅವರು ಮಾತನಾಡಿ ಈಗ ಪೋ?ಲಿಯೋ ಹಾಗೂ ನಿಯೋನೇಟಲ್, ಟೆಟಾನಸ್ ಖಾಯಿಲೆಯನ್ನು ನಿರ್ಮೂಲನೆಗೊಳಿಸಿದ್ದೇವೆ. ಕ್ಷೇತ್ರದಲ್ಲಿ ಮಕ್ಕಳಿಗೆ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿ ಲಸಿಕೆ ನೀಡಬೇಕು ಎಂದರು.

ಜಿಲ್ಲಾ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯಾಧಿಕಾರಿ ಡಾ. ಎಂ.ಎಸ್. ರಾಜೇಶ್ ಕುಮಾರ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಜಿಲ್ಲಾ ಸರ್ವಲೆನ್ಸ್ ಅಧಿಕಾರಿ ಡಾ. ಸುಂದರೇಶ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ. ಶ್ರೀನಿವಾಸ, ಡಾ. ಅಲೀಂ ಪಾಷ, ಡಾ. ತನುಜಾ, ಡಾ. ಪ್ರಕಾಶ್, ಡಾ. ಲೋಹಿತ್, ಜಿಲ್ಲಾ ಆರೋಗ್ಯ ಮೇಲ್ವಿಚಾರಣಾಧಿಕಾರಿ ವೆಂಕಟೇಶ್, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ದೊರೆಸ್ವಾಮಿ ನಾಯಕ್, ಜಿಲ್ಲಾ ನಸಿರ್ಂಗ್ ಅಧಿಕಾರಿ ಮಣ ಯಮ್ಮ, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಆಡಳಿತ ವ್ಯವಸ್ಥೆಗೆ ಹೊಸ ಆಯಾಮ ತಂದುಕೊಟ್ಟ ಅಂಬೇಡ್ಕರ್



ಚಾಮರಾಜನಗರ. ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಸಂವಿಧಾನ ಶಿಲ್ಪಿ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 69ನೇ ಪರಿನಿರ್ವಾಣ ದಿನವನ್ನು ಆಚರಿಸಲಾಯಿತು.

ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಅಂಬೇಡ್ಕರ್ ಅವರು ಇಡೀ ಜಗತ್ತು ಮೆಚ್ಚುವ ಸಂವಿಧಾನವನ್ನು ರಚಿಸಿದ್ದಾರೆ. ಈ ಮೂಲಕ ಭಾರತ ದೇಶದ ಆಡಳಿತ ವ್ಯವಸ್ಥೆಗೆ ಹೊಸ ಆಯಾಮ ತಂದುಕೊಟ್ಟಿದ್ದಾರೆ. ಹೀಗಾಗಿ ನಾವೆಲ್ಲರೂ ಅಂಬೇಡ್ಕರ್ ಅವರನ್ನು ಸದಾ ಸ್ಮರಿಸುವ ಅಗತ್ಯವಿದೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ. ಮರಿಸ್ವಾಮಿ ಮಾತನಾಡಿ, ಅಂಬೇಡ್ಕರ್ ವ್ಯಕ್ತಿ ಅಲ್ಲ ಅವರೊಬ್ಬ ಮಹಾನ್ ಶಕ್ತಿಯಾಗಿದ್ದಾರೆ. ದಲಿತರು, ಮಹಿಳೆಯರು ಹಾಗೂ ಕಾರ್ಮಿಕರ ಪರ ಹೋರಾಟ ನಡೆಸಿದ್ದಾರೆ. ಅಂಬೇಡ್ಕರ್ ಅವರ ವಿಚಾರಧಾರೆ, ಆದರ್ಶಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು ಎಂದರು.

ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ,ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ನಾಗರತ್ನ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆರ್.ಮಹದೇವ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್. ಗುರುಸ್ವಾಮಿ, ನಗರಸಭಾ ನಾಮನಿರ್ದೇಕ ಸ್ವಾಮಿ, ಜಿ,ಪಂ ಮಾಜಿ ಅಧ್ಯಕ್ಷೆ ಕಾವೇರಿಶಿವಕುಮಾರ್, ತಾಲ್ಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಸೋಮೇಶ್ವರ್, ಸದಸ್ಯರಾದ ಕುಮಾರ್ಮರಿಯಾಲದಹುಂಡಿ, ರಾಜು ಅಮಚವಾಡಿ, ಕುಮಾರ್ಸ್ವಾಮಿ, ಮಲ್ಲಿಕಾರ್ಜುನ್, ಮಾಜಿ ನಗರಸಭಾ ಅಧ್ಯಕ್ಷೆ ಚಿನ್ನಮ್ಮ, ಸದಸ್ಯ ಕಲಾವತಿ, ಗ್ರಾಮಾಂತರ ಬ್ಲಾಕ್ ಅಧ್ಯಕ್ಷೆ ಶಂಕುತಲಾ, ಲತಾಜತಿ, ಎಪಿಎಂಸಿ ಸದಸದ್ಯರಾದ ಸೋಮೇಶ್, ಆಲೂರು ಪ್ರದೀಪ್ ಗ್ರಾ,ಪಂ ಅಧ್ಯಕ್ಷ ರೋಪೇಶ್, ಜಿ,ಪಂ, ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್, ಕೆಡಿಪಿ,ಸದಸ್ಯ ಶ್ರೀನಿವಾಸ್, ನಸ್ರುಲ್‌ಖಾನ್,ಜಿ,ಡಿ ಪ್ರಕಾಶ್, ಕೆಪಿಸಿಸಿ ಸದಸ್ಯ ಸೈಯದ್ ರಫೀ, ಗಣೇಶ್‌ಪ್ರಸಾದ್,ಅಲ್ಪ ಸಂಖ್ಯಾತ ಜಿಲ್ಲಾಧ್ಯಕ್ಷ ಅಜ್ಜಲ್‌ಷರೀಲ್, ಆಯೂಬ್ ಖಾನ್, ಅಪ್ಸರ್ಪಾಷ, ಇಬ್ರಾನ್‌ಅಹಮದ್, ವಿನೋದ್, ವಕೀಲ ಪೃಥ್ವೀ, ರವಿಗೌಡ, ನಾಗಯ್ಯನಾಗವಳ್ಳಿ, ರಂಗಸ್ವಾಮಿ, ಜಯರಾಜು,ರಾಮಸಮುದ್ರ ನಾಗರಾಜು, ಕೆ,ನಾಗರಾಜು, ಬಸವಣ್ಣ, ಶಿವಮೂರ್ತಿ, ಮೋಹನ್‌ನಗು, ಮಹದೇವಯ್ಯ, ಶೇಷಣ್ಣ, ಹಾಜರಿದ್ದರು.

# ಪೌರಕಾರ್ಮಿಕರೊಂದಿಗೆ ಯುಧರ್ಮ ಕಾರ್ಯಕರ್ತರ ಶ್ರಮಧಾನ



ರಾಮನಗರ: ನಗರದ ಆಗಾ ಲೇಔಟ್ ಮತ್ತು ಜಿ.ಕಾರ್ಪ್ ಲೇಔಟ್‌ನಲ್ಲಿರುವ ಉದ್ಯಾನವನಗಳನ್ನು ಹಮ್ಮಿಕೊಳ್ಳುವ ಮೂಲಕ ಡಾ.ಬಿ.ಆರ್.ಅಂಬೇಡ್ಕರ್ ಪರಿನಿರ್ವಾಣ ಕಾರ್ಯಕ್ರಮವನ್ನು ಇಲ್ಲಿನ ನಗರಸಭೆ ವತಿಯಿಂದ ವಿಭಿನ್ನವಾಗಿ ಆಚರಿಸಲಾಯಿತು.

ಪೌರಕಾರ್ಮಿಕರೊಂದಿಗೆ ಯುಧರ್ಮ ಸಂಘಟನೆಯ ಸದಸ್ಯರು, ಆಗಾ ಲೇಔಟ್ ಮತ್ತು ಜಿ.ಕಾರ್ಪ್ ಲೇಔಟ್‌ನ ಉದ್ಯಾನವಗಳಲ್ಲಿ ಬೆಳೆದಿದ್ದ ಗಿಡಗಂಟೆಗಳನ್ನು ತೆರವುಗೊಳಿಸಿ ಸ್ವಚ್ಚತಾ ಕಾರ್ಯ ನಡೆಸಿದರು. ಈ ವೇಳೆ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ

ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ (ಶಶಿ), ಡಾ.ಬಿ.ಆರ್.ಅಂಬೇಡ್ಕರ್ ತಮ್ಮ ಜೀವನದುದ್ದಕ್ಕೂ ಸಮಾಜಿಕ ಸಮಾನತೆಗಾಗಿ ಹೋರಾಟ ಮಾಡಿದವರು. ಸಮಾಜದಲ್ಲಿ ಸ್ಥಾನಮಾನ ಬಂದ ಮೇಲೂ ತಮ್ಮ ಜೀವಿತಾದವಧಿವರೆಗೂ ಸಾಮಾಜಿಕ ಪಿಡುಗಾಗಿರುವ ಅಸ್ಪೃಶ್ಯತೆ ವಿರುದ್ಧ ಹೋರಾಟಮಾಡಿದ್ದರು ಎಂದರು.

ಶ್ರೇಣಿಕೃತ ವ್ಯವಸ್ಥೆಯಲ್ಲಿ ಮನುಷ್ಯರನ್ನು ಪ್ರಾಣಿಗಳಿಗಿಂತಲೂ ಕೀಳಾಗಿ ಕಾಣುವ ವ್ಯವಸ್ಥೆ ಇತ್ತು. ಎಲ್ಲರು ಒಂದಾಗಿ ಬದುಕಬೇಕು ಎಂಬುದು ಅಂಬೇಡ್ಕರ್ ಅವರ ಆಶಯವಾಗಿತ್ತು. ಸಂವಿಧಾನದ ಮೂಲಕ ಅದನ್ನು ಪ್ರತಿಪಾದಿಸಿದ್ದಾರೆ. ಸಂವಿಧಾನ ರಚನೆಗೂ ಮುನ್ನ ಅವರು ಎಲ್ಲ ಜಾತಿ, ಧರ್ಮಗಳನ್ನು, ಸಂಸ್ಕೃತಿಯನ್ನು ಗೌರವಿಸುವ, ಎಲ್ಲರಿಗೂ ಜೀವಿಸುವ ಹಕ್ಕು, ಸಮಾನತೆಯ ಹಕ್ಕನ್ನು ನೀಡಿದ್ದಾರೆ. ಸೂರ್ಯ ಚಂದ್ರ ಇರುವವರೆಗೆ ಅಂಬೇಡ್ಕರ್ ಅಜರಾಮರರು. ಕೂಲಿ ಕೆಲಸ ಮಾಡುವ ವ್ಯಕ್ತಿಯಿಂದ ರಾಷ್ಟ್ರ ಪತಿಯವರಿಗೆ ಒಂದೇ ಮತದಾನದ ಹಕ್ಕು ನೀಡಿದರು. ಅಂಬೇಡ್ಕರ್ ಆಶಯ ಪಾಲಿಸಿದರೆ ಮಾತ್ರ ಸಮ ಸಮಾಜ ಮತ್ತು ಬಲಿಷ್ಠವಾದ ರಾಷ್ಟ್ರ ನಿರ್ಮಾಣ ಮಾಡಲು ಸಾಧ್ಯ ಎಂದರು.

ಮಹಾತ್ಮ ಗಾಂಧೀಜಿ ಅವರು ಸ್ವಚ್ಚತೆಗೆ ಆಧ್ಯತೆ ನೀಡಲು ಘೋಷಿಸಿದ್ದರು. ಗಾಂಧೀಜಿ ಅವರ ಕನಸು ನನಸಾಗಲು ನಾಗರೀಕರು ಕಜೋಡಿಸಿದರೆ ಸುಸಜ್ಜಿತ, ಸುಂದರವಾದ ನಗರ ನಿರ್ಮಾಣ ಸಾಧ್ಯವಾಗಲಿದೆ ಎಂದರು. ಪೌರಕಾರ್ಮಿಕರಿಗೆ ಸೂರು ಕಲ್ಪಿಸಲು ಪ್ರಯತ್ನ ನಡೆದಿದೆ. ಜಿಲ್ಲಾ ಯೋಜನ ನಿರ್ದೇಶಕ ಶೇಖರ್ ಮಾತನಾಡಿ, ಸಮಾಜದ ಸ್ವಾಸ್ಥ್ಯ ಶುದ್ಧಿಕರಿಸುವ ಸಂದೇಶ ನೀಡಿದರು. ಸ್ವಚ್ಚತಾ ಕಾರ್ಯಕ್ರಮದ ಮೂಲಕ ನಗರದ ಸ್ವಾಸ್ಥ್ಯ ಕಾಪಾಡುವ ಕೆಲಸವನ್ನು ನಗರಸಭೆ ಮಾಡುತ್ತಿದೆ. ಅಂಬೇಡ್ಕರ್ ರವರು ಸಮಾನತೆ ಹಕ್ಕನ್ನು ಕಲ್ಪಿಸಲು ಹೋರಾಟ ಮಾಡಿದರು. ಆದರೆ, ನಾವುಗಳನ್ನು ಆ ಹಕ್ಕನ್ನು ಪಡೆಯಲು ಹೋರಾಟ ಮಾಡುತ್ತಿದ್ದೇವೆ. ಸಂವಿಧಾನ ಮಹಿಳೆಯರಿಗೂ ಸಮಾನ ಹಕ್ಕುಗಳನ್ನು ನೀಡಿದ, ಅಸ್ಪೃಶ್ಯತೆ ವಿರುದ್ಧ ಹೋರಾಡಿದ ಅಂಬೇಡ್ಕರ್ ಮಹಾನ್ ಮಾನವತಾವಾದಿ. ವಿಶ್ವದ ಶ್ರೇಷ್ಠ ವಾದ ಸಂವಿಧಾನ ನಮ್ಮದಾಗಿದೆ ಎಂದರು ತಿಳಿಸಿದರು.

ನಗರಸಭೆ ಆಯುಕ್ತ ಜಯಣ್ಣ ಮಾತನಾಡಿ, ಅಂಬೇಡ್ಕರ್ ಸಮಾನತೆಯ ಸಮ ಸಮಾಜ ನಿರ್ಮಾಣಕ್ಕೆ ಪ್ರಯತ್ನ ಮಾಡಿದರು. ಅವರು ಬಿಟ್ಟು ಹೋಗಿರುವ ವ್ಯವಸ್ಥೆಯನ್ನು ಮುಂದುವರೆಸಬೇಕಿದೆ. ಎಲ್ಲರು ಕಜೋಡಿಸಿದಾಗ ಅಭಿವೃದ್ಧಿ ಸಾಧ್ಯ ಎಂದರು. ಈ ವೇಳೆ ನಗರಸಭೆಯ ಸ್ವಚ್ಚತಾ ರಾಯಭಾರಿ ಚಿತ್ರರಾವ್, ಪ್ರಮುಖರಾದ ಕವಿತಾರಾವ್, ಹರೀಶ್ ಮತ್ತು ಆಗಾ ಮತ್ತು ಜಿ. ಕಾರ್ಪ್ ಲೇಔಟ್ ನಿವಾಸಿಗಳ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

# ಒಳ್ಳೆಯ ಕೆಲಸಗಳು ಶಾಶ್ವತ

## ಮಾಜಿ ಸಚಿವ ಸಾ.ರಾ.ಮಹೇಶ್ ಹೇಳಿಕೆ । ಶ್ರದ್ಧಾಂಜಲಿ ಸಭೆ

ಕೆ.ಆರ್.ನಗರ:–: ಶಾಸಕಾಂಗ ಮತ್ತು ಪತ್ರಿಕಾರಂಗ ಎರಡು ಸೇವೆ ಮಾಡುವ ರಂಗಗಳಾಗಿದ್ದು ಈ ಎರಡರಲ್ಲಿ ಕೆಲಸ ನಿರ್ವಹಿಸುವವರು ಬಹಳ ಜವಬ್ದಾರಿಯಿಂದ ನಡೆದುಕೊಳ್ಳಬೇಕು ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಹೇಳಿದರು.

ಪಟ್ಟಣದ ಕೃಷ್ಣ ಮಂದಿರದಲ್ಲಿ ಹಿರಿಯ ಪತ್ರಕರ್ತ ದಿ.ಕೆ.ಟಿ.ರಮೇಶ್ ಅಭಿಮಾನಿ ಬಳಗದ ವತಿಯಿಂದ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು ಹುಟ್ಟು ಆಕಸ್ಮಿಕ ಮತ್ತು ಸಾವು ನಿಶ್ಚಿತವಾಗಿದ್ದು ಈ ಮಧ್ಯೆ ಮಾಡುವ ಒಳ್ಳೆಯ ಕೆಲಸಗಳು ಮಾತ್ರ ಶಾಶ್ವತ ಎಂದರು. ಕಾರ್ಯಾಂಗ ಮತ್ತು ನ್ಯಾಯಾಂಗ ವೃತ್ತಿಗಳಾಗಿದ್ದು ಶಾಸಕಾಂಗ ಮತ್ತು ಪತ್ರಿಕಾರಂಗ ಸೇವೆಯಾಗಿರುವುದರಿಂದ ಇದನ್ನು ಯಾರು ಉದ್ಯೋಗವಾಗಿ ಮಾಡಿಕೊಳ್ಳುತ್ತಾರೆ ಆಗ ಸಮಾಜಕ್ಕೆ ನ್ಯಾಯ ನೀಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯ ಪಟ್ಟ ಮಾಜಿ ಸಚಿವರು ಒಳ್ಳೆಯ ಕೆಲಸಗಳು ಮಾತ್ರ ಎಲ್ಲರ ನೆನಪಿನಲ್ಲಿ ಉಳಿಯುತ್ತದೆ ಆದ್ದರಿಂದ ಪತ್ರಿಕೆಯ ಜೊತೆಗೆ ಬೇರೊಂದು ವೃತ್ತಿಯನ್ನು ಜೀವನೋಪಾಯಕ್ಕಾಗಿ ಮಾಡತೊಡ ಗಿದರೆ ಆಗ ಆ ಪತ್ರಕರ್ತ ರ ಜೀವನ ಸುಖಕರವಾಗಿರಲಿದೆ ಎಂದರು. ವೃತ್ತಿಯಲ್ಲಿ ಶ್ರದ್ದೆಯಿದ್ದರೆ ಗೌರವಗಳು ಮತ್ತು ಪ್ರಶಸ್ತಿ ಗಳು ತಾನಾಗಿಯೇ ಹುಡುಕಿಕೊಂಡು ಬರುತ್ತದೆ ಎಂದ ಅವರು ಗುರಿಯನ್ನು ಇಟ್ಟುಕೊಂಡು ಕೆಲಸ ಮಾಡಿದರೆ ದೇವರು ಸಹ ಎಲ್ಲವನ್ನ ಒಳಿತು ಮಾಡಲಿದೆ ಎಂದು ನುಡಿದರು.

ನವ ನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಕಸಾಪ ತಾಲೂಕು ಅಧ್ಯಕ್ಷ ಡಿಂಡಿಮಶಂಕರ್, ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಕರ್ನಾಟಕ ರಾಜ್ಯ ಪತ್ರಕರ್ತರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಬಿ.ರಾಘವೇಂದ್ರ, ಮೈಸೂರು ಪತ್ರಕರ್ತರ ಸಂಘದ ನಿಕಟ ಪೂರ್ವ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಬಿಜೆಪಿ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಹೊಸಹಳ್ಳಿವೆಂಕಟೇಶ್, ಮಾತನಾಡಿದರು. ಮೈಸೂರು ಪತ್ರಕರ್ತರ ಸಂಘದ ನಿಕಟ ಪೂರ್ವ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಮಣ್ಯ, ತಾಲೂಕು ಪತ್ರಕರ್ತರ ಸಂಘದ ಅಧ್ಯಕ್ಷ ವಿನಯ್ ದೊಡ್ಡಕೊಪ್ಪಲು, ನಿಕಟ ಪೂರ್ವ ಅಧ್ಯಕ್ಷ ವಡ್ಡರಕೊಪ್ಪಲು ಶಿವರಾಮು. ಕೆ.ಟಿ.ರಮೇಶ್ ಅಭಿಮಾನಿ ಬಳಗದ ಅಧ್ಯಕ್ಷ ಹೆಚ್.ಪಿ.ಶಿವಣ್ಣ, .ಪುರಸಭೆ ಮಾಜಿ ಉಪಾಧ್ಯಕ್ಷೆ ನಾಗರತ್ನಮ್ಮ, ಮಾಜಿ ಸದಸ್ಯರಾದ ಮೊಹಮ್ಮದ್ ಸಿರಾಜ್, ಕೆ.ಪಿ.ಪ್ರಭುಶಂಕರ್, ಎನ್.ಶಿವಕುಮಾರ್, ಕೆ.ಟಿ.ರಮೇಶ್ ಪುತ್ರಿ ದಿವಿಶಾ, , ಪ್ರಗತಿ ಪರಚಿಂತಕ ಸುಜಯ್ ಗೌಡ, ಜೆಡಿಎಸ್ ವಕ್ತಾರ ಕೆ.ಎಲ್. ರಮೇಶ್, ತಾಲೂಕು ವರ್ತಕರ ಸಂಘದ ಅಧ್ಯಕ್ಷ ನಾಗೇಶ್, ಜೆಡಿಎಸ್ ಮುಖಂಡ ಡೈರಿಪ್ರಕಾಶ್, ಸಾಲಿಗ್ರಾಮ ಕನ್ನಡ ಸಾಹಿತ್ಯ ಪರಿಷತ್. ಅಧ್ಯಕ್ಷ ಎಸ್ ಕೆ ಮಧುಚಂದ್ರ ಜೆಡಿಎಸ್ ತಾಲೂಕ್ ಅಧ್ಯಕ್ಷ ರಾಜಲಕ್ಷ್ಮಿ ಜಿಲ್ಲಾ ಜೆಡಿಎಸ್ ಮಹಿಳಾ ಅಧ್ಯಕ್ಷಾಯಿಣಿ ಭಾಗ್ಯಮ್ಮ ಮೋಹನ್ ಕುಮಾರಿ ದೇವೇಂದ್ರ ಶಂಕ್ರೇಗೌಡ ಪುಟ್ಟರಾಜು ಮೋಹನ್ ಕುಮಾರ್ . ಸೇರಿದಂತೆ ಕೆ.ಟಿ.ರಮೇಶ್ ಅಭಿಮಾನಿಗಳು ಮತ್ತು ವಿವಿದ ಸಂಘ ಸಂಸ್ಥೆಯ ಪಧಾದಿಕಾರಿಗಳು ಹಾಜರಿದ್ದರು.



### ಸುಮಾರು 35 ವರ್ಷಗಳಿಂದ ಸೇವೆ

ಸುಮಾರು 35 ವರ್ಷಗಳಿಗೂ ಹೆಚ್ಚು ಪತ್ರಿಕೆಯ ಜೊತೆಗೆ ಪಟ್ಟಣದ ವಿವಿಧ ಸಂಘ ಸಂಸ್ಥೆಗಳಲ್ಲಿ ಪದಾಧಿಕಾರಿಗಳಾಗಿ ಜನಸೇವೆ ಮಾಡಿರುವ ದಿವಂಗತ ಕೆ ಟಿ ರಮೇಶ್ ರವರ ವ್ಯಕ್ತಿತ್ವ ಬಹು ದೊಡ್ಡದು ಎಂಬುದಕ್ಕೆ ಈ ದಿನ ಸೇರಿರುವ ಜನತೆ ಸಾಕ್ಷಿಯಾಗಿದೆ ಪತ್ರಕರ್ತರ ಶ್ರದ್ಧಾಂಜಲಿ ಸಭೆಗೆ ಇಷ್ಟೊಂದು ಜನ ಸೇರಿರುವುದು ಇದೇ ಮೊದಲು ಇವರ ನಿಧನ ಕೆಆರ್ ನಗರ ಮಾತ್ರವಲ್ಲದೆ ಮೈಸೂರು ಜಿಲ್ಲೆ ಪತ್ರಕರ್ತರ ಸಂಘಕ್ಕೆ ತುಂಬಲಾರದ ನಷ್ಟವಾಗಿದೆ ಇವರು ಇಂದಿನ ಯುವ ಪತ್ರಕರ್ತರಿಗೆ ಮಾದರಿಯಾಗಿದ್ದರೂ ಎಂದು "ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷರಾದ ಎಸ್ ಟಿ ರವಿಕುಮಾರ್ ನೆನಪು ಮಾಡಿಕೊಂಡರು. " ಪತ್ರಿಕೆಯಲ್ಲಿ ಸುದ್ದಿ ಮಾಡುವಾಗ ಯಾವುದೇ ಒತ್ತಡಕ್ಕೆ ಮತ್ತು ರಾಜಿ ಮಾಡಿಕೊಳ್ಳದೆ ನೇರ ಸುದ್ದಿಗೆ ಹೆಸರುವಾಸಿಯಾದ ಕೆ ಟಿ ರಮೇಶ್ ಅಣ್ಣನವರ ನೆನಪಿಗಾಗಿ ತಾಲೂಕ್ ಪತ್ರಕರ್ತರ ಸಭಾಂಗಣಕ್ಕೆ ಹೆಸರಿಡುವಂತೆ ಮನವಿ ಮಾಡಿದ್ದಲ್ಲದೆ ಜಿಲ್ಲಾ ಪತ್ರಕರ್ತರ ಸಂಘಕ್ಕೂ ಕೆ ಟಿ ರಮೇಶಣ್ಣನವರ ಹೆಸರಿನಲ್ಲಿ ಪ್ರಶಸ್ತಿ ನೀಡುವಂತೆ ಒತ್ತಾಯ ಮಾಡುತ್ತೇನೆ ಎಂದು "ರಾಜ್ಯ ಪತ್ರಕರ್ತರ ಸಂಘದ ಕಾರ್ಯಕಾರಿಣಿ ಸದಸ್ಯ ರಾಘವೇಂದ್ರ ತಿಳಿಸಿದರು.

# ಇಂದು ಸಂಗೀತ ಕಾರ್ಯಕ್ರಮ

ಮೈಸೂರು: ಹಿರಿಯ ನಾಗರೀಕರಿಗೆ ನೆರವು ನೀಡಲೆಂದು ವಿವಿಧ ವೃತ್ತಿಪರರು ಸ್ಥಾಪಿಸಿಕೊಂಡಿರುವ ಸ್ವರಾಂಜಲಿ ತಂಡದ ವತಿಯಿಂದ ಡಿ. 7 ರ ಸಂಜೆ 4.30ಕ್ಕೆ ನಗರದ ಜೆ.ಕೆ. ಮೈದಾನದ ಮೈಸೂರು ವೈದ್ಯಕೀಯ ಕಾಲೇಜು ಪ್ಲಾಟಿನಂ ಜ್ಯುಬಿಲಿ ಸಭಾಂಗಣದಲ್ಲಿ ಲೈವ್ ಸಂಗೀತದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಂಸ್ಥೆಯ ದಿವ್ಯಾ ಕೇಶವ್ ತಿಳಿಸಿದರು.

ಮೊದಲಿಗೆ ಸಭಾ ಕಾರ್ಯಕ್ರಮ ನಡೆಯಲಿದೆ. ಇದರಲ್ಲಿ ಪ್ರಣಯ ರಾಜ ಎಂದೇ ಖ್ಯಾತರಾದ ಶ್ರೀನಾಥ್ ಅತಿಥಿಗಳಾಗಿದ್ದು, ಹಿರಿಯ ನಾಗರೀಕರಿಗೆ ಹಿತನುಡಿ ಆಡಲಿದ್ದಾರೆ. ಖ್ಯಾತ ವಾಗ್ಮಿ ಪ್ರೊ. ಕೃಷ್ಣೇಗೌಡ ಸಹಾ ಮಾತನಾಡಲಿದ್ದಾರೆಂದರು. ನಂತರ ಲೈವ್ ಆರ್ಕೇಸ್ಟ್ರಾ ಇದ್ದು, ತಂಡದ 15 ಕ್ಕೂ ಹೆಚ್ಚು ಗಾಯಕ, ಗಾಯಕಿಯರು ಶ್ರೀನಾಥ್ ಅವರು ನಟಿಸಿರುವ ಹಳೆಯ ಕನ್ನಡ ಚಿತ್ರಗೀತೆ ಹಾಡಲಿದ್ದಾರೆ. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಹಿರಿಯ ನಾಗರೀಕರಿಗೆ ಬಹುಮಾನ ಸಹಾ ವಿತರಿಸಲಾಗುವುದು. ಈ ಕಾರ್ಯಕ್ರಮಗಳಿಗೆ ಉಚಿತ ಪ್ರವೇಶವಿದೆ. ಆದರೆ ಇಚ್ಛೆಯಿದ್ದವರು ದೇಣಿಗೆ ನೀಡಬಹುದಾಗಿದೆ ಎಂದು ತಿಳಿಸಿದರು. ಡಾ. ಲಾವಣ್ಯ ಶೆಣೈ, ಡಾ. ರಘುವೀರ್, ಇಂದುಮತಿ ಜೈಪಾಲ್ ಇದ್ದರು.

# 9ಕ್ಕೆ ಡ್ರಗ್ಸ್ ಮುಕ್ತ ಅಭಿಯಾನ

ಮೈಸೂರು: ಯುವಜನತೆಯಲ್ಲಿ ಮಾದಕ ವಸ್ತು ಬಳಕೆ ವಿರುದ್ಧ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಡ್ರಗ್ಸ್ ಮುಕ್ತ ಕರ್ನಾಟಕ ಅಭಿಯಾನಕ್ಕೆ ಡಿ. 9 ರ ಬೆಳಗ್ಗೆ 10.30ಕ್ಕೆ ಜೆ.ಕೆ. ಮೈದಾನದಲ್ಲಿ ಚಾಲನೆ ದೊರೆಯಲಿದೆ ಎಂದು ರೇಡಿಯೋ ಜಾಕಿ ಅವಿನಾಶ್ ತಿಳಿಸಿದರು.

ಯುವಜನರಲ್ಲಿ ಮಾದಕ ವ್ಯಸನದ ಅಪಾಯದ ಬಗ್ಗೆ ಅರಿವು ಮೂಡಿಸುವುದು, ಈ ಅಪರಾಧದ ಬಗ್ಗೆ ಸಾರ್ವಜನಿಕರನ್ನು ಎಚ್ಚರಿಸುವುದೇ ಮೊದಲಾದ ಉದ್ದೇಶ ಹೊಂದಲಾಗಿದೆ. ಇದರ ಅಂಗವಾಗಿ ಸ್ತಬ್ಧ ಚಿತ್ರವೊಂದು ಜ. 19 ರವರೆಗೆ ಮೈಸೂರು, ಚಾಮರಾಜನಗರ, ಕೊಡಗು, ಪುತ್ತೂರು, ಮಂಗಳೂರು, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ದಾವಣಗೆರೆ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಮೊದಲಾದ ಕಡೆ ಸಂಚರಿಸಲಿದೆ ಎಂದು ಮಾಹಿತಿ ನೀಡಿದರು. ಶ್ರೀನಿಧಿ, ಕೆ.ಬಿ. ಲಿಂಗರಾಜು, ಶೋಭಿತ್ ರಂಗಪ್ಪ, ಮೋಹಿತ್ ಇದ್ದರು.

# ಕಠಿಣ ಶ್ರಮದಿಂದ ಜಯ ಖಚಿತ



ಚಾಮರಾಜನಗರ. ಕ್ರೀಡಾಪಟುಗಳು ಕಠಿಣ ಅಭ್ಯಾಸದಿಂದ ಕ್ರೀಡಾಕೂಟದಲ್ಲಿ ಭಾಗವಹಿಸಿದರೆ ಗೆಲುವು ಖಚಿತ ಎಂದು ಚಾಮರಾಜನಗರ ವಿಶ್ವ ವಿದ್ಯಾಲಯ ದೈಹಿಕ ನಿರ್ದೇಶಕ ಡಾ ಶಾಂತರಾಜು ತಿಳಿಸಿದರು

ಆಂಧ್ರಪ್ರದೇಶದಲ್ಲಿ ನಡೆಯಲಿರುವ ದಕ್ಷಿಣ ಭಾರತ ಅಂತರ ವಿಶ್ವವಿದ್ಯಾನಿಲಯದ ವಾಲಿ ಬಾಲ್ ಪಂದ್ಯಾವಳಿ ಕ್ರೀಡಾಕೂಟದಲ್ಲಿ ಚಾಮರಾಜನಗರ ವಿಶ್ವವಿದ್ಯಾನಿಲಯದ ತಂಡವು ಭಾಗವಹಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದು ಬಣ್ಣಿಸಿದರು. ಚಾಮರಾಜನಗರ ವಿಶ್ವವಿದ್ಯಾಲಯ ಅದಿಕಾರಿ ನಾಗೇಶ್ ಮಾತನಾಡಿ ಕ್ರೀಡೆಯಲ್ಲಿ ಸೋಲು ಗೆಲುವು ಸಾಮಾನ್ಯ ಆದರೆ ನಾವು ಭಾಗವಹಿಸುವುದು ಮುಖ್ಯ ಎಂದರು.

ತಂಡದ ತರಬೇತುದರಾದ ಜಯಶಂಕರ್, ಪುಟ್ಟರಾಜು ಎಸ್ ಜೆ, ತಂಡದ ಮ್ಯಾನೇಜರ್ ಡಾ. ಶಂಕರ್, ಚಾಮರಾಜನಗರ ವಿಶ್ವವಿದ್ಯಾಲಯ ಕ್ರೀಡಾ ಸಲಹೆ ಸಮಿತಿ ಸದಸ್ಯ ಜೆ ಬಂಗಾರು. ಕ್ರೀಡಾಪಟು ತಂಡದ ನಾಯಕ.ಕಿರಣ್. ಕ್ರೀಡಾ ವಿದ್ಯಾರ್ಥಿಗಳಾದ ರಾಹುಲ್. ಅಭಿ ವಿಕಾಸ್, ಯಶವಂತ್ ನಾಯಕ್. ಕಾರ್ತಿಕ್ ಯಶವಂತ್ ಮಾದೇವಪ್ರಸಾದ್ ಸಿದ್ದರಾಜು ಸಂಜಯ್ ಪ್ರವೀಣ್ ಇತರ ವಿದ್ಯಾರ್ಥಿಗಳು ಹಾಜರಿದ್ದರು.

# ಪಡುವಾರಹಳ್ಳಿಯಲ್ಲಿ ಹನುಮಜಯಂತಿ



ಮೈಸೂರು: ವಾರ್ಡ್ ನಂ 22 ವಿನಾಯಕ ನಗರದ ಶ್ರೀ ವಿದ್ಯಾಗಣಪತಿ ಮತ್ತು ಮಾರುತಿ ಯುವಕರ ಸಂಘವತಿಯಿಂದ ಏರ್ಪಡಿಸಲಾಗಿದ್ದ 58ನೇ ವರ್ಷದ ಶ್ರೀ ಹನುಮ ಜಯಂತಿ ಪೂಜಾ ಮಹೋತ್ಸವ ಹಾಗೂ ಶ್ರೀ ಆಂಜನೇಯ ಮೂರ್ತಿಯನ್ನು " ಭಾರತ್ ಬ್ರಾಸ್ ಬ್ಯಾಂಡ್ " ಸಮೇತ ವಿನಾಯಕನಗರ (ಪಡುವಾರಹಳ್ಳಿ) ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ನಡೆಯಿತು.

ಶ್ರೀ ಆದಿ ಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ಆದಿ ಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಭಾಗವಹಿಸಿದ್ದರು. ಮಾಜಿ ಸಂಸದ ಪ್ರತಾಪ್ ಸಿಂಹ, ಪಡುವಾರಹಳ್ಳಿ ಗ್ರಾಮಾಭ್ಯುದಯ ಟ್ರಸ್ಟ್ ನ ಅಧ್ಯಕ್ಷ ಮಹದೇವಸ್ವಾಮಿ, ಕಾರ್ಯದರ್ಶಿ ಎಂ.ಭೈರಪ್ಪ, ಉಪಾಧ್ಯಕ್ಷ ರಾಮಣ್ಣ, ಟ್ರಸ್ಟಿನ ಪದಾಧಿಕಾರಿ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕ ಎಸ್.ಕೃಷ್ಣಕುಮಾರ್(ಸಿಡಿ), ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ, ಎನ್ ಮಂಜುನಾಥ್, ಎನ್ ಬೆಟ್ಟೇಗೌಡ, ಜೆ ಯೋಗೇಶ್, ಈ.ಬಸವರಾಜು, ನಿಂಗಪ್ಪ, ಬಿ.ಕುಮಾರ್, ಕೃಷ್ಣಪ್ಪ, ಮರಳು ಜಲ್ಲಿ ಭೈರಪ್ಪ ಇನ್ನಿತರರು ಉಪಸ್ಥಿತರಿದ್ದರು.

# ರಸ್ತೆ ಗುಣಮಟ್ಟದ ಪರಿಶೀಲನೆ



ಚಾಮರಾಜನಗರ,ನಗರದ ತಾಲೂಕಿನ ಕೋಡಿಮೋಳೆ ಕೆರೆ ಏರಿ ಹಾಗು ಮಾರ್ಗ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ಗುಣ ಭರವಸೆ ಅಧೀಕ್ಷಕರ ಇಂಜಿನಿಯರ್ ಹರೀಶ್ ನೇತೃತ್ವದ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿತು.

ನಂಜನಗೂಡು – ಬಿ.ಆರ್. ಹಿಲ್ಸ್‌ಗೆ ಸಂಪರ್ಕ ಕಲ್ಪಿಸುವ ರಾಜ್ಯ ಹೆದ್ದಾರಿಯಾಗಿದ್ದು, ಎಚ್‌ಎಸ್–80 ಮಾರ್ಗ ಈ ರಸ್ತೆಯ ಅಭಿವೃದ್ದಿಗಾಗಿ ಓಆರೆಫ್ ಹಾಗೂ ಶಾಸಕರ ನಿಧಿಯಿಂದ 205 ಲಕ ರೂ. ಮಂಜೂರಾಗಿದೆ. ಕಾಮಗಾರಿ ಪ್ರಗತಿಯಲ್ಲಿದ್ದು, ಕೋಡಿಮೋಳೆ ಕೆರೆ ಏರಿ ಹಾಗೂ ಮಾರ್ಗದ ರಸ್ತೆ 1.5 ಕಿ.ಮೀ. ಉದ್ದ ರಸ್ತೆ ಕಾಮಗಾರಿಯ ಗುಣಮಟ್ಟವನ್ನು ಖುದ್ದು ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ಮಾಡುವ ಜೊತೆಗೆ ಗುಣಮಟ್ಟದ ಕಾಮಗಾರಿ ನಿರ್ವಹಣೆ ಮಾಡುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಿದರು.

**▸▸ ಕೋಡಿಮೋಳೆ ಮಾರ್ಗದ ರಸ್ತೆ ಕಾಮಗಾರಿ ಸ್ಥಳಕ್ಕೆ ಇಂಜಿನಿಯರ್ ತಂಡ ಭೇಟಿ; ವೀಕ್ಷಣೆ**

ಗುಣ ಭರವಸೆಯ ಅಧೀಕ್ಷಕ ಇಂಜಿನಿಯರ್ ಹರೀಶ್ ಅವರು ಕಾಮಗಾರಿ ಪರಿಶೀಲನೆ ಬಳಿಕ ಮಾತನಾಡಿ, 205 ಲಕ್ಷ ರೂ. ವೆಚ್ಚದಲ್ಲಿ ನಂಜನಗೂಡುನಿಂದ ಬಿಳಿಗಿರಿರಂಗನಬೆಟ್ಟದ ವರೆಗೆ ರಸ್ತೆ ಅಭಿವೃದ್ದಿಪಡಿಸಲಾಗುತ್ತಿದೆ. ಕೋಡಿ ಮೋಳೆ ಕೆರೆ ಏರಿ ರಸ್ತೆ ಸಂಪೂರ್ಣವಾಗಿ ಶಿಥಿಲಗೊಂಡಿದ್ದು, ಹೀಗಾಗಿ ಈ ರಸ್ತೆಯನ್ನು ಅಭಿವೃದ್ದಿಪಡಿಸಲಾಗುತ್ತಿದೆ. ಕಾಮಗಾರಿ ಗುಣಮಟ್ಟವನ್ನು ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ಮಾಡಿರುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಪಿಡ್ಲ್ಯುಡಿ ಇಲಾಖೆಯ ಸಹಾಯಕ ಕಾರ್ಯಪಾಲಕರ ಅಭಿಯಂತರರಾದ ಶಾಂತಮ್ಮ, ಎಇಇ ರೂಪ, ಕಿರಿಯ ಇಂಜಿನಿಯರ್ ಕೃಷ್ಣಮೂರ್ತಿ, ಗುತ್ತಿಗೆದಾರ ಮಲ್ಲು ಮೊದಲಾದವರು ಹಾಜರಿದ್ದರು.

**ಪಡಗೂರು ಗ್ರಾಪಂ ಅಧ್ಯಕ್ಷೆ ಸುಮಾ ಅವರ ಪತಿ ಕಾಳಿಂಗನಾಯ್ಕ ಎಂಬವರಿಂದ ಅಧಿಕಾರ ದುರ್ಬಳಕೆ**

# ಅಧಿಕಾರ ದುರ್ಬಳಕೆ; ಗ್ರಾಪಂ ಸದಸ್ಯತ್ವ ರದ್ದು



ಗುಂಡ್ಲುಪೇಟೆ: ತಾಲೂಕಿನ ಪಡಗೂರು ಗ್ರಾಮಪಂಚಾಯತಿ ಅಧ್ಯಕ್ಷೆ ಸುಮಾ ಅವರ ಪತಿ ಕಾಳಿಂಗನಾಯ್ಕ ಎಂಬವರು ಅಧಿಕಾರ ದುರ್ಬಳಕೆ ಮಾಡಿಕೊಂಡು ಪಂಚಾಯತಿಗೆ ಸಂಬಂಧಿಸಿದ ಕಡತಗಳನ್ನ ಪರಿಶೀಲನೆ ಮಾಡುವುದು ಹಾಗೂ ಪತ್ನಿಯ ಬದಲಾಗಿ ತಾವೇ ಅಧಿಕಾರ ಚಲಾಯಿಸಿ ಗ್ರಾಮಪಂಚಾಯತಿ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವ ಮೂಲಕ ಕಾನೂನು ಉಲ್ಲಂಘನೆ ಮಾಡಿರುವುದು ವಿಚಾರಣೆಯಲ್ಲಿ ದೃಢವಾದ ಹಿನ್ನೆಲೆ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಅಧಿನಿಯಮ 1993 ರನ್ವಯ ಅಧ್ಯಕ್ಷ ಹಾಗೂ ಸದಸ್ಯತ್ವ ಸ್ಥಾನದಿಂದ ರದ್ದುಗೊಳಿಸಿ ಮತ್ತು ಮುಂದಿನ ಆರು ವರ್ಷಗಳ ಕಾಲ ಚುನಾವಣೆಯಲ್ಲಿ ಸ್ಪರ್ದಿಸದಂತೆ ಅನರ್ಹಗೊಳಿಸಿ ಆದೇಶ ಹೊರಡಿಸಲಾಗಿದೆ.

ಗ್ರಾಮಪಂಚಾಯತಿ ಸದಸ್ಯ ರಾಜೇಂದ್ರ ಎಂಬವರು ಅಧ್ಯಕ್ಷೆ ಶ್ರೀಮತಿ ಸುಮಾ ಅವರ ಕಾರ್ಯವೈಖರಿಗೆ ಅಡ್ಡಿಪಡಿಸಿ ಗಲಾಟೆ ಮಾಡಿರುವುದಾಗಿಯೂ ಹಾಗೂ ತೇಜೋವದೆಗೆ ಪ್ರಯತ್ನಿಸಿ ಇಲ್ಲಸಲ್ಲದ ಆರೋಪಗಳನ್ನ ಮಾಡುವ ಮೂಲಕ ಘನತೆ ಕುಗ್ಗುವ ಕೆಲಸಕ್ಕೆ ಮುಂದಾಗಿದ್ದಾರೆ ಈ ಕುರಿತು ವಿಚಾರಣಾ ವರದಿ ಸಲ್ಲಿಸಿರುವುದು ಸಮಂಜಸವಾಗಿಲ್ಲ ಆದ್ದರಿಂದ ಸರ್ಕಾರ ಕೂಲಂಕುಷವಾಗಿ ಪರಿಶೀಲಿಸಿ ನಮ್ಮ ಕಕ್ಷಿದಾರರು ಅಧ್ಯಕ್ಷ ಹುದ್ದೆಯಲ್ಲಿ ಮುಂದುವರಿಯುವಂತೆ ಅವಕಾಶ ಮಾಡಿಕೊಡುವಂತೆ ಕೋರಿದ್ದರು. ಅಧ್ಯಕ್ಷರ ಪ್ರಸ್ತಾವನೆಯನ್ನು ಪರಿಗಣಿಸಿದ ಪ್ರಾದೇಶಿಕ ಆಯುಕ್ತರು ಅಧ್ಯಕ್ಷೆ ತಮ್ಮ ಮೇಲಿನ ಆರೋಪಗಳನ್ನ ನಿರಾಕರಿಸುವಂತೆ ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಯಾವುದೇ ಸಮಂಜಸ ಕಾರಣಗಳು ಇಲ್ಲವಾದದು ಹಾಗೂ ಪೂರಕ ಧಾಖಲೆಗಳನ್ನ ಸಲ್ಲಿಸದ ಕಾರಣ ಆಕೆಯ ಪರವಾಗಿ ಅವರ ಪತಿ ಕಾಳಿಂಗನಾಯ್ಕ ಎಂಬವರು ಆಡಳಿತದಲ್ಲಿ ಹಸ್ತಕ್ಷೇಪ ಮಾಡಿರುವುದು ವಿಚಾರಣಾ ವರದಿಯಲ್ಲಿ ಸಾಭೀತಾದ ಹಿನ್ನೆಲೆ ಹಾಗೂ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ (43ಎ) ರಲ್ಲಿ ಉಲ್ಲೇಖಿಸಿರುವಂತೆ ಗ್ರಾಮಪಂಚಾಯತಿ ಅಧ್ಯಕ್ಷರ ಕುಟುಂಬ ಸದಸ್ಯರು ಸಾರ್ವಜನಿಕ ನಿರ್ವಹಣೆ ಮತ್ತು ಹಣಕಾಸು ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡದಂತೆ ನಿಯಮವನ್ನ ಉಲ್ಲಂಘನೆ ಮಾಡಿರುವುದು ಕಂಡುಬಂದಿದೆ ಎಂದು ಸದಸ್ಯತ್ವ ರದ್ದುಗೊಳಿಸುವುದಲ್ಲದೆ ಆರು ವರ್ಷಗಳ ಕಾಲ ಚುನಾವಣ ಪ್ರಕ್ರಿಯೆಯಿಂದ ಅನರ್ಹಗೊಳಿಸಿ ಆಯುಕ್ತರು ಆದೇಶ ಹೊರಡಿಸಿದ್ದಾರೆ.

# ಬೆಳ್ಳಿ ಮೂಡಿತೂ ಭಾವ ಕಾಡಿತೊ



ಇವುಗಳನ್ನ ಮುಚ್ಚಿಟ್ಟಷ್ಟು ಮತ್ತೆ ಮತ್ತೆ ಹಣಿಕಿ, ಇಣುಕಿ ಬಿಚ್ಚಿಟ್ಟುಕೊಳ್ಳುವ ತವಕ, ಕಂಡವರ ಕಣ್ಣಿಗೆ ಬಿದ್ದೀತು ಎಂದು ಪದೇಪದೇ ನಾನು ಬಚ್ಚಿಡುವ ಪ್ರಯತ್ನ ಮಾಡುತ್ತಲೇ ಇರುತ್ತೇನೆ ಆದರೆ ಇವು ಯಾರಾದರೂ ಸಿಕ್ಕರೆ ಸಾಕು ನನಗಿಂತ ಮುಂಚೆ ಹಾಯ್ ಎಂದು ಹಲ್ಕಿರಿದು, ಹುಲ್ಲಿನ ಹೊರೆಯ ದಂಟಿನ ಹಂಗ ಎಳೆ ಎಳೆಯಾಗಿ ಕಂಡುಬಿಡುತ್ತವೆ. ಇವುಗಳನ್ನು ಮುಚ್ಚಿಡಲು ಮಾಡಿದ ಪ್ರಯತ್ನ ಸಾಮಾನ್ಯ ಅಲ್ಲ! ಭೂಮಧ್ಯ ರೇಖೆಯಲ್ಲಿರುವಂತಹ ನೆತ್ತಿಯ ಬೈತಲನು ಸರ್ಕಾರಿ ಹೈವೇ ಯಂತೆ ಅತ್ತಿತ್ತ ಸರಸ್ಯಾಡಿಸಿ ನನ್ನ ಸಿಂಧೂರದ ದಿಕ್ಕನ್ನು ಬದಲಿಸಿ ಪ್ರಯತ್ನಿಸಿದೆ ಆದರೂ ಕೂಡ ಯಾರೇ ಭೇಟಿಯಾದರು ನನಗಿಂತ ಮುಂಚೆ ತಲೆಯಲ್ಲಿ ಎದ್ದು ಹಲ್ಕಿರಿದು ನಿಂತುಬಿಡುತ್ತವೆ. ಕಂಡವರಾದರೂ ಸುಮ್ಮನಿರಬಾರದೇ,, "ಅಯ್ಯೋನಿಮಗೆಷ್ಟು ಬಿಳಿ ಕೂದಲು ಆಗಿವೆ" ಅಂತ ಏನೋ ಕಂಡುಹಿಡಿದವರಂತೆ ಯುರೇಕಾ... ಯುರೇಕಾ ಎಂದು ಬಾಯಿ ತೆಗೆಯುತ್ತಾರೆ. ಅದೇ ಹೌದು,, ಆಗಿರೋದು ಬಿಳಿ ಕೂದಲು, ಈಗ ಆಗಿವೆ ವಯಸ್ಸಿನ ಅನುಗುಣವಾಗಿ ಏನು ಮಾಡುವದು. ಜನರಾದರೂ ಎಂತವರು ಲಕ್ಷಾನುಗಟ್ಟಲೆ ಎಣಿಸಲು ಬಾರದಷ್ಟು ಕಪ್ಪು ಕೂದಲಗಳ ಮಧ್ಯೆ ಮಧ್ಯೆ ಇರುವ ಈ ಒಂದೊಂದೇ ಎಳೆಯಾಗಿ ಆಗಿರುವಂತಹ ಬಿಳಿ ಕೂದಲನ್ನು ತಟ್ಟನೆ ಕಂಡು ಹಿಡಿದುಬಿಡುತ್ತಾರೆ ನಮ್ಮ ತಪ್ಪುಗಳನ್ನು ಕಂಡುಹಿಡಿಯುವಂತೆ, ಅವುಗಳನ್ನು ಮುಚ್ಚಿಡಲು ನಾನೆಷ್ಟು ಸಾಧನೆ ಮಾಡಿದೆನೆಂದರೆ ನನ್ನ ಕೂದಲಿನ ವಿನ್ಯಾಸ ಅಕ್ಕಮಹಾದೇವಿಯಂತೆ ಯಾರ ಹಂಗ ನನಗೇನು ಚನ್ನ ಮಲ್ಲಿಕಾರ್ಜುನಾ ಎಂಬಂತೆ ಫ್ರೀ ಬಿಡುವುದರಿಂದ ಹಿಡಿದು ನಡು ನೆತ್ತಿಯಲಿ ನಾರದ ಮುನಿಯ ತುರುಬಿನಂತೆ ಬಿಗಿ ಹಿಡಿದು ಕಟ್ಟಿ ನಂದೇನೋ ಸ್ವಾಮಿ ನಿನ್ನದಯವಿರದೇ.... ನಾರಾಯಣಾ...ಎಂದು ಹಲವು ವಿಧದಿ ಬದಲಾಯಿಸಲು ವಿಫಲ ಪ್ರಯತ್ನದಿ ವ್ಯರ್ಥವಲ್ಲವೇ ಜನುಮಾ ವ್ಯವರ್ಥವಲ್ಲವೇ.... ಎನ್ನುವುದೇ ಆಯಿತು. ಇವು ಆಲದ ಮರದ ಬಿಳಲಿನಂತೆ ಎಳೆ ಹಿಡಿದು ಹೊರಗೆ ಹಣಿಕೆ ಹಾಕುವುದೇ ಅವುಗಳ ಕೆಲಸ. ನನಗಂತೂ ಈಗ ಕಂಡವರ ಮಾತು ಕೇಳಿ ಕೇಳಿ ಸಾಕಾಗಿದೆ."ಅಲ್ರಿ ನಿಮಗೂ ಎಷ್ಟು ಬಿಳಿ ಕೂದಲಾಗ್ಯಾವ ... "ಅಂತ ಅಂದಾಗ "ಆದ್ರಾಗಲಿ, ನಿಮಗೇನ್ರಿ ತ್ರಾಸು " ಎಂದು ಮುಖಕ್ಕೆ ಹೊಡೆದ ಹಾಗೆ ಕೇಳಬೇಕೆನಿಸುತ್ತದೆ, ಮನಸ್ಸಿನಲ್ಲಿರುವಷ್ಟು ಧೈರ್ಯ ಮಾತಿನಲ್ಲಿ ಇರದ ಕಾರಣ ಮೆತ್ತಗಾಗುತ್ತೇನೆ.

ಇಷ್ಟಕ್ಕೆ ನಿಂತರೆ ಸುಮ್ಮನಾಗಬಹುದಿತ್ತು ಆದರೆ ಇವರ ಕಕ್ಕುಲಾತಿ ಮತ್ತೆ ಮುಂದುವರೆಯುತ್ತದೆ ಮಲತಾಯಿ ಮಮತೆ ಯಂತೆ,,"ನಿಮಗೂ ವಯಸ್ಸಾತೇನ್ರಿ ವೈನಿ" ಅಂತ ದೇವರು ಕೊಟ್ಟ ಅಷ್ಟು ಹಲ್ಲುಗಳನ್ನು ಊದ್ದಕ್ಕೆ ಹಿರಿದು ತೋರಿಸಿ ನಗುವುದು ಅಪಹಾಸ್ಯವೋ ನನಗೆ ವಯಸ್ಸಾಯಿತು ಎಂದು ಖುಷಿಯೋ ಒಂದೂ ಅರ್ಥವಾಗುವುದಿಲ್ಲ. ಮತ್ತ ವಯಸ್ಸಾಗದೆ ಇರ್ತದಾ.. ನಾನೇನು ಅಶ್ವತ್ಥಾಮನ ವಂಶದವಳಾ ಹನುಮಂತನ ತಂಗಿಯಾ.... ಅಂತ ವಾಪಸ್ ಹೇಳಬೇಕು ಅನಿಸಿದರೂ, ಮತ್ತದೇ ಅಧೈರ್ಯದ ಜಂತಿಗೆ ಜೋತು ಬಿದ್ದು ಸುಮ್ಮನಾಗಿಬಿಡುತ್ತೇನೆ.

ಇನ್ನು ನನ್ನ ಖಾಸಾ ಖಾಸ ಹಿತೈಷಿಗಳು ಅನಿಸಿಕೊಂಡವರು ತಲೆಯಲ್ಲಿ ತೂರಿ ಬಂದ ಬೆಳ್ಳಿ ರೇಖೆಗಳಿಗೆ ಪರಿಹಾರವನ್ನು ಹೇಳುತ್ತಾರೆ. ಇವು ಕೇವಲ ಬಿಳಿ ಕೂದಲುಗಳಲ್ಲ ಕರಿಬಾನಿನಲ್ಲಿ ಮಿಂಚಿನಂತೆ ಕುಕ್ಕುವ ಸಿಡಿಲುಗಳೇನು ಎನಿಸಿ ಬಿಡುವ ಹಾಗೆ ನನ್ನನ್ನು ತಲ್ಲಣ ಗೊಳಿಸುತ್ತಾರೆ. ಪುಣ್ಯ ಇದಕ್ಕೆ ಪರಿಹಾರವಾಗಿ ಹೋಮಹವನ ಇನ್ನು ಯಾರು ಹೇಳಿಲ್ಲ. ಸರಿ ಆಗಿರುವುದು ಆಗಲಿ ಅಂತ ಅವರು ಹೇಳುವ ಪರಿಹಾರ ಕೂಡ ಬರೆದುಕೊಂಡೆ. ಅದು ಅಷ್ಟೇನೂ ಸುಲಭದಲ್ಲ, !! ಸಾರಿನ ಪುಡಿ, ಹುಳಿ ಪುಡಿ ಮಾಡುವ ಕ್ರಮದಲ್ಲಿ ಅದಕ್ಕೂ ಒಂದು ವಿಧಾನ. ಕಪ್ಪನೆಯ ಕಬ್ಬಿಣದ ಬುಟ್ಟಿ, ಮೆಹಂದಿ ಪುಡಿ, ಇಂಡಿಗೋ ಪುಡಿ, ಕಾಫಿ ಪುಡಿ,ಟೀ ಪುಡಿ,ಇವುಗಳನ್ನೆಲ್ಲ ಮಿಶ್ರಣ ಮಾಡಿ ರಾತ್ರಿಯೇ ನೆನೆ ಇಟ್ಟು,(ನೆನಪಾದರೆ) ಮಾರನೆದಿನ ಈ ಬೆಳ್ಳಿ ರೇಖೆಗಳಿಗೆ ಹಚ್ಚಿದರೆ ಈ ಬಿಳುಪು ಕಡಿಮೆಯಾಗುವುದಂತೆ. ಇದನ್ನು ಬರೆದುಕೊಂಡು ಹಾಗೇ ಹಿನ್ನೆಲೆಯಲ್ಲಿ ಆ ಚೀಟಿಗಳು ಕೂಡ ಕಳೆದು ಹೋಗುತ್ತಿದ್ದವು . ಹುಟ್ಟಾ ಆಲಸ್ಯದ ಅಭಿಮಾನಿಯಾಗಿದ್ದ ನನಗೆ ಇಂಥವುಗಳನ್ನು ಮಾಡುದೆಂದರೆ ಭೀಷ್ಮ ಪ್ರತಿಜ್ಞೆ ಇದ್ದಂತೆ. ಇನ್ನು ಈಗೀಗ ಆ ಆಲಸ್ಯಕೆ ಮರಗುಳಿತನದ ಮಧುವೂ ಸೇರಿ ದುರ್ಯೋಧನ ಮತ್ತು ಕರ್ಣನಿಗಿಂತ ಮೀರಿದ ಸ್ನೇಹ ಮಾಧುರ್ಯ ತುಂಬಿ ಆಗುವ ಕೆಲಸ ಕಾಲು ಕತ್ತರಿಸಿ ಬೀಳುತಿವೆ. ಇಷ್ಟೆಲ್ಲಾ ಕಷ್ಟಪಡುವುದೇನು ಬೇಡ ಸುಮ್ಮನೆ ಸಂತ್ಯಾಗ ಸಿಗುವಂತ ಕರೀಬಣ್ಣತಂದು ಬಳಿದುಕೊಂಡು ಬಿಡಲೇಕೊಂಡು ಅಂತ ಅನಿಸಿದ್ದು ಖರೆ, ಆದ್ರ ಅದಕ್ಕ ಇನ್ನೊಬ್ರು ಹೇಳಿದ್ದು ,ಹೇರ ಡ? ಮಾಡುವದರಿಂದ ಕ್ಯಾನ್ಸರ್ ಬರುವುದು. ಮಾರಿ ಮ್ಯಾಲ ಕರೀ ಕಲೆ ಮತ್ತು ಕೂದಲು ಹೆಚ್ಚು ಬೆಳ್ಳಗಾಗ್ತಾವೆ ಅಂತ, ಹೀಗಾಗಿ ಆಠ ಠಡಿ ಜುಜ ಅನ್ನುವುದು ಜಥಿಜ ಜುಜ ಪರಿಹಾರ ಮತ್ತೊಂದಸ್ಟು ಹಿಂದಕ್ಕೆ ಹೋಯಿತು.

ಖಾಸ ಗೆಳತಿಯ ಮುಂದೆ ಹೇಳಿದೆ "ಪ್ರತಿಯೊಂದು ವಯಸ್ಸಿಗೆ ಅದರದೇ ಆದ ಸುಖ ದುಃಖ ಸಂತೋಷ ಇರ್ತದ, ಬಿಳಿ ಕೂದಲು ಆದರೆ ಆಗಲಿ ಸುಮ್ಮನೆ ಇದ್ದು ಬಿಡುವ, ಇಟ್ಟ್ಯಾಂಗ ಇರುವೆನಯ್ಯ ಹರಿ, ದಾಸರ ಪದದಂತೆ", ಆದರೆ ನನ್ನ ಇಂತಹ ಒಣ ಅಹಂಕಾರದ ಮಾತುಗಳು ಮಳೆಗಾಲದಲ್ಲಿ ಎದ್ದ ನಾಯಿ ಕೊಡೆಯಂತೆ!! ಅವಳಿಗೆ ಗೊತ್ತು ಹೆಂಗ ತಲೆ ಸವುರಬೇಕಂತ, ಗೆಳತಿ" ನೋಡು ಹಿಂತಾ ಎಲ್ಲ ಒಣಾದಿಮಾಕ ಸಾಕು, ನಿನಗ ಮೆಹಂದಿ ಕಲಿಸಿಕೊಳ್ಳುವುದಕ್ಕೆ ಆಲಸ್ಯ! ಆಲಸತನದ ಹುದಲನ್ಯಾಗ ಸಿಕ್ಕ ಬಿದ್ದ ಎಮ್ಮಿ ಯಂಗ ಜೀವದ ಆಶಾ ಬಿಡುವ ಮಾತು ಬ್ಯಾಡಾ!!ಇಂತಹ ಸ್ಮಶಾನ ವೈರಾಗ್ಯ ನನ್ನ ಮುಂದೆ ತೋರಿಸಬೇಡ, ಈಗ ಕಲಸಿದ ಮೆಹಂದಿಗಳೇ ಪ್ಯಾಕೆಟ್ ಒಳಗ ಸಿಗ್ತಾವ. ಆನ್ಲೈನ್ ಆರ್ಡರ್ ಮಾಡಿ ತರಿಸಿಕೋ. ಇಟ್ಟಂಗಿರ್ತಾಳಂತ! ದೇವರು ಕೊಟ್ಟಿದ್ದನ್ನು ಉಳಿಸಿಕೊಳ್ಳುವ ಬುದ್ದಿಬೇಕು!!"




ಹೀಗೆ ಉಗಿದು ಉಪ್ಪಿನಕಾಯಿ ಹಾಕಿದಳು. ಹೀಗೆ ಕಾಲಲ್ಲಿ ಮುರಿದ ನೆಗ್ಗಿಲಮುಳ್ಳಿನಂತೆ ನಿಂತಲ್ಲೇನಿಲ್ಲದೆ ನಡೆಯುವಂತೆ ಮಾಡುವ ಗೆಳತಿಯರನ್ನು ನಾನು ಜೊತೆಯಲ್ಲೇ ಇಟ್ಟುಕೊಂಡಿರುತ್ತೇನೆ, ನನ್ನ ಆಲಸ್ಯದ ದಪ್ಪ ಕೌದಿಯನ್ನು ನಿರ್ಮೋಹದ ಪದರು ಎಂದು ಎಷ್ಟೇ ನಾಟಕ ಮಾಡಿ ತೋರಿಸಿದರು ಮುಸುಕೆಳೆದು ನನ್ನನ್ನು ವಾಸ್ತವಕ್ಕೆ ತಂದು ನಿಲ್ಲಿಸಿ ಬಿಡುತ್ತಾರೆ. ಹಳೇ ಮುಳ್ಳು ಮುರಿದು ಅಂಗಾಲಿಗೆ ಆನೆಯಾದರೂ, ಪಿನ್ನು ತೆಗೆದುಕೊಂಡು ಹಡ್ಡುವ ಈ ಗೆಳತಿಯರು. ಇಷ್ಟು ಉಪಾಯ ನನಗೆ ಸಾಕಾಯ್ತು ಮಲಗುವರಿಗೆ ಹಾಸಿಗೆ ಹಾಕಿ ಕೊಟ್ಟಂಗೆ.

ಇನ್ನು ಇದನ್ನು ಆರ್ಡರ್ ಮಾಡಿ ತಂದು ಕಪಾಟಿನಲ್ಲಿ ಕುಕ್ಕಿದ್ದು ಆಯಿತು. ಆದರೆ ತಿಂಗಳುಗಳು ಉರುಳಿ ಹೋದರು ಅದೇನು ನನ್ನ ತಲೆಯನ್ನು ಮುಟ್ಟಿ ನೋಡಲೇ ಇಲ್ಲ!! ಕಪಾಟು ತೆಗೆದಾಗೊಮ್ಮೆ ಆ ಮೆಹಂದಿಗಳು ಚಿಕ್ಕ ಮಕ್ಕಳಂತೆ "ಔಕ್ " ಅಂತ ಆಟ ಆಡಿದರೂ ಹೊರಗಂತು ಬರಲಿಲ್ಲ. ಆದರೆ ಪಿನ್ ತಗೊಂಡು ಕಾಲಾಗಿನ ಆನಿ ಒಳಗಿನ ಮುಳ್ಳ ಎಷ್ಟೇ ಹಳೆಯದಾದರೂ ಕೆರೆದು ತೆಗಿತೀವಿ ಅನ್ನೋರಿಗೆ ಏನು ಕಮ್ಮಿ? ಅವತ್ತು ಸಂಜೆ ಬಂದಳು ಖಾಸಾ ದೋಸ್ತ್! ಮರು ದಿವಸ ಅವಳಿಗೂ ನನಗೂ ಕೂಡಿಯೇ ಒಂದು ಮದುವೆಗೆ ಹೋಗೋದಿತ್ತು "ಮೊದಲೇ ಕುಂಟಾಡಿ ನಡಿತಿ, ಮ್ಯಾಲೆ ನಿನ್ನು ಈ ಬಿಳಿ ಕೂದಲ!! ಹಿರೇಮನಶ್ಯಾಳು ಅನ್ಕೊಂಡು ಎಲ್ಲಾರೂ ಕಾಲಿಗ್ ಬಿದ್ದಗಿದ್ದಾರು,!!ಬರೇ ಹಿರೇ ಮನಶ್ಯಾಳು ಅಲ್ಲ.... ಹಳೇ ಕಾಲದ ಪಳೆಯುಳಕಿ ಅನಕೊಂಡಾರು... ಈಗೀಗ ಅಜ್ಜಿಗೋಳ ಕೂದಲ ಕೂಡ ಕರ್‍ರಗ ಇರ್ತಾವು... ಕಪಾಟಿನ್ಯಾಗಿನ ಮೆಹಂದಿಗೆ ಮುಕ್ತಿ ಕಾಣಿಸು!!" ಅಂದಳು.

"ಅಲ್ಲ ನಮ್ಮಮ್ಮಾಗ ಎಷ್ಟು ವಯಸ್ಸಾದರೂ ಒಟ್ಟೆ ಬಿಳಿ ಕೂದಲು ಇರಲಿಲ್ಲ. ನನಗ್ಯಾಕೆ ಇಷ್ಟು ಜಲ್ದಿ ಬಂದವೂ." ಅಂತ ಕೇಳಿದೆ ನಾನು.

ಅದಕ್ಕೆ " ನಿಮ್ಮಮ್ಮಗ ಬಿಳಿ ಕೂದಲು ಇರ್ಲಿಲ್ಲ, ಆದರೆ ನಿಮ್ಮಪ್ಪಗ ಇದ್ದು ಇಲ್ಲ,!! ಹೆರಿಡಿಟಿ!! ಯಾವತ್ತು ಹೆರಿಡಿಟ ಚಲೋ ಬರಂಗಿಲ್ಲ, ಕೆಟ್ಟದ್ದು ಬಂದ ಬರ್ತಾವ! ಅಡ್ಡಡ್ ಪ್ರಶ್ನೆ ಕೇಳುವುದು ಬಿಟ್ಟು ಮುಂದೆ ಏನ್ ಮಾಡಬೇಕು ಅದನ್ನ ಮಾಡು!!" ಮತ್ತಷ್ಟು ಶುದ್ಧ ಶಬ್ದಗಳಿಂದ ನನಗೆ ಪುಷ್ಪಾರ್ಚನೆ ಮಾಡಿ ಹೋದಳು . ನಾನು ಹಠಕ್ಕೆ ಬಿದ್ದಂತೆ ಮರುದಿನ ಕೈಯಲ್ಲಿ ಸುರಿದುಕೊಂಡು ಅದನ್ನು ತಲೆಗೆ ಸವರಿಕೊಂಡಿದ್ದು ಆಯ್ತು. ಇನ್ನು ಅದನ್ನು ಗಂಟೆಗಳ ಕಾಲ ಒಣಗಿಸಬೇಕಂತೆ. ಆದರೆ ಎಂದು ಹುಳ ಕೂಡ ಹೊಡಿಲಾರದವನು ಇಲಿ ಹೊಡೆದರೆ ಹುಲಿ ಹೊಡೆದಂಗ್ ಮಾಡಿದ್ನಂತ, ಹಂಗೆ ನನಗೂ ಒಂದು ಅಮೋಘವಾದದ್ದು ಏನೋ ಮಾಡಿದೆನೆಂಬ ಹೆಮ್ಮೆಯಿಂದ ಕೆಲಸದವಳು ಬಂದ ಕೂಡಲೇ ಆಕೆ ಮುಂದೆ ಹೇಳಿದೆ.. ಆದರೆ ತನ್ನ ಕಣ್ಣನ್ನು ಸಣ್ಣದು ಮಾಡಿ ನನ್ನ ಹಾರಾಟವನ್ನೆಲ್ಲ ಉತ್ತರ ಕುಮಾರನ ಪೌರುಷದಂತೆ, ಅಡಿಕೆ ಕಡಿದು ಉಳಿದ ರಸವನು ಉಗುಳುವಂತೆ ತಾತ್ಸಾರವಾಗಿ " ನೀವು ಹಚ್ಚಿಕೊಂಡಿದ್ದು ಏನು ಉಪಯೋಗ ಇಲ್ಲ!! ಹಿಂಗ ಕೊಬ್ಬರಿ ಎಣ್ಣೆಯಂಗ ಕೈಯಾಗ ಹಾಕೊಂಡು ತಲೆಗ ಬಡ್ಕೊಂಡ್ರ ಕೂದಲು ಬಣ್ಣ ಆಗುದಿಲ್ಲ, ಹಂಗ... ಬ್ರಸ್ ತಗೊಂಡ ನ?ಸಾಗಿ ಗ್ವಾಡಿಗೆ ಪ?ಂಟ್ ಬಳದಂಗ... ಸಂದೀ ಸಂದೀ ಗೂ ಹಚ್ಕೋಬೇಕು!! ಹಂಗ ಮೆಂದಿ ಹಚ್ಗೋಳೂದು ಒಂದ ವಿದ್ಯಾ.... ಹನಿ ಕೆಳಗ ಬೀಳಬಾರದು, ಹನಿ ಮಾರಿಗೆ ಸಿಡಿಬಾರದು.... ಹಂಗ ಹವುರಗ ಹೂವಿನ ಪಕಳಿಗೆ ಬಣ್ಣ ಬಿಟ್ಟಂಗ ಬಿಡಬೇಕ... " ಅಂತ ನನ್ನ ಮಹತ್ಕಾರ್ಯ ಕಸ ಬಳಿದು ಮೂಲೆ ಗುಂಪು ಮಾಡಿಬಿಟ್ಟಳು. "ಅಲ್ಲಾ ಹನಿ ಮಾರಿಗೆ ಸಿಡಿಬಾರದು, ಕುತ್ತಿಗೆ ಇಳಿಬಾರದು ಅನ್ನಾಕ ಅದೇನು ರಕ್ತ ಬೀಜಾಸುರ ಏನು?" ಅಂದೆ.

"ಅಯ್ಯ ಸಿಡದರ ಮೆಹಂದಿ ಕಪ್ಪು ಕಲೆ ಮಾರಿಗೆ ಉಳಿಯಂಗಿಲ್ಲೇನ್ರೀ?"ಅಂದಳು.

" ಹೌದೌದು!!, " ಅಂತ ನನ್ನ ಅಜ್ಞಾನ ಕ್ಕೆ ಬ್ರೇಕ್ ಹಾಕಿದೆ. ಅಬ್ಬಾ ಭಗವಂತ ಇಷ್ಟು ವರ್ಷ ಏನು ತ್ರಾಸ್ ಇಲ್ಲದ ಹೆಂಗ ಕರಿಬಣ್ಣವನ್ನು ಕರುಣಿಸಿದ್ದ ಅಂದ ಬಿಟ್ಟೆ. ನನ್ನ ಆಲಸ್ಯಾಧಾರಿತ ಸೋಲುಗಳಿಗೆ,ನಾನು ಯಾವಾಗಲೂ ಆಧ್ಯಾತ್ಮದ ಅರಿವಿನ ದೀಪ ಹಿಡಿದು ನಿಂತು ಬಿಡುತ್ತೇನೆ. ಅಲ್ಲಲ್ಲಿ ಕಾಣುವ ಈ ಬಿಳಿಯ ಕೂದಲುಗಳನ್ನು ಮುಚ್ಚುವುದು ಇಷ್ಟೊಂದು ಕಷ್ಟವಾದರೆ ಈ ಸಿನಿಮಾ ತಾರೆಯರು ಯಾವಾಗಲೂ ತಮ್ಮ ಕೂದಲು ಕಪ್ಪಾಗಿರುವಂತೆ ಮುಖದ ಮೇಲೆ ನೀರಿಗೆ ಬರಲಾರದಂತೆ ನೋಡಿಕೊಳ್ಳಲು ಅದೆಷ್ಟು ಶ್ರಮಪಡುತ್ತಿರಬೇಕು, ಆ ಸೌಂದರ್ಯವನ್ನು ಕಾಪಾಡಿಕೊಳ್ಳಬೇಕೆಂದು ಅವರು ತಮ್ಮ ಊಟ, ಆಹಾರ, ನಿದ್ರೆ ನಿಯಂತ್ರಿಸಿ ಶತಾಯಗತಾಯ ಪ್ರಯತ್ನವನ್ನು ಮಾಡುತ್ತಾರೆ.

ಅದ್ಯಾಕೋ ತಲೆಯಮೇಲಿನ ಬಿಳಿಕೂದಲು, ಮುಖದ ಮೇಲಿನ ಕಪ್ಪು ಕಲೆಗಳು ಎದ್ದು ರಾವು ಹೊಡೆಯುತ್ತವೆ. ಇದಕ್ಕೂ ಮೀರಿ ಒಂದು ಮಾತು ಯಾವಾಗಲೂ ಎನಿಸುವುದು, ಮನದ ಮೇಲೆ ಇರುವ ಕಪ್ಪು ಕಲೆಗಳು, ಹೃದಯಕ್ಕಾಗಿರುವ ನೋವಿನ ಗೆರೆಗಳು, ಮನಸ್ಸಿಗೆ ಯಾರೋ ಗುದ್ದಿದ ನೋವಿನ ಗುಳಿಗಳು, ಅವರಿವರ ಮಾತಿಗೆ ನೊಂದು ಮುರುಟಿಕೊಂಡಿರುವ ಸುಕ್ಕಿನ ಭಾವ...

ಮುಚ್ಚಲು ಏನಾದರೂ ಒಂದು ಫೌಂಡೇಶನ್ ಕ್ರೀಮ್ ಇದ್ದರೆ ಮನಸ್ಸುಗಳು ಕೂಡ ಸುಂದರವಾಗಿ ಕಾಣುತ್ತಿದ್ದವು. ಆಗ ಜಗತ್ತು ಕೂಡ ಇನ್ನೂ ಸುಂದರವಾಗಿರುತಿತ್ತೇನೋ.. ಏನೋ...ಬರೀ ಭ್ರಮೆ.

ಆದರೆ ಮುಖ ಕಂಡಂತೆ ಮನಸ್ಸು ಕಾಣದು, ಕಾಣುವ ಕನ್ನಡಿಯೂ ಇರದು.


ಸಾಕ್ಷಿ ಶ್ರೀಕಾಂತ ತಿಕೋಟಿಕರ.

# ಅಪರಂಜಿ ಅಪರೂಪವಾಯಿತೇ!

ಯಾವುದೇ ಒಂದು ತರಕಾರಿ ಬೆಲೆ ಜಾಸ್ತಿ ಆದರೆ ನಾವು ಏನು ಮಾಡ್ತೀವಿ! ಥೇ ಸ್ವಲ್ಪ ದಿನ ಬಿಟ್ಟರಾಯ್ತು ಬಿಡು ಆ ತರಕಾರಿ ಇಲ್ಲದೇ ಅಡುಗೆಯೇ ಇಲ್ಲವೇ ಎಂದು ಕೂಳ್ತೀವಿ!

ಅದನ್ನು ಸ್ವಲ್ಪ ದಿನದ ಮಟ್ಟಿಗೆ ತಿನ್ನುವುದೇ ಬಿಟ್ಟು ಬಿಟ್ಟೇವಿ, ನಿಧಾನವಾಗಿ ಇಳಿದಾಗ ಅದನ್ನು ಕೊಂಡುಕೊಳ್ಳುವ ಬಗ್ಗೆ ಆಸಕ್ತಿ ವಹಿಸ್ತೀವಿ, ರೈತರು ಕಷ್ಟ ಪಟ್ಟು ಬೆಳೆದಿದ್ದರೂ ಕೂಡ ಗಮನಕ್ಕೆ ತೆಗೆದುಕೊಳ್ಳದಂತೆ ನಾವು ವರ್ತಿಸ್ತೀವಿ! ಸ್ವಲ್ಪ ದಿನದ ಮೇಲೆ ಕಡಿಮೆ ಬೆಲೆಗೆ ಇಳಿದಾದ ಮೇಲೆ ತರಲು ಪ್ರಾರಂಭಿಸ್ತೀವಿ, ಅದರಂತೆ ಚಿನ್ನವನ್ನು ಕೂಡ ನಾವು ಏಕೆ ನಿರ್ಲಕ್ಷ್ಯ ಮಾಡುವುದಿಲ್ಲ!

ಚಿನ್ನವೂ ಕೂಡ ಒಂದು ಲೋಹವೇ, ಹೇಗೆ ತಾಮ್ರ , ಹಿತ್ತಾಳೆ ಹಾಗೆಯೇ, ಆದರೆ ಅದನ್ನು ನಾವೇ ಎತ್ತರಕ್ಕೆ ಇಟ್ಟು ಕಷ್ಟಪಡುತ್ತಿದ್ದೇವೆ!

ಅಹಂಕಾರಕ್ಕೆ ಉದಾಸೀನವೇ ಮದ್ದು ಎನ್ನುವಂತೆ ತೆಗೆದುಕೊಳ್ಳುವುದನ್ನು ಬಿಟ್ಟರೆ ಅದರ ದರ ಮಧ್ಯಮ ವರ್ಗದವರ , ಬಡವರ ಕೈಗೆ ಸುಲಭವಾಗಿ ಎಟಕಬಹುದು!!

ಹಾಗೆ ಸ್ವಲ್ಪ ದಿನ ಹೇಗೂ "ಚಿನ್ನ" ಆಕಾಶದತ್ತ ಮುಖ ಮಾಡಿದೆ ಬೇಡ ಬಿಡು ಎಂದು ಹೆಂಗೆಳೆಯರು ಸ್ವಲ್ಪ ದಿನ ಗಟ್ಟಿ ಮನಸ್ಸು ಮಾಡಿ ತಮ್ಮ ಆಸೆಯನ್ನು ಬದಿಗೊತ್ತಿ ಚಿನ್ನವನ್ನು ಖರೀದಿಸಲೇಬಾರದು!


ಆಗ ಚಿನ್ನ ಎಲ್ಲಿ ತನ್ನ ನಿರ್ಲಕ್ಷ್ಯ ಮಾಡಿ ಬಿಡ್ತಾರೋ ಅಂತ ಗಾಬರಿಯಾಗಿ ಮತ್ತೇ ಎದ್ನೊ ಬಿದ್ನೊ ಅಂತ ಸರಿಯಾದ ಹಾದಿಗೆ ಬಂದರೂ ಬರಬಹುದು ಅಲ್ಲವೇ!


ಈ ನಿಟ್ಟಿನಲ್ಲಿ ಮುಖ್ಯವಾಗಿ ಹೆಣ್ಣು ಮಕ್ಕಳೇ ನಿರ್ಧಾರ ತೆಗೆದುಕೊಳ್ಳಬೇಕು! ಒಂದು ಲಕ್ಷ ಕೊಟ್ಟರೂ ಒಂದು ಸುಂದರ ಸರ ತೆಗೆದುಕೊಳ್ಳಲಾಗದ ಪರಿಸ್ಥಿತಿ ಈ ನಡುವೆ!

ಗಂಡಸರಿಗೆ ಯಾವತ್ತೂ ಚಿನ್ನದ ಆಸೆ ಇರುವುದಿಲ್ಲ! ಅದರಿಂದ ಅವರಿಗೆ ವ್ಯತ್ಯಾಸ ಇಲ್ಲವಾದರೂ ಮನೆಯ ಹೆಂಗಳೆಯರ ಮೇಲಿನ ಪ್ರೀತಿಗಾಗಿ ಕೊಡಿಸುತ್ತಾರೆ, ಜೊತೆಗೆ ಅದು ಆಪತ್ಧನವೆಂದು ಕರೆಯಿಸಿಕೊಳ್ಳುತ್ತದೆ!

ಹೀಗಾಗಿ ಚಿನ್ನವನ್ನು ಸ್ವಲ್ಪ ಕಷ್ಟಪಟ್ಟು ತೆಗೆದುಕೊಳ್ಳಬೇಕೇ ಹೊರತು ಸಂಕಷ್ಟಕ್ಕೆ ಸಿಲುಕಿ ಅಲ್ಲ...! ಹೀಗೊಂದಿಷ್ಟು ಸ್ವಲ್ಪ ದಿನದ ಮಟ್ಟಿಗೆ ತಿನ್ನುವುದೇ ಬಿಟ್ಟು ಬಿಟ್ಟೇವಿ, ರೈತ ಕಷ್ಟ ಪಟ್ಟು ಬೆಳೆದಿದ್ದರೂ ಕೂಡ ಗಮನಕ್ಕೆ ತೆಗೆದುಕೊಳ್ಳದಂತೆ!

ಮತ್ತೇ ಸ್ವಲ್ಪ ದಿನದ ಮೇಲೆ ಕಡಿಮೆ ಬೆಲೆಗೆ ಇಳಿದಾದ ಮೇಲೆ ಮಾತುಕತೆ


ಸ್ನೇಹಾ ಆನಂದ್



# ಮೈಸೂರು ಸಂಸ್ಥಾನದ ರಾಜಯೋಗಿ: ಜ್ಞಾನ ಕಣಜ ಶ್ರೀಜಯಚಾಮರಾಜೇಂದ್ರ ಒಡೆಯರ್



**ಇದೇ ನಾಡು ಇದೇ ಭಾಷೆ ಎಂದೆಂದೂ ನನ್ನದಾಗಿರಲಿ**
**ಎಲ್ಲೇ ಇರಲಿ ಹೇಗೇ ಇರಲಿ ಕನ್ನಡವೇ ನಮ್ಮ ಉಸಿರಲ್ಲಿ**

**ಕರುನಾಡು ಸ್ವರ್ಗದ ಸೀಮೆ ಕಾವೇರಿ ಹುಟ್ಟಿದ ನಾಡು**
**ಕಲ್ಲಲ್ಲಿ ಕಲೆಯನು ಕಂಡ ಬೇಲೂರ ಶಿಲ್ಪದ ಬೀಡು**
**ಬಸವೇಶ್ವರ ರನ್ನ ಪಂಪರ ಕವಿ ವಾಣಿಯ ನಾಡು**

**ಚಾಮುಂಡಿ ರಕ್ಷೆಯು ನಮಗೆ ಗೊಮಟೇಶ ಕಾವಲು ಇಲ್ಲಿ**
**ಶ್ರಿಂಗೇರಿ ಶಾರದೆ ವೀಣೆ ರಸ ತುಂಗೆ ಆಗಿದೆ ಇಲ್ಲಿ**
**ವಿಶ್ವಖ್ಯಾತಿಯ ವಿಶ್ವೇಶ್ವರಯ್ಯ ಜನಿಸಿದ ಈ ನಾಡು**

**ಏಳೇಳು ಜನ್ಮವೆ ಬರಲಿ ಈ ಮಣ್ಣಲಿ ನಾನು ಹುಟ್ಟುವೆ**
**ಏನೇನು ಕಷ್ಟವೆ ಇರಲಿ ಸಿರಿಗನ್ನಡ ತಾಯ್ಗೆ ದುಡಿಯುವೆ**
**ತನು ಕನ್ನಡ ನುಡಿ ಕನ್ನಡ ಮನ ಕನ್ನಡವಾಗಿರಲಿ**

ಮೈಸೂರು ಸಂಸ್ಥಾನದ ಕೊನೆಯ ಮಹಾರಾಜರಾದ ಜಯಚಾಮರಾಜೇಂದ್ರ ಒಡೆಯರ್ ಅವರ ಪಾತ್ರ ಮತ್ತು ಸಾಧನೆಗಳನ್ನು

ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ (1919–1974) ಅವರು ಮೈಸೂರು ಸಂಸ್ಥಾನದ 25ನೇ ಮತ್ತು ಕೊನೆಯ ರಾಜರಾಗಿದ್ದರು. 1940 ರಲ್ಲಿ ಪಟ್ಟಾಭಿಷಿಕ್ತರಾದ ಇವರು, ಕೇವಲ ಒಬ್ಬ ಆಡಳಿತಗಾರರಾಗಿರದೇ, ಭಾರತೀಯ ಸಂಸ್ಕೃತಿ ಮತ್ತು ಜ್ಞಾನಕ್ಕೆ ಮಹತ್ವದ ಕೊಡುಗೆ ನೀಡಿದ ಶ್ರೇಷ್ಠ ವಿದ್ವಾಂಸ, ಸಂಗೀತಜ್ಞ ಮತ್ತು ತತ್ವಜ್ಞಾನಿಯಾಗಿದ್ದರು. ಅವರ ಆಳ್ವಿಕೆಯು ಬ್ರಿಟಿಷ್ ಭಾರತದಿಂದ ಸ್ವತಂತ್ರ ಭಾರತಕ್ಕೆ ಮೈಸೂರು ಸಾಗಿದ ನಿರ್ಣಾಯಕ ಕಾಲಘಟ್ಟವಾಗಿತ್ತು.

- **ದೇಶಕ್ಕೆ ಸಮರ್ಪಣೆ: ರಾಜಕೀಯ ಪರಿವರ್ತನೆ**: ಜಯಚಾಮರಾಜೇಂದ್ರ ಒಡೆಯರ್ ಅವರ ಅತ್ಯಂತ ಮಹತ್ವದ ರಾಜಕೀಯ ನಿರ್ಧಾರವೆಂದರೆ ಮೈಸೂರು ಸಂಸ್ಥಾನವನ್ನು ಭಾರತ ಒಕ್ಕೂಟಕ್ಕೆ ವಿಲೀನಗೊಳಿಸಿದ್ದು.
- ಒಕ್ಕೂಟಕ್ಕೆ ವಿಲೀನ: 1947 ರಲ್ಲಿ ಭಾರತ ಸ್ವತಂತ್ರವಾದ ತಕ್ಷಣವೇ, ತಮ್ಮ ರಾಜ್ಯಾಧಿಕಾರವನ್ನು ತ್ಯಜಿಸಿ, ಮೈಸೂರು ಸಂಸ್ಥಾನವನ್ನು ಭಾರತ ಒಕ್ಕೂಟಕ್ಕೆ ವಿಲೀನಗೊಳಿಸಲು ಮೊದಲು ಸಹಿ ಮಾಡಿದ ರಾಜರುಗಳಲ್ಲಿ ಇವರೂ ಒಬ್ಬರು. ಈ ನಿರ್ಧಾರವು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಅವರು ನೀಡಿದ ಗೌರವವನ್ನು ತೋರಿಸುತ್ತದೆ.
- ಕರ್ನಾಟಕದ ಪ್ರಥಮ ರಾಜ್ಯಪಾಲ: ಭಾರತ ಗಣರಾಜ್ಯವಾದ ನಂತರ 1950 ರಲ್ಲಿ ಮೈಸೂರು ರಾಜ್ಯದ ರಾಜಪ್ರಮುಖರಾಗಿ ನೇಮಕಗೊಂಡರು. 1956 ರಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾಗಿ ವಿಶಾಲ ಮೈಸೂರು ರಾಜ್ಯ (ಇಂದಿನ ಕರ್ನಾಟಕ) ರೂಪುಗೊಂಡಾಗ, ಇವರು ಅದರ ಪ್ರಥಮ ರಾಜ್ಯಪಾಲರಾಗಿ (1956-1964) ಸೇವೆ ಸಲ್ಲಿಸಿ, ವಿಶಾಲ ಕರ್ನಾಟಕದ ನಿರ್ಮಾಣದಲ್ಲಿ ಸಕ್ರಿಯ ಪಾತ್ರ ವಹಿಸಿದರು.
- **ಜ್ಞಾನದ ಕಣಜ: ಸಾಹಿತ್ಯ ಮತ್ತು ಪಾಂಡಿತ್ಯ**: ಒಡೆಯರ್ ಅವರು ಶ್ರೇಷ್ಠ ವಿದ್ವಾಂಸರಾಗಿದ್ದರು. ಇವರು ರಾಜ್ಯಶಾಸ್ತ್ರ, ಇತಿಹಾಸ, ತತ್ವಶಾಸ್ತ್ರ ಮತ್ತು ಥಿಯಾಲಜಿ ವಿಷಯಗಳಲ್ಲಿ ಪರಿಣತಿ ಪಡೆದಿದ್ದರು.
- * ಉನ್ನತ ವಿದ್ಯಾಭ್ಯಾಸದ ಪೋಷಕ: ಮೈಸೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದ ಇವರು, ನಂತರ ಅದರ ಕುಲಾಧಿಪತಿಯಾಗಿಯೂ ಸೇವೆ ಸಲ್ಲಿಸಿದರು. ಬೆಂಗಳೂರಿನಲ್ಲಿ ಇಂಡಿಂಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ (ಖಖಖಿ) ಮತ್ತು ಮೈಸೂರಿನಲ್ಲಿ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾಲಯ (ಅಈಖಿಖಖ) ದಂತಹ ಸಂಸ್ಥೆಗಳ ಸ್ಥಾಪನೆಗೆ ನಿವೇಶನ ಮತ್ತು ಸಂಪನ್ಮೂಲಗಳನ್ನು ನೀಡಿ ವೈಜ್ಞಾನಿಕ ಪ್ರಗತಿಗೆ ಒತ್ತು ನೀಡಿದರು.
- ಧಾರ್ಮಿಕ ಮತ್ತು ತತ್ವಶಾಸ್ತ್ರದ ಕೃತಿಗಳು: ಇವರು ಹಲವು ತತ್ವಶಾಸ್ತ್ರೀಯ ಕೃತಿಗಳನ್ನು ರಚಿಸಿದ್ದು, ವಿಶೇಷವಾಗಿ ಶ್ರೀವಿದ್ಯಾ ಉಪಾಸಕರಾಗಿ ಉಪನಿಷತ್ತುಗಳು ಮತ್ತು ಹಿಂದೂ ತತ್ತ್ವಶಾಸ್ತ್ರದ ಬಗ್ಗೆ ಅನೇಕ ಲೇಖನಗಳನ್ನು ಮತ್ತು ಭಾಷಣಗಳನ್ನು ನೀಡಿದ್ದಾರೆ.
- ಜಯಚಾಮರಾಜ ಗ್ರಂಥಮಾಲಾ: ಈ ಯೋಜನೆಯಡಿ ಹಲವಾರು ವೇದಶಾಸ್ತ ಗ್ರಂಥಗಳನ್ನು ಕನ್ನಡಕ್ಕೆ ಅನುವಾದಿಸಿ, ಕನ್ನಡ ಭಾಷೆಗೆ ಮೌಲ್ಯಯುತ ಕೊಡುಗೆ ನೀಡಿದರು.
- **ಕಲಾ ಪೋಷಣೆ ಮತ್ತು ಸಂಗೀತದ ಹಿರಿಮೆ**: ಸಂಗೀತ ಕ್ಷೇತ್ರದಲ್ಲಿ ಇವರ ಕೊಡುಗೆ ಅಪೂರ್ವವಾದುದು. ಸಂಗೀತದಲ್ಲಿ ಮೈಸೂರ ಅರಸರಿಗೆ ಪ್ರೀತಿ ಇತ್ತು ಎಂಬುದು ಸರ್ವವೇದ್ಯ. ನಮ್ಮ ನಾಡಿನಲ್ಲಿ ಸಂಗೀತಗಾರರಿಗೆ ಸಿಕ್ಕ ಮಹತ್ವದ ಗೌರವಗಳಿಗೆ ಮೈಸೂರ ಅರಸರು ಎಂದೂ ಅಭಿನಂದಾರ್ಹರು. ಜಯಚಾಮರಾಜೇಂದ್ರ ಒಡೆಯರ್ ಅವರಿಗೆ ಪಾಶ್ಚಿಮಾತ್ಯ ಮತ್ತು ಕರ್ನಾಟಕ ಸಂಗೀತದ ಪರಿಚಯವಿತ್ತು. ಅವರ ರಚನೆಗಳೆಂದು ಹಲವು ಕೃತಿಗಳು ಜನಪ್ರಿಯತೆ ಪಡೆದಿವೆ.





- ಸಂಗೀತ ರಚನೆಕಾರ: ಜಯಚಾಮರಾಜೇಂದ್ರ ಒಡೆಯರ್ ಅವರು ಸ್ವತಃ ಉತ್ತಮ ಸಂಗೀತಗಾರರಾಗಿದ್ದು, 'ಶ್ರೀವಿದ್ಯಾ' ಎಂಬ ಅಂಕಿತನಾಮದಲ್ಲಿ 94 ಕ್ಕೂ ಹೆಚ್ಚು ಕರ್ನಾಟಕ ಸಂಗೀತ ಕೃತಿಗಳನ್ನು ರಚಿಸಿದ್ದಾರೆ.
- ಪಾಶ್ಚಾತ್ಯ ಸಂಗೀತದ ಒಲವು: ಇವರಿಗೆ ಪಾಶ್ಚಾತ್ಯ ಶಾಸ್ತ್ರೀಯ ಸಂಗೀತದಲ್ಲೂ ಆಳವಾದ ಜ್ಞಾನವಿತ್ತು. ಇವರು ಲಂಡನ್‌ನ ಟ್ರಿನಿಟಿ ಕಾಲೇಜ್ ಆಫ್ ಮ್ಯೂಸಿಕ್‌ನ ಗೌರವ ಫೆಲೋ ಆಗಿದ್ದರು ಮತ್ತು ಜರ್ಮನ್ ಸಂಯೋಜಕ ನಿಕೊಲಾಯ್ ಮೆಡ್‌ನರ್ ಅವರ ಕೃತಿಗಳ ರೆಕಾರ್ಡಿಂಗ್‌ಗೆ ಧನಸಹಾಯ ಮಾಡಿದ್ದರು.
- ರಾಷ್ಟ್ರೀಯ ಸಂಸ್ಥೆಗಳಿಗೆ ಕೊಡುಗೆ: ಭಾರತದ ಪ್ರಮುಖ ಕಲಾ ಸಂಸ್ಥೆಯಾದ ಸಂಗೀತ ನಾಟಕ ಅಕಾಡೆಮಿಯ ಸಹ-ಸಂಸ್ಥಾಪಕರಲ್ಲಿ ಇವರೂ ಒಬ್ಬರು.

- **ವನ್ಯಜೀವಿ ಮತ್ತು ಕ್ರೀಡೆಗೆ ಪ್ರೋತ್ಸಾಹ**
- *** ವನ್ಯಜೀವಿ ಸಂರಕ್ಷಣೆ: ವನ್ಯಜೀವಿಗಳ ಬಗ್ಗೆ ಅಪಾರ ಆಸಕ್ತಿ ಹೊಂದಿದ್ದ ಇವರು ಭಾರತೀಯ ವನ್ಯಮೃಗಗಳ ಮಂಡಳಿಯ (Indian Wild Life Board) ಪ್ರಥಮ ಅಧ್ಯಕ್ಷರಾಗಿದ್ದರು ಮತ್ತು ಮೈಸೂರು ಮೃಗಾಲಯದ ಅಭಿವೃದ್ಧಿಗೆ ಶ್ರಮಿಸಿದರು.**
- *** ಕ್ರೀಡಾ ಪೋಷಕ: ಇವರು ಉತ್ತಮ ಟೆನ್ನಿಸ್ ಆಟಗಾರರಾಗಿದ್ದರು ಮತ್ತು ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಿದರು.**

ಒಬ್ಬ ಶ್ರೇಷ್ಠ ವಾಗ್ಗೇಯಕಾರ, ಕಲಾವಿದ, ಉತ್ತಮ ಸಾಹಿತಿ, ಉನ್ನತ ಆದರ್ಶದ ಕಲಾಪೋಷಕ, ಎಂಬ ಹಿರಿಮೆ ಇನ್ನೊಬ್ಬರು ಒತ್ತಡದಿಂದ ಹೊರಿಸಿದ್ದಲ್ಲ, ವಂಶಪಾರಂಪರ್ಯವಾಗಿ ಬಂದದ್ದೂ ಅಲ್ಲ. ಬಹುಪಾಲು ತಾವೇ ದುಡಿದು ಗಳಿಸಿದ್ದು. ಮಹಾಕವಿ ರಾಘವಾಂಕನ,ಭಕ್ತಿಗೆ ಈಶ್ವರನ ತಲೆದೂಗಿಸುವುದಧಿಎಂಬ ಮಾತು ಇವರಲ್ಲಿ ಅನ್ವರ್ಥವಾಗುತ್ತಿತ್ತು.

ಆಕಾರ ಸದೃಶ ಪ್ರಜ್ಞಃ ಪ್ರಜ್ಞಯಾ ಸದೃಶಾಗಮಃಎಂಬ ಮಹಾಕವಿಕಾಳಿದಾಸನ ಮಾತು ಪೂರ್ಣವಾಗಿ ಅರಸರಿಗೆ ಅನ್ವಯವಾಗುತ್ತಿತ್ತು. ಅವರು ಹಲವಾರು ದೇಶಗಳಿಗೆ ಭೇಟಿ ನೀಡಿದ್ದರು. ಇಂಗ್ಲೆಂಡ್, ಅಮೆರಿಕ, ಕೆನಡ, ಫ್ರಾನ್ಸ್, ಜರ್ಮನಿ, ಸಿಂಗಾಪುರ ಮೊದಲಾದ ದೇಶಗಳಿಗೆ ಸಂಚರಿಸಿ ಅಪಾರ ಅನುಭವ ಸಂಪಾದಿಸಿದ್ದರು. ಅನೇಕ ವಿಶ್ವವಿದ್ಯಾಲಯಗಳಲ್ಲಿ ತತ್ವಜ್ಞಾನ, ಸಾಹಿತ್ಯ, ಸಂಸ್ಕೃತಿ ಕುರಿತು ವಿದ್ವತ್ಪೂರ್ಣ ಭಾಷಣಗಳನ್ನ ಮಾಡಿದ್ದರು.

ಒಟ್ಟಾರೆಯಾಗಿ, ಜಯಚಾಮರಾಜೇಂದ್ರ ಒಡೆಯರ್ ಅವರು ರಾಜಕೀಯ ಅಧಿಕಾರಕ್ಕಿಂತಲೂ ವಿದ್ಯೆ, ಕಲೆ ಮತ್ತು ಧರ್ಮನಿಷ್ಠೆಗೆ ಹೆಚ್ಚು ಮೌಲ್ಯ ನೀಡಿದ ಆದುನಿಕ ಯುಗದ ಸಂಕೇತವಾಗಿದ್ದಾರೆ. ಅವರ ಪಾಂಡಿತ್ಯ ಮತ್ತು ವಿಶಾಲ ಮನೋಭಾವದಿಂದಾಗಿ, ಮೈಸೂರು (ಕರ್ನಾಟಕ) ಇಂದು ತನ್ನ ಸಾಂಸ್ಕೃತಿಕ ನಗರದ ಸ್ಥಾನಮಾನವನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ. ಇಂಥ ಪ್ರತಿಭಾವಂತ ಅರಸರು ಜನಿಸಿದ ಕನ್ನಡ ನಾಡು ಪುನೀತ, ಹೆತ್ತ ತಾಯಿ ಸಂಪ್ರೀತ! ಜೈ ಕನ್ನಡಾಂಬೆ!

ಆತ್ಮೀಯರೇ, ಎಪ್ಪತ್ತನೆಯ ಕನ್ನಡ ರಾಜ್ಯೋತ್ಸವದ ಸಂಭ್ರಮದಲ್ಲಿ ನಮ್ಮ ನಾಡಿಗಾಗಿ ದುಡಿದು, ಮಡಿದ, ವೀರಶೂರರನ್ನು ನೆನೆಯುವ ಧನ್ಯತೆಯನ್ನು ವರ್ತಮಾನ ಪತ್ರಿಕೆಯ ಸಂಪಾದಕರಾದ ಶ್ರೀ ಕೆ ಎನ್ ರವಿಯವರು ನನಗೆ ಒದಗಿಸಿಕೊಟ್ಟಿದ್ದು ನನ್ನ ಭಾಗ್ಯವೇ ಸರಿ. ಇಂಥ ಒಂದು ಅಪೂರ್ವ ಅವಕಾಶಕ್ಕಾಗಿ ಅವರಿಗೆ ನಾನು ನನ್ನ ಅನಂತ ವಂದನೆಗಳನ್ನ ಅರ್ಪಿಸುತ್ತಿದ್ದೇನೆ. ಈ ಲೇಖನಗಳ ಸರಮಾಲೆಯನ್ನು ಓದಿ ಮೆಚ್ಚಿ ಪ್ರತಿಕ್ರಿಯೆ ನೀಡಿದ ಓದುಗರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು. ಜೈ ಭುವನೇಶ್ವರಿ!


ರೂಪ ಮಂಜುನಾಥ
ಹೊಳೆನರಸೀಪುರ

# ಸೈಬರ್ ಕ್ರೈಂ, ಡಿಜಿಟಲ್ ಅರೆಸ್ಟ್-ಎಚ್ಚರ ಎಚ್ಚರ



ಇತ್ತೀಚಿಗೆ ಬೆಂಗಳೂರಿನಲ್ಲಿ ಕೆಲವು ವಾರಗಳ ಹಿಂದೆ ನಡೆದ ಡಿಜಿಟಲ್ ಅರೆಸ್ಟ್ ಮೋಸದ ಪ್ರಕರಣ ದೇಶವನ್ನೇ ಬೆಚ್ಚಿಬೀಳಿಸಿದೆ. ವಾಸ್ತವದಲ್ಲಿ ಡಿಜಿಟಲ್ ಅರೆಸ್ಟ್ ಎಂಬ ಯಾವುದೇ ಕಾನೂನು ಇಲ್ಲ. ಇಲ್ಲದ ಭಯದ ಭೂತವೊಂದನ್ನು ಸೃಷ್ಟಿಸಿ ಸೈಬರ್ ಕ್ರಿಮಿನಲ್ ಖದೀಮರು ಮುಗ್ಧ ಜನರನ್ನು ದೋಚುತ್ತಿದ್ದಾರೆ.

57 ವರ್ಷದ ಬಹುರಾಷ್ಟ್ರೀಯ ಕಂಪನಿಯ ಹಿರಿಯ ಕಾರ್ಯನಿರ್ವಾಹಕಿ ಸುಮಾರು 31.83 ಕೋಟಿ ಹಣವನ್ನು ಅಂತರರಾಷ್ಟ್ರೀಯ ಸೈಬರ್ ಮೋಸಗಾರರಿಗೆ ಕಳೆದುಕೊಂಡರು. ಆರು ತಿಂಗಳ ಕಾಲ, ಡಿಜಿಟಲ್ ಅರೆಸ್ಟ್ ಎಂಬ ಮೋಸದ ಜಾಲಕ್ಕೆ ಸಿಲುಕಿ , ಬೇರೆಬೇರೆ ಬ್ಯಾಂಕ್ ವ್ಯವಹಾರಗಳ ಮೂಲಕ, ಅವರು ಇಷ್ಟು ದೊಡ್ಡ ಮೊತ್ತದ ಹಣ ಕಳೆದುಕೊಂಡರು .

ಈ ಘಟನೆ ಒಂದು ಮುಖ್ಯ ಪ್ರಶ್ನೆಯನ್ನು ಎಬ್ಬಿಸುತ್ತದೆ ಇಷ್ಟು ವಿದ್ಯಾವಂತರೂ, ಸಮಾಜದಲ್ಲಿ ಉನ್ನತ ಸ್ಥಾನದಲ್ಲಿರುವವರು, ಹಣಕಾಸಿನಲ್ಲಿ ಶಕ್ತರು ಆಗಿರುವವರು ಹೇಗೆ ಇಂತಹ ವಂಚನೆಗಳಿಗೆ ಬಲಿಯಾಗುತ್ತಾರೆ

ಉತ್ತರ ಬಹಳ ಸರಳ. ಇಂದಿನ ವಂಚನೆಗಳು ಕೇವಲ ಏಮಾರಿಸುವುದಲ್ಲ . ಸೈಬರ್ ವಂಚನೆ ಅತ್ಯಂತ ವ್ಯವಸ್ಥಿತವಾಗಿ ನಡೆಯುತ್ತದೆ . ವಂಚಕರು ಮನಶ್ಶಾಸ್ತ್ರ, ,ತಂತ್ರಜ್ಞಾನ, ಒತ್ತಡ ಮತ್ತು ಭಯದ ಸಂಯೋಜನೆಯಿಂದ ವಂಚಿಸುತ್ತಾರೆ .

ವಂಚಕರು ಅವಿದ್ಯಾವಂತರನ್ನು, ಬಡವರನ್ನು ಗುರಿ ಮಾಡುವುದಿಲ್ಲ. ಅವರು ಹೆಚ್ಚು ಬುದ್ಧಿವಂತರನ್ನು, ಸರ್ಕಾರದ ನಿಯಮಗಳನ್ನು ಪಾಲಿಸುವವರನ್ನು ಮತ್ತು ವ್ಯವಸ್ಥೆಗಳನ್ನು ನಂಬುವ ಪ್ರಾಮಾಣಿಕರನ್ನೇ ಗುರಿ ಮಾಡುತ್ತಾರೆ.

ಒಬ್ಬ ವ್ಯಕ್ತಿ ಮೋಸಕ್ಕೆ ಸಿಲುಕುವ ಪ್ರಮುಖ ಕಾರಣಗಳಲ್ಲಿ ಮೊದಲನೆಯದು ಭಯ. ಸೈಬರ್ ಖದೀಮರು ಪ್ರಯೋಗಿಸುವ ಮೊದಲ ಅಸ್ತ್ರ ನಿಮ್ಮ ಆಧಾರ್ ಒಂದು ಕ್ರಿಮಿನಲ್ ಪ್ರಕರಣದಲ್ಲಿ ಬಳಕೆಯಾಗಿದೆ, ನಿಮ್ಮ ಬ್ಯಾಂಕ್ ಖಾತೆ ಹಗರಣದಲ್ಲಿ ಸಿಕ್ಕಿದೆ, ನಿಮ್ಮ ಮೇಲೆ ಪ್ರಕರಣ ದಾಖಲಿಸಲಾಗಿದೆ . ಇಂತಹ ಹೇಳಿಕೆ ತಕ್ಷಣ ಮೆದುಳನ್ನು ಭೀತಿಗೊಳಿಸಿ ತಾರ್ಕಿಕ ಚಿಂತನೆ ನಿಲ್ಲಿಸುತ್ತದೆ.

ನಮ್ಮಲ್ಲಿ ಪೊಲೀಸ್, ಸಿಬಿಐ, ಕಸ್ಟಮ್ಸ್ , ಎಂದರೆ ಜನ ಭಯಬೀಳುತ್ತಾರೆ . ಇದು ನಮ್ಮ ವ್ಯವಸ್ಥೆಯ ದೋಷ . ಇದನ್ನೇ ವಂಚಕರು ಬಂಡವಾಳ ಮಾಡಿಕೊಳ್ಳುತ್ತಾರೆ .

ವಂಚಕರು ಪೊಲೀಸರು, ಸಿಬಿಐ, ಕಸ್ಟಮ್ಸ್ ಅಧಿಕಾರಿಗಳು, ಬ್ಯಾಂಕ್ ಅಧಿಕಾರಿಗಳಂತೆ ವೇಷ ಧರಿಸಿ ಕರೆ ಮಾದುತ್ತಾರೆ . ಅವರ ಹಿಂದೆ ಈ ಕಚೇರಿಗಳನ್ನೇ ಹೋಲುವಂತೆ ವ್ಯವಸ್ಥೆ ಮಾಡಿರುತ್ತಾರೆ . ನಕಲಿ ಗುರುತಿನ ಚೀಟಿ, ವಿಡಿಯೋ ಕಾಲ್, ಮತ್ತು ಸ್ಪೂಫ್ ಸಂಖ್ಯೆಗಳ ಮೂಲಕ ಅವರು ಅದು ನಿಜ ಎಂದು ಭಾವಿಸುವಷ್ಟು ನೈಜತೆಯಿಂದ ಮಾತಾಡಿ ನಂಬಿಕೆ ಹುಟ್ಟಿಸುತ್ತಾರೆ. ಅವರು ನೀವು ಗಂಭೀರ ಅಪರಾಧ ತನಿಖೆಯಡಿ ಇದ್ದೀರಿ ಎಂದು ಹೆದರಿಸಿ , ಭಯ ಹುಟ್ಟಿಸುತ್ತಾರೆ.

ಮತ್ತೊಂದು ತಂತ್ರವೆಂದರೆ ಅವರು ಒತ್ತಡ ತಂತ್ರವನ್ನು ಉಪಯೋಗಿಸಿ ಒಬ್ಬಂಟಿಯಾಗಿರುವಂತೆ (isolate) ಮಾಡುತ್ತಾರೆ . . ಕಾಲ್ ಕಟ್ ಮಾಡಬೇಡಿ, ಯಾರಿಗೂ ಹೇಳಬೇಡಿ, ನೀವು ವೀಕ್ಷಣೆಯಲ್ಲಿದ್ದೀರಿ ಎನ್ನುವ ಒತ್ತಡ ತಂತ್ರದ ಮೂಲಕ ಅವರು ವಂಚನೆಗೆ ಒಳಗಾಗುವವರನ್ನು ಸಂಪೂರ್ಣವಾಗಿ ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳುತ್ತಾರೆ.

ತಂತ್ರಜ್ಞಾನ ಈ ಮೋಸವನ್ನು ಇನ್ನಷ್ಟು ನಂಬುವಂತೆ ಮಾಡುತ್ತದೆ ನಕಲಿ ದಾಖಲೆಗಳು, ಹಿರಿಯ ಅಧಿಕಾರಿಗಳಂತೆ ತೋರುವ ವೇಷಧಾರಿಗಳ ವಿಡಿಯೋ, ರಿಮೋಟ್ ಆಕ್ಸೆಸ್, ವಾಟ್ಸಪ್ , ಜೂಮ್ ಕಾಲ್ ಎಲ್ಲವನ್ನೂ ಅಧಿಕೃತವಾಗಿ ಕಾಣುವ ಹಾಗೆ ವಾತಾವರಣವನ್ನು ಸೃಷ್ಟಿ ಮಾಡಿರುತ್ತಾರೆ. ಇವೆಲ್ಲವೂ ವ್ಯಕ್ತಿಯ ಭಾವನೆಗಳನ್ನು ಹಾಳುಮಾಡಿ, ಆತಂಕ ಮತ್ತು ಭಯದಿಂದ, ತಕ್ಷಣ ಶರಣಾಗುವಂತೆ ಮಾಡುತ್ತಾರೆ .

ಹೀಗಾಗಿ ಅತ್ಯಂತ ವಿದ್ಯಾವಂತರು, ಹಣಕಾಸಿನಲ್ಲಿ ಬಲಿಷ್ಠರು, ಕಾನೂನು ಮತ್ತು ಸರ್ಕಾರದ ನಿಯಮಗಳನ್ನು ಪಾಲಿಸುವವರು , ಮತ್ತು ತಮ್ಮ ಮನ್ನಣೆ-ಪ್ರತಿಷ್ಠೆ ಬಗ್ಗೆ ತುಂಬಾ ಕಾಳಜಿ ಇರುವವರು ಈ ವಂಚನೆಗೆ ಬಲಿಪಶುವಾಗುತ್ತಾರೆ .

45 ರಿಂದ 70 ವರ್ಷದವರಿಗೆ ಡಿಜಿಟಲ್ ಚಟುವಟಿಕೆ ಪರಿಚಿತವಾದರೂ, ಮೋಸದ ಗುರುತು, ಮಾದರಿಗಳ ಅರಿವು ಕಡಿಮೆ. ಹಾಗಾಗಿ ಇವರು ಬಹು ಬೇಗ ಬಲಿಪಶುವಾಗುತ್ತಾರೆ .

ವಂಚಕರು ತಮ್ಮ ಬಲಿಪಶುಗಳ ಬ್ಯಾಂಕ್ ವಿವರಗಳನ್ನು ಹೇಗೆ ತಿಳಿದುಕೊಳ್ಳುತ್ತಾರೆ ಎಂಬ ಪ್ರಶ್ನೆಗೆ ಉತ್ತರ, ಅವರು ಶೇಕಡಾ 90% ವೇಳೆಯಲ್ಲಿ ನಿಖರವಾದ ವಿವರಗಳನ್ನು ತಿಳಿದಿರುವುದಿಲ್ಲ .ಆದರೆ ಅವರು ತಮ್ಮ ಪ್ರಶ್ನೆಗಳಿಂದಲೇ ಮಾಹಿತಿ ದೊರಕುವಂತೆ ಮಾಡುತ್ತಾರೆ. ಡೇಟಾ ಲೀಕ್‌ಗಳು, ದೂರಸಂಪರ್ಕದ ಮಾಹಿತಿ, ಇವುಗಳಿಂದ ನಮಗೆಲ್ಲಾ ತಿಳಿದಿದೆ ಎನ್ನುವ ಭ್ರಮೆ ಮೂಡಿಸುತ್ತಾರೆ. ಅವರು ವಂಚನೆಯೊಳಗೆ ಒಮ್ಮೆ ಬಲಿಪಶು ಭಾವನಾತ್ಮಕವಾಗಿ ಅಪಹರಿಸಲ್ಪಟ್ಟರೆ, ಬಲಿಪಶು ಸ್ವಯಂಪ್ರೇರಣೆಯಿಂದ ಮಾಹಿತಿಯನ್ನು ಬಹಿರಂಗಪಡಿಸುತ್ತಾನೆ. ಹೀಗಾಗಿ, ಜ್ಞಾನದ ಭ್ರಮೆ ನಿಜವಾದ ದತ್ತಾಂಶಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿದೆ. ( once victim is emotionally hijacked, the victim voluntarily reveals info. Thus, the illusion of knowledge is more effective than actual data.) ಹೀಗಾಗಿ ಸುಶಿಕ್ಷಿತರು ಸಹ ವಂಚನೆಯ ಖೆಡ್ಡಾಕ್ಕೆ ಬೀಳುತ್ತಾರೆ.

ಇಂತಹ ಸಂದರ್ಭಗಳಲ್ಲಿ ಸ್ವಲ್ಪ ಜಾಗರೂಕತೆ ವಹಿಸಿದರೆ, ಮೋಸದ ಗುರುತು ಪತ್ತೆ ಹಚ್ಚುವುದು ಸುಲಭ. ಸ್ವಲ್ಪ ಹಣಕಾಸಿನ ವ್ಯವಸ್ಥೆ ್ಯಯ ಅರಿವು, ಡಿಜಿಟಲ್ ಜ್ಞಾನ ಎಲ್ಲರಿಗೂ ಇರಲೇಬೇಕು .

ಯಾರಾದರೂ ವಾಟ್ಸಪ್ ಅಥವಾ ವಿಡಿಯೋ ಕಾಲ್ ಮೂಲಕ ಪೊಲೀಸರು , ಸಿಬಿಐ ,ಬ್ಯಾಂಕ್ ಅಧಿಕಾರಿಗಳು ಎಂದು ಕರೆ ಮಾಡಿ, ನೀವು ಅಪರಾಧ ತನಿಖೆಯಡಿ ಇದ್ದೀರಿ ಎಂದು ಹೇಳಿದರೆ, ತಕ್ಷಣ ಮಾತನಾಡುವುದನ್ನು ನಿಲ್ಲಿಸಬೇಕು. ಕಾಲ್ ಕಟ್ ಮಾಡಬೇಡಿ, ಯಾರಿಗೂ ಹೇಳಬೇಡಿ, ನಿಮ್ಮ ಖಾತೆ ಫ್ರೀಜ್ ಆಗುತ್ತೆ, ತಕ್ಷಣ ಹಣ ವರ್ಗಾಯಿಸಿ, OTP ಕೊಡಿ, ಸ್ಕ್ರೀನ್ ಶೇರ್ ಮಾಡಿ ಈ ಯಾವುದಾದರೂ ಒಂದು ಲಕ್ಷಣ ಕಂಡರೂ ಅದು 100% ಮೋಸ. ಏನಾದರೂ ಅಪ್ಪಿ ತಪ್ಪಿ ಯಾವುದೇ ಕ್ಷಣದಲ್ಲಿ ಎಡವಿದರೂ , ಮನೆಯವರೊಡನೆ , ಆಪ್ತರೊಡನೆ ಹಂಚಿಕೊಳ್ಳಬೇಕು . ಕೂಡಲೇ ಪೊಲೀಸ್ ಸಹಾಯ ಪಡೆಯಬೇಕು .

ಡಿಜಿಟಲ್ ವಂಚನೆಗೆ ಬಲಿಯಾದವರು ತಕ್ಷಣವೇ 1930 ರಾಷ್ಟ್ರೀಯ ಸಹಾಯವಾಣಿಗೆ ಕರೆ ಮಾಡಿ ಮತ್ತು ತಮ್ಮ ಬ್ಯಾಂಕ್‌ಗೆ ಮಾಹಿತಿ ನೀಡಿ ಖಾತೆ/ಟ್ರಾನ್ಸಾಕ್ಷನ್‌ನ್ನು ಸ್ಥಗಿತಗೊಳಿಸಲು ವಿನಂತಿಸಬೇಕು. ಮೊದಲ 24 ಗಂಟೆಗಳೊಳಗಿನ ವೇಗದ ಕ್ರಮ ಹಣ ವಾಪಸಿನ ಸಾಧ್ಯತೆಯನ್ನು ಹೆಚ್ಚಿಸುತ್ತದೆ. ನಂತರ, ರಾಷ್ಟ್ರೀಯ ಸೈಬರ್ ಅಪರಾಧ ವರದಿ ಪೋರ್ಟಲ್ (NCRP) ನಲ್ಲಿ ನೋಂದಣಿ ಮಾಡಿಕೊಂಡು, Financial Fraud ಆಯ್ಕೆ ಮಾಡಿ, ಘಟನೆಯ ಪೂರ್ಣ ವಿವರಗಳು ಮತ್ತು ಸಾಕ್ಷ್ಯಗಳನ್ನು ಸಲ್ಲಿಸಬೇಕು. ಟ್ರ್ಯಾಕಿಂಗ್‌ಗೆ ದೂರು ಸಂಖ್ಯೆಯನ್ನು ಗುರುತಿಟ್ಟುಕೊಳ್ಳಬೇಕು . ಅನುಮಾನಾಸ್ಪದ ಸಂದೇಶಗಳು ಅಥವಾ ಸಂಖ್ಯೆಯನ್ನು ಸಂಚಾರ್ ಸಾಕ್ಷಿ (ಚಕ್ಷು) ಪೋರ್ಟಲ್‌ನಲ್ಲಿ ವರದಿ ಮಾಡಬಹುದು. ಬ್ಯಾಂಕ್ ಸಮಸ್ಯೆ ಪರಿಹಾರವಾಗದಿದ್ದರೆ, ವಿಷಯವನ್ನು ಖಃಖ ಒಂಬಡ್ಸ್‌ಮನ್ ಗೆ ಮೇಲ್ಮನವಿಯಾಗಿ ಸಲ್ಲಿಸಬಹುದು.

ಸರ್ಕಾರದ ಯಾವ ಏಜನ್ಸಿಯೂ ನಿಮಗೆ ಹಣ ವರ್ಗಾಯಿಸಲು ಹೇಳುವುದಿಲ್ಲ, ವಾಟ್ಸಪ್ ಮೂಲಕ ಪ್ರಕರಣ ವಿಚಾರಣೆ ನಡೆಸುವುದಿಲ್ಲ ಎಂಬ ಕನಿಷ್ಠ ಜ್ಞಾನ ಇರಲೇಬೇಕು. ಸರ್ಕಾರಗಳು , ಮಾಧ್ಯಮಗಳು ಈ ಬಗ್ಗೆ ಜಾಹೀರಾತುಗಳ ಮೂಲಕ , ಜಾಗೃತಿ ಮೂಡಿಸುವ ಮೂಲಕ ಅರಿವು ಮೂಡಿಸುತ್ತಿದೆ . ಆದರೂ ವಂಚನೆ ನಿರಂತರವಾಗಿದೆ .

ಬ್ಯಾಂಕಿಂಗ್ ವ್ಯವಸ್ಥೆ ಈ ರೀತಿಯ ಮೋಸಗಳನ್ನು ತಡೆಗಟ್ಟಲು ಹಲವಾರು ಕ್ರಮಗಳನ್ನು ಕೈಗೊಳ್ಳಬಹುದು. ದೊಡ್ಡ ಮೊತ್ತದ ವ್ಯವಹಾರಗಳನ್ನು ತಕ್ಷಣ ವಿಶ್ಲೇಷಿಸಿ ಅನುಮಾನಾಸ್ಪದ ಟ್ರಾನ್ಸ್ಫರ್‌ಗಳನ್ನು ತಡೆಯುವ ಂಖ ಆಧಾರಿತ ವ್ಯವಸ್ಥೆ, ಹೊಸ ಖಾತೆಗಳಿಗೆ ದೊಡ್ಡ ಮೊತ್ತ ವರ್ಗಾಯಿಸುವಾಗ ಎಚ್ಚರಿಕೆ ಕೊಡುವ ವ್ಯವಸ್ಥೆ ,

13 ಗಂಟೆಗಳ ವಿಳಂಬ ವ್ಯವಸ್ಥೆ, ಗ್ರಾಹಕರಿಗೆ ಖಿಒಖ ಮೂಲಕ ಣಡಿಚಿಚಿಚಿಥಿಣಖಂಟಿ ತಜಡಿಜುಥಿಚಿಣಖಂಟಿ, ಎಲ್ಲಾ ಬ್ಯಾಂಕುಗಳು ಬಳಸುವ ಕೇಂದ್ರೀಕೃತ ಮೋಸ ಖಾತೆ ನೊಂದಣಿ, ಹಿರಿಯ ನಾಗರಿಕರಿಗೆ ಧ್ವನಿ ಎಚ್ಚರಿಕೆಇವೆಲ್ಲವೂ ಮೋಸಗಳನ್ನು ತಡೆಯಬಹುದು.

ಸೈಬರ್ ಮೋಸದ ಪ್ರಮಾಣ ನೋಡಿದರೆ ಗಾಬರಿಯಾಗುತ್ತದೆ . 2024ರ ಮಾಹಿತಿ ಪ್ರಕಾರ ಮಹಾರಾಷ್ಟ್ರ ದೇಶದಲ್ಲೇ ಅತಿ ಹೆಚ್ಚು ಪ್ರಕರಣಗಳನ್ನು ದಾಖಲಿಸಿದೆಸುಮಾರು 3.03 ಲಕ್ಷ. ಅದರ ಹಿಂದೆ ಉತ್ತರ ಪ್ರದೇಶ, ಸುಮಾರು 3.01 ಲಕ್ಷ, ಹಾಗೂ ಮೂರನೇ ಸ್ಥಾನದಲ್ಲಿ ಕರ್ನಾಟಕ, ಸುಮಾರು 1.70 ಲಕ್ಷ ಪ್ರಕರಣಗಳಿವೆ. ಈ ಮೂರು ರಾಜ್ಯಗಳಲ್ಲೇ ಅತಿಹೆಚ್ಚು ಡಿಜಿಟಲ್ ಮೋಸಗಳು ವರದಿಯಾಗಿವೆ.

ಇತ್ತೀಚಿಗೆ ಬಿಡುಗಡೆಯಾದ ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ (NCRB) ಅಂಕಿಅಂಶಗಳ ಪ್ರಕಾರ, ಕರ್ನಾಟಕವು ಭಾರತದ ಸೈಬರ್ ಅಪರಾಧ ರಾಜಧಾನಿಯಾಗಿ ಹೊರಹೊಮ್ಮಿದೆ, 2023 ರಲ್ಲಿ ದೇಶದಲ್ಲಿ ದಾಖಲಾದ ಎಲ್ಲಾ ಪ್ರಕರಣಗಳಲ್ಲಿ ಕರ್ನಾಟಕದಲ್ಲಿ 25.57% ರಷ್ಟು ದಾಖಲಾಗಿದೆ.

ಮೆಟ್ರೋಪಾಲಿಟನ್ ನಗರಗಳಲ್ಲಿ, ಬೆಂಗಳೂರಿನಲ್ಲಿ ಅತಿ ಹೆಚ್ಚು ಸೈಬರ್ ಅಪರಾಧ ಪ್ರಕರಣಗಳು ವರದಿಯಾಗಿದ್ದು, 19 ಮಹಾನಗರಗಳಲ್ಲಿನ ಎಲ್ಲಾ ಪ್ರಕರಣಗಳಲ್ಲಿ ಶೇ. 51.92 ರಷ್ಟು ಪ್ರಕರಣಗಳು ಇಲ್ಲಿವೆ.

ಭಾರತದಲ್ಲಿ ಹೆಚ್ಚುತ್ತಿರುವ ಸೈಬರ್ ಅಪರಾಧಕ್ಕೆ ಸರ್ಕಾರ ಸಾಕಷ್ಟು ನಿರ್ಬಂಧಗಳನ್ನು ವಿಧಿಸಿ ಕಟ್ಟುನಿಟ್ಟಿನ ಕ್ರಮಕೈಗೊಂಡಿದ್ದರೂ , 2021 ಮತ್ತು 2024 ರ ನಡುವೆ ವರದಿಯಾದ ಪ್ರಕರಣಗಳಲ್ಲಿ 500% ಹೆಚ್ಚಳವು ಗಾಬರಿ ಹುಟ್ಟಿಸುತ್ತದೆ . ಸರ್ಕಾರ ಮಾತ್ರ ಇದನ್ನು ತಹಬಂದಿಗೆ ತರಲು ಅಸಾಧ್ಯ. ಜನ ಜಾಗ್ರತರಾದಾಗ ಮಾತ್ರ ಈ ವಂಚನೆಗಳನ್ನು ತಡೆಯಬಹುದು. ಮೋಸ ಹೋಗುವವರು ಇರುವವರೆಗೂ, ಮೋಸ ಮಾಡುವವರು ಇದ್ದೇ ಇರುತ್ತಾರೆ. ಆದ್ದರಿಂದ ಎಚ್ಚರ, ಎಚ್ಚರ



ಸ್ವಾಮಿನಾಥನ್
ಬೆಂಗಳೂರು

# ಶರಣರ ಕೃಪೆಯಿಂದ ಶಿವಶರಣನಾಗಿ ಪರಿವರ್ತಿತನಾದ ಕಥೆ ಉರಿಲಿಂಗ ಪೆದ್ದಿಗಳದು

## ಉಪೇಕ್ಷಿತ ವಚನಕಾರರು

ಕಳ್ಳನಾಗಿದ್ದ ಓರ್ವ ವ್ಯಕ್ತಿ ಶರಣರ ಕೃಪೆಯಿಂದ ಶಿವಶರಣನಾಗಿ ಪರಿವರ್ತಿತನಾದ ಕಥೆ ಉರಿಲಿಂಗ ಪೆದ್ದಿಗಳದು.

ಚಲವಾದಿ ಎಂದು ಕರೆಸಿಕೊಳ್ಳುವ ಹೊಲೆಯರ ಜಾತಿಗೆ ಸೇರಿದ ಉರಿಲಿಂಗ ಪೆದ್ದಿಯ ಊರು ಇಂದಿನ ಆಂಧ್ರಪ್ರದೇಶದ ನಂದವಾಡಗಿ ಗ್ರಾಮ. ಕಳ್ಳತನ ಇವರ ಕಸುಬಾಗಿತ್ತು ಎಂದು ಬಹಳಷ್ಟು ಕಡೆ ಹೇಳಲಾಗಿದೆ ಆದರೆ ಅಂಬಲಿಗೆಯ ಚೆನ್ನಮಲ್ಲೇಶ ಎಂಬವರು ಬರೆದ 'ದೀಪದ ಕಲಿಯರ ಕಾವ್ಯ' ಎಂಬ ಕೃತಿಯಲ್ಲಿ

ಪೆದ್ದಯ್ಯನೆಂಬ ಮುಗ್ಧ ಭಕ್ತನು ಪ್ರತಿ ದಿನ ಎದ್ದು
ಕಟ್ಟಿಗೆಯ ಮಾರುವ ಉದ್ಯೋಗ
ಮಾಡಿಕೊಂಡಿರ್ದನು ದಿನ
ಶಿವ ಶಬ್ದ ಕೇಳುವ ಮಠದೊಳಗೆ

ಎಂಬ ಉಲ್ಲೇಖವಿದೆ. ಈ ಉಲ್ಲೇಖವನ್ನು ಆಧರಿಸಿ ಹೇಳುವುದಾದರೆ ಉರಿಲಿಂಗಪೆದ್ದಿಗಳು ಕಟ್ಟಿಗೆ ಕಡಿದು ಮಾರುವ ಮೋಳಿಗೆ ಕಾಯಕ ಮಾಡಿ ಜೀವನವನ್ನು ನಿರ್ವಹಿಸುತ್ತಿದ್ದರು ಎಂಬುದು ವೇದ್ಯವಾಗುತ್ತದೆ.

ಇಂದಿನ ಮಹಾರಾಷ್ಟ್ರದ ನಾಂದೇಡ ಜಿಲ್ಲೆಯ ಆಪಸೆ ಕಂದಹಾರ ಎಂಬ ಊರಿನ ನಲ್ಲೂರಿ ಮಠದ ಪೀಠಾಧಿಪತಿಗಳಾಗಿದ್ದ ಉರಿಲಿಂಗ ದೇವರ ಶಿಷ್ಯ ಉರಿಲಿಂಗ ಪೆದ್ದಿ. ಜಾತಿಯಿಂದ ಅಸ್ಪೃಶ್ಯನಾಗಿದ್ದರು.

ಅದೊಂದು ದಿನ ಗುರುಗಳು ನಂದವಾಡಗಿ ಗ್ರಾಮದ ಸೂರಯ್ಯ ಎಂಬ ಭಕ್ತನಿಗೆ ಲಿಂಗ ದೀಕ್ಷೆ ನೀಡುವಾಗ ಮನೆಯ ಮೇಲ್ಜಾವಣಿಯಲ್ಲಿ ಇರುವ ಬೆಳಕಿಂಡಿಯಲ್ಲಿ ಕದ್ದು ಇಣುಕಿ ನೋಡುತ್ತಾರೆ.

ಲಿಂಗ ದೀಕ್ಷೆ ಕಾರ್ಯವನ್ನು ನೋಡಿದ ಆತನ ಮನಸ್ಸು ಪರಿವರ್ತನೆ ಹೊಂದಿ ತಾನು ಕೂಡ ಲಿಂಗಪೂಜೆ ಮಾಡಿ ಭಕ್ತಿ ಮಾರ್ಗದಲ್ಲಿ ಮುಂದೆ ಸಾಗಬೇಕು ಎಲ್ಲ ದುರ್ಗುಣಗಳನ್ನು ಬಿಟ್ಟು ಸತ್ಯ ಶುದ್ಧ ಮನಸ್ಸಿನಿಂದ ಕಾಯಕ ತತ್ವವನ್ನು ರೂಡಿಸಿಕೊಂಡು ಬದುಕಬೇಕು, ಶಿವ ಭಕ್ತನಾಗಿ ಬಾಳಬೇಕು ಎಂಬ ಆಶಯ ಉಂಟಾಯಿತು

ಅಸ್ಪೃಶ್ಯನಾದ ತಾನು ಲಿಂಗ ದೀಕ್ಷೆ ಕೊಡಿ ಎಂದು ಗುರುಗಳನ್ನು ಹೇಗೆ ಕೇಳಬೇಕು ಎಂಬ ಜಿಜ್ಞಾಸೆ ಆತನಲ್ಲಿ ಮೂಡುತ್ತದೆ

ಹೇಗಾದರೂ ಮಾಡಿ ಲಿಂಗ ದೀಕ್ಷೆಯನ್ನು ಪಡೆಯಬೇಕು ಎಂಬ ಇಚ್ಛೆಯಿಂದ ಪ್ರತಿದಿನ ನಸುಕಿನ ಜಾವದಲ್ಲಿಯೇ ಎಲ್ಲರೂ ಏಳುವ ಮುನ್ನ ಜೋಡುಕಟ್ಟಿಗೆ ಹೊರೆಯನ್ನು ಮಠದ ಆಭರಣದಲ್ಲಿ ತಂದು ಹಾಕುತ್ತಿರುತ್ತಾನೆ. ಇದು ಹಲವಾರು ವರ್ಷಗಳ ಕಾಲ ನಡೆಯುತ್ತದೆ. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಪ್ರತಿದಿನ ಹೀಗೆ ಕಟ್ಟಿಗೆ ಹೊರೆಯನ್ನು ತಂದು ಹಾಕುವವರು ಯಾರು ಎಂಬುದನ್ನು ಅರಿಯುವ ಇಚ್ಛೆಯಿಂದ ಹಠ ತೊಟ್ಟು ರಾತ್ರಿ ಇಡೀ ಕಾದ ಹುರಿಲಿಂಗ ದೇವರಿಗೆ ಆ ದಿನ ರಾತ್ರಿಯ ಎರಡನೇ ಜಾವದಲ್ಲಿ ಕಟ್ಟಿಗೆಯ ಹೊರೆಯನ್ನು ತಂದು ಇಳುಹಿದ ಪೆದ್ದಿ ಸಿಕ್ಕಿ ಬೀಳುತ್ತಾನೆ.


ಓಹೋ! ಪೆದ್ದಿಯದೋ ಈ ಕೆಲಸ ಎಂದು ಆತನನ್ನು ನಿಲ್ಲಿಸಿಕೊಂಡ ಉರಿಲಿಂಗ ದೇವರು ಹೀಗೇಕೆ ಮಾಡುತ್ತಿರುವೆ ಎಂದು ಪ್ರಶ್ನಿಸುತ್ತಾರೆ.

ಒಮ್ಮಿಂದೊಮ್ಮೆಲೆ ಗುರುಗಳ ಕೈಗೆ ಸಿಕ್ಕಿಬಿದ್ದ ಪೆದ್ದಿ ಏನು ಹೇಳಬೇಕೆಂದು ತೋಚದೆ ಹೋದರು ತಡೆದು ಕೊನೆಗೆ ನಿಧಾನವಾಗಿ ಲಿಂಗ ದೀಕ್ಷೆ ಬೇಕೆಂದು ಹೇಳುತ್ತಾನೆ.

ಅಸ್ಪೃಶ್ಯನಿಗೆ ಲಿಂಗ ದೀಕ್ಷೆ ಕೊಡುವ ಮಾತನ್ನು ಕೇಳಿಯೇ ಸಿಟ್ಟಾದ ಉರಿಲಿಂಗ ದೇವರು ಆತನನ್ನು ಗದರಿಸಿ ಕಳುಹಿಸುತ್ತಾರೆ. ಪ್ರತಿ ದಿನವೂ ಪೆದ್ದಿ ಉರಿಲಿಂಗ ದೇವರ ಬಳಿ ಬಂದು ಲಿಂಗ ದೀಕ್ಷೆಯ ಇಚ್ಛೆಯನ್ನು ವ್ಯಕ್ತಪಡಿಸಿ ಅವರನ್ನು ಒಂದೇ ಸಮನೆ ಬೇಡುತ್ತಾನೆ. ಆತನ ಬೇಡಿಕೆಯನ್ನು ಕಾಡುವಿಕೆ ಎಂದು ಭಾವಿಸಿದ ಗುರುಗಳು ಒಂದು ದಿನ ಸಿಟ್ಟಿನಿಂದ ಅಲ್ಲಿಯೇ ಇದ್ದ ಪುಟ್ಟ ಕಲ್ಲೊಂದನ್ನು ಪೆದ್ದಿಗಳೆಡೆ ಎಸೆದು ಥೇ ಧಗಡಿ ಜಾ ಎಂದು ಹೇಳುತ್ತಾರೆ. ಗುರುಗಳು ತನಗೆ ಪರಮಾಶೀರ್ವಾದ ಮಾಡಿದರು ಎಂದೇ ಭಾವಿಸಿದ ಉರಿಲಿಂಗ ಪೆದ್ದಿಗಳು ಆ ಕಲ್ಲನ್ನು ಮನೆಗೆ ತಂದು ಪತ್ನಿಗೆ ತೋರಿಸಿ ನನಗೆ ಶಿವ ದೀಕ್ಷೆ ದೊರೆಯಿತು ಎಂದು ಹೇಳುತ್ತಾರೆ.

ಗಂಡನ ಕೈಯಲ್ಲಿದ್ದ ಕಲ್ಲನ್ನು ನೋಡಿದ ಪತ್ನಿ ಕೋಪದಿಂದ ಕೆರಳಿ ಈ ಕಲ್ಲನ್ನು ತರುವುದಕ್ಕಾಗಿ ಹನ್ನೆರಡು ವರ್ಷಗಳ ಕಾಲ ಜೋಡುಕಟ್ಟಿಗೆಯ ಹೊರೆಯನ್ನು ಮಠಕ್ಕೆ ತಂದು ಹಾಕಿದೆಯಾ ಎಂದು ಕೂಗಾಡುತ್ತಾಳೆ. ಕಲ್ಲು ಎಂದಾದರೂ ಲಿಂಗವಾಗಲು ಸಾಧ್ಯವೇ ಗುರುಗಳು ನಮ್ಮಂತಹ ಅಸ್ಪೃಶ್ಯರಿಗೆ ಲಿಂಗ ದೀಕ್ಷೆ ಕೊಡುತ್ತಾರೆಯೇ ನಿನಗೆಲ್ಲೋ ಮರುಳು ಎಂದು ಗಂಡನನ್ನು ಹೀಯಾಳಿಸಿದಳು.

ಪತ್ನಿಯು ಮೊದಲು ಆಡಿದ ಮಾತಿಗೆ ತುಸು ಕುಗ್ಗಿ ಹೋದ ಉರಿಲಿಂಗ ಪೆದ್ದಿಗಳು ಆಕೆ ಕಲ್ಲು ಎಂದು ಹೇಳಿದಾಗ ತುಸು ಸಿಟ್ಟಿಗೆದ್ದು ಗುರುಗಳು ಅನುಗ್ರಹಿಸಿದ ಲಿಂಗವನ್ನು ಕಲ್ಲೆಂದು ಹೇಳಬೇಡ ಮರುಳೆ, ಕುರುಬ



ಗೊಲ್ಲಾಳನಿಗೆ ಕುರಿ ಹಿಕ್ಕೆಯಲ್ಲಿಯೇ ಲಿಂಗ ದರ್ಶನ ದೊರೆಯಲಿಲ್ಲವೇ ಎಂದು ಸಮಾಧಾನಪಡಿಸಿದರು.

ಗಂಡನ ಮಾತನ್ನು ಕೇಳಿದ ಕಾಳವ್ವೆಗೆ ಹೌದಲ್ಲವೇ ಎಂಬ ಭಾವ ಮೂಡಿತು. ಕಳೆದ ಹನ್ನೆರಡು ವರ್ಷಗಳಿಂದ ಸಾತ್ವಿಕ ಬದುಕನ್ನು ಬದುಕಿದ್ದ ಅವರಿಗೆ ಅವರ ನಿರೀಕ್ಷೆಯಂತೆ ಗುರುಗಳಿಂದ (ಅನುಗ್ರಹಿಸಲ್ಪಟ್ಟ!) ಪಡೆದ ಲಿಂಗವನ್ನೇ ಪೂಜಿಸಿದರು. ಭಾವಶುದ್ಧಿಯಿಂದ ಲಿಂಗ ಪೂಜೆ ಮಾಡುತ್ತಾ ಶರಣ ಬದುಕನ್ನು ಬದುಕುತ್ತಿದ್ದರು. ದೂರದಿಂದಲೇ ಉರಿ ಲಿಂಗ ದೇವರ ಪ್ರವಚನಗಳನ್ನು ಆಲಿಸುತ್ತಾ ತಮ್ಮ ಕೈಲಾದಷ್ಟು ಸೇವೆಯನ್ನು ಸಲ್ಲಿಸುತ್ತಾ ಸಾಗುತ್ತಿದ್ದ ದಂಪತಿಗಳನ್ನು ಜಗತ್ತು ಪರಿಚಯ ಮಾಡಿಕೊಳ್ಳುವ ಆ ಗಳಿಗೆ ಬಂದೇಬಿಟ್ಟಿತು.

ನಂದವಾಡಗಿ ಹಾಗೂ ಸುತ್ತಮುತ್ತಣ ಭಾಗದಲ್ಲಿ ಮಳೆಯೇ ಬಾರದೆ ಕೆರೆ ಕಟ್ಟೆಗಳೆಲ್ಲ ಬತ್ತಿಹೋದವು ನೀರಿಲ್ಲದೆ ಜನರು, ಪಶು ಪಕ್ಷಿಗಳು ಬಸವಳಿದವು. ಜನರ ತೊಂದರೆಯನ್ನು ಅರಿತ ಮಹಾರಾಜ ಊರ ಜನರ ಸಹಕಾರದಿಂದ ಕೆರೆಯನ್ನು ಕಟ್ಟಿಸಲು ಆರಂಭಿಸಿದ. ಆಳವಾದ ಕೆರೆ ಸಿದ್ಧವಾಯಿತು ನಿಜ ಆದರೆ ಕೆರೆಯ ಅಂಗಳದ ತುಂಬಾ ಹಾಸು ಬಂಡೆ ಗಳಿದ್ದು ಯಾವೊಂದು ಒರತೆಯೂ ದೊರೆಯಲಿಲ್ಲ. ಅಂತಿಮವಾಗಿ ಜ್ಯೋತಿಷಿಗಳನ್ನು ಕೇಳಲು ಕಲ್ಲು ಬಂಡೆಗಳನ್ನು ತೆಗೆಸಿದರೆ ನೀರಿನ ಸೆಲೆ ಉಕ್ಕಬಹುದು ಎಂದು ಹೇಳಿದರು. ನೂರಾರು ಕಲ್ಲುಕುಟಿಗರು ಕಾರ್ಯ ನಿರ್ವಹಿಸಿದರು ಕೂಡ ಹಾಸು ಬಂಡೆಗಳನ್ನು ಒಡೆಯಲು ಸಾಧ್ಯವಾಗಲಿಲ್ಲ.

ನೊಂದುಕೊಂಡ ಅರಸ ತನ್ನ ಪರಿವಾರ ಸಮೇತವಾಗಿ ಮಠದ ಗುರುಗಳಾದ ಉರಿಲಿಂಗ ದೇವರ ಬಳಿ ಬಂದು ನೋವನ್ನು ತೋಡಿಕೊಂಡಾಗ ಗುರುಗಳು "ಇದು ಮನುಷ್ಯರಿಂದ ಆಗದ ಕೆಲಸ, ನೋಡೋಣ ದೇವರಿಚ್ಛೆ" ಎಂದು ಹೇಳಿ ದೂರದಲ್ಲಿ ನಿಂತುಕೊಂಡಿದ್ದ ತಮ್ಮ ಶಿಷ್ಯ ಉರಿಲಿಂಗಪೆದ್ದಿಗಳ ಸಹಿತವಾಗಿ ಎಲ್ಲರನ್ನು ಕರೆದುಕೊಂಡು ಕೆರೆಯ ಬಳಿ ನಡೆದರು.

ಕೆರೆಯ ಅಂಗಳಕ್ಕೆ ಇಳಿದು ಉರಿಲಿಂಗ ದೇವರು ಪೆದ್ದಿಗಳನ್ನು ಕರೆದು ಕಲ್ಲನ್ನು ಹೊಡೆಯಲು ಹೇಳಿದರು.

ಕಟ್ಟಿಗೆ ಒಡೆದು ತಂದು ಹಾಕುವ ವ್ಯಕ್ತಿ ಕಲ್ಲನ್ನು ಒಡೆಯಲು ಸಾಧ್ಯವೇ ಎಂಬಂತೆ ಆಶ್ಚರ್ಯಚಕಿತರಾಗಿ ನಿಂತ ಜನರ ನಡುವೆ ತನ್ನ ಕೊರಳಲ್ಲಿರುವ ಇಷ್ಟಲಿಂಗವನ್ನು ಒಂದು ಬಾರಿ ಸ್ಮರಿಸಿದ ಉರಿಲಿಂಗ ಪೆದ್ದಿಗಳು ಕಲ್ಲಿನ ಬಂಡೆಯ ಮೇಲೆ ದೊಡ್ಡದಾದ ಹಾರೆಯಿಂದ ಥೇ ದಗಡಿ ಜಾ ಎಂದು ಜೋರಾಗಿ ಮೀಟಿದರು. ಅಚ್ಚರಿ ಎಂಬಂತೆ ನೀರಿಗೆ ಅಡ್ಡಲಾಗಿದೆಯೇನೋ ಎಂಬಂತೆ ಇದ್ದ ಹಾಸು ಬಂಡೆ ಒಡೆದು ಚೂರಾಗಿ ನೀರಿನ ಸೆಲೆ ಉಕ್ಕಿ ಹರಿಯಿತು. ನೋಡಿ ನೋಡುತ್ತಿದ್ದಂತೆಯೇ ಕೆಲವೇ ಗಂಟೆಗಳಲ್ಲಿ ಕೆರೆ ಅರ್ಧದಷ್ಟು ತುಂಬಿತು.

ಮಹಾರಾಜನಾದಿಯಾಗಿ ಇಡೀ ಊರಿನ ಜನ ಉರಿಲಿಂಗಪೆದ್ದಿಗಳನ್ನು ಹಾಗೂ ಗುರುಗಳನ್ನು ಮನದುಂಬಿ ಹಾಡಿ ಹೊಗಳಿದರು. ಪೆದ್ದಿಗಳ ಗುರು ಭಕ್ತಿಯನ್ನು ಮೆಚ್ಚಿ ಅವರ ಲಿಂಗ ನಿಷ್ಠೆಯನ್ನು ಕೊಂಡಾಡಿದರು.

ಮುಂದೆ ಉರಿಲಿಂಗ ದೇವರು ತಮ್ಮ ಉತ್ತರಾಧಿಕಾರಿಯನ್ನಾಗಿ ಉರಿಲಿಂಗ ಪೆದ್ದಿಗಳನ್ನು ಮಾಡಿದಾಗ ಉರಿಲಿಂಗ ದೇವರ ಶಿಷ್ಯರಿಗೆ ಅಸಹನೆ ಉಂಟಾಯಿತು. ತಮ್ಮ ಶಿಷ್ಯ ಬಳಗದಲ್ಲಿ ಸತ್ಕುಲ ಸಂಪನ್ನರು, ಬ್ರಹ್ಮಚಾರಿಗಳಾಗಿರುವ ಯಾರನ್ನಾದರೂ ಒಬ್ಬರನ್ನು ಆರಿಸಿ ಉತ್ತರಾಧಿಕಾರಿಯನ್ನಾಗಿ ಮಾಡಬೇಕು ಎಂದು ಗುರುಗಳಿಗೆ ಒತ್ತಾಯಿಸಿದರು. ಅದಕ್ಕೆ ಗುರುಲಿಂಗ ದೇವರು ಈಗಾಗಲೇ ಬಸವಾದಿ ಶರಣರ ಪ್ರಭಾವಕ್ಕೊಳಗಾಗಿ ಮಾನವ ನಿರ್ಮಿತ ಜಾತಿ ಪದ್ಧತಿ ಹಾಗೂ ಹುಟ್ಟಿನಿಂದಲೇ ವ್ಯಕ್ತಿಯ ಯೋಗ್ಯತೆಯನ್ನು ನಿರ್ಧರಿಸುವ ಸಂಪ್ರದಾಯಗಳನ್ನು ತೊರೆದು ನೂತನವಾಗಿ ಪಟ್ಟಾಧಿಕಾರಗೊಳ್ಳಲಿರುವ ಉರಿಲಿಂಗಪೆದ್ದಿಗಳನ್ನು ಸ್ವಾಗತಿಸಲು ತಮ್ಮ ಶಿಷ್ಯರಿಗೆ ಹೇಳಿದರು. ಇದಕ್ಕೆ ತೀವ್ರ ವಿರೋಧ ವ್ಯಕ್ತವಾದಾಗ ಇಡೀ ಕಾಡಿನಲ್ಲಿನ ಎಲ್ಲಾ ಕಟ್ಟಿಗೆಯ ಹೊರೆಗಳನ್ನು ತರಿಸಿದ ಉರಿಲಿಂಗಪೆದ್ದಿಗಳು ಆ ಎಲ್ಲಾ ಕಟ್ಟಿಗೆಯ ಹೊರೆಗಳನ್ನು ಒಂದೆಡೆ ಹಾಕಿ ಅದಕ್ಕೆ ಉರಿ ಹಾಕಿಸಿ, ಹೊತ್ತಿಕೊಂಡ ಉರಿಯ ಮಧ್ಯದಲ್ಲಿ ನಡೆಯಲು ಶಿಷ್ಯರಿಗೆ ಆದೇಶಿಸಿದರು.

ಅಯ್ಯೋ ಇಷ್ಟು ದೊಡ್ಡ ಬೆಂಕಿಯ ಉರಿಯಲ್ಲಿ ನಾವು ನಡೆದರೆ ಬದುಕಿ ಉಳಿಯಲು ಸಾಧ್ಯವೇಎಂದು ಶಿಷ್ಯರು ಪರಸ್ಪರ ಮಾತನಾಡುತ್ತಾ ಹಿಂಜರಿದಾಗ ನಸುನಕ್ಕ ಉರಿ ಲಿಂಗ ದೇವರು ಅಲ್ಲಿಯೇ ನಿಂತಿದ್ದ ಪೆದ್ದಿಗಳನ್ನು ಕರೆದು ಆ ಬೆಂಕಿಯ ಜ್ವಾಲೆಯನ್ನು ಕೆಂಡಗಳನ್ನು ಹಾಯ್ದು ಬರಲು ಹೇಳಿದರು. ಕೈಯಲ್ಲಿ ತಮ್ಮ ಇಷ್ಟಲಿಂಗವನ್ನು ಹಿಡಿದು ಗುರುಗಳ ಆಜ್ಞೆಯನ್ನು ಶಿರಸಾ ವಹಿಸಿ ಪಾಲಿಸಿದ ಪೆದ್ದಿಗಳು ಒಂದು ಕೂದಲು ಕೊಂಕದಂತೆ ಪಾರಾಗಿ ಬಂದರು. ಉರಿಲಿಂಗ ಪೆದ್ದಿಗಳ ಭಕ್ತಿಗೆ ಮೆಚ್ಚಿದ ಪರಶಿವ ಪ್ರತ್ಯಕ್ಷನಾಗಿ ಅವರನ್ನು ರಕ್ಷಿಸಿ ಆಶೀರ್ವದಿಸಿದನು ಎಂದು ಜನಪದರು ವರ್ಣಿಸುತ್ತಾರೆ.

ಒಳ್ಳೆಯ ಪರಿಸರ ಹಾಗೂ ಮಾರ್ಗದರ್ಶನಗಳ ಜೊತೆಗೆ ಶ್ರದ್ಧೆ, ನಿಷ್ಠೆಗಳು ಸೇರಿದರೆ ಅಸಾಧ್ಯವನ್ನು ಸಾಧಿಸಬಹುದು ಎಂಬುದಕ್ಕೆ ಉರಿಲಿಂಗ ಪೆದ್ದಿಗಳ ಜೀವನವೇ ನಿದರ್ಶನವಾಗಿದೆ.

ಮುಂದೆ ಗುರುಗಳ ಮಾರ್ಗದರ್ಶನದಲ್ಲಿ ಉರಿಲಿಂಗ ಪೆದ್ದಿಗಳು ವೇದ, ಆಗಮ, ಉಪನಿಷತ್ತು, ಪುರಾಣ, ಸಂಸ್ಕೃತಿ ಹಾಗೂ ತತ್ವ ಸಿದ್ಧಾಂತಗಳನ್ನು ಆಳವಾಗಿ ಅಧ್ಯಯನ ಮಾಡಿದರು. ಅವುಗಳನ್ನೇ ಆಧಾರವಾಗಿಟ್ಟುಕೊಂಡು ವಚನಗಳನ್ನು ರಚಿಸಿದ ಅವರು ತಮ್ಮ ಸಮಕಾಲೀನ ಧಾರ್ಮಿಕ ಸಾಮಾಜಿಕ ಜನಜೀವನದ ವಿವರಗಳನ್ನು ತಮ್ಮ ವಚನಗಳಲ್ಲಿ ಕಾಣಿಸಿದ್ದಾರೆ.

ಅತ್ಯಂತ ಹೀನಕುಲದ ಉರಿಲಿಂಗ ಪೆದ್ದಿಗಳ ಬದುಕು ಉರಿಲಿಂಗ ದೇವರ ಆಶ್ರಯ ಹಾಗೂ ಸದಾಚಾರಗಳ ಅನುಷ್ಠಾನದಲ್ಲಿ ಪರುಷ ಸೋಕಿದವರಾದರು.

ಶ್ರೀ ಗುರುಪಾಗಿ ಬಂದು ದೀಕ್ಷೆಯ ಮಾಡಿ ಶಿವಲಿಂಗವ ಬಿಜಯಂಗೈಸಿ ಕೊಟ್ಟರಿ ಜಂಗಮವಾ ತೋರಿದಿರಿ ನಿಮ್ಮ ಶಿಶುವೆಂದು ಕರುಣಿಸಿ ಪ್ರಸಾದವನಿಕ್ಕಿ ರಕ್ಷಿಸಿದಿರಿ

ಎಂದು ಇಷ್ಟ ಲಿಂಗವನ್ನು ನೀಡಿದಾಗ ಮನಸಾರೆ ಸ್ಮರಣೆ ಮಾಡಿದ ಉರಿಲಿಂಗ ಪೆದ್ದಿಗಳು ಮುಂದೆ 'ಉರಿಲಿಂಗಪೆದ್ದಿಪ್ರಿಯ ವಿಶ್ವೇಶ್ವರ' ಎಂಬ ಅಂಕಿತನಾಮದಲ್ಲಿ ಹಲವಾರು ವಚನಗಳನ್ನು ರಚಿಸಿದ್ದಾರೆ.

ಸದ್ಗುರುವೇ ಸರ್ವ ಶ್ರೇಷ್ಠನೂ
ಸದ್ಗುರುವೇ ಸರ್ವ ಪೂಜ್ಯನು
ಸದ್ಗುರುವೇ ಸರ್ವ ಕಾರಣನಯ್ಯ
ಉರಿಲಿಂಗ ಪೆದ್ದಿ ಪ್ರಿಯ ವಿಶ್ವೇಶ್ವರ

ಎಂಬ ಅವರ ವಚನ ಅವರ ಬದುಕಿಗೆ ಬೆಳಕಿನ ಹಾದಿ ತೋರಿದ ಗುರುಗಳ ಕುರಿತಾದ ವಚನವಾಗಿದೆ. ಲಿಂಗವಂತರಾದ ಮೇಲೆ ಜ್ಞಾನದಹಿಯಾಗಿ ಅಧ್ಯಯನ ಶೀಲರಾಗಿ ಜ್ಞಾನದ ಹಸಿವನ್ನು ನೀಗಿಸಿಕೊಂಡ ಅವರು ತಮ್ಮ ತಾರ್ಕಿಕ ಮನೋಭಾವದಿಂದ ಬದುಕಿನ ಸರ್ವಾಂಗೀಣ ಅರಿವನ್ನು ಹೊಂದಿದರು.


ಗುರು, ಲಿಂಗ,ಜಂಗಮಗಳಲ್ಲಿ ಶ್ರದ್ಧೆಯನ್ನು ಹೊಂದಿದ ಉರಿಲಿಂಗಪೆದ್ದಿಗಳು 12ನೇ ಶತಮಾನದಲ್ಲಿ ಜರುಗಿದ ವರ್ಗ ಮತ್ತು ಜಾತಿ ಸಂಘರ್ಷ, ಮೇಲು ಕೀಳು ಎಂಬ ಭೇದ ಭಾವಗಳನ್ನು, ಲಿಂಗ ತಾರತಮ್ಯವನ್ನು ಹೋಗಲಾಡಿಸಲು ಸಾಮಾಜಿಕ ಸಮಾನತೆಯನ್ನು ತರಲು ವಚನಗಳ ಮೂಲಕ ತಮ್ಮ ಮನದಾಳದ ಭಾವನೆಗಳನ್ನು ಅಭಿವ್ಯಕ್ತಿಸಿದರು.

ಉರಿಲಿಂಗ ಪೆದ್ದಿಗಳು ರಚಿಸಿದ 358 ವಚನಗಳು ಸದ್ಯಕ್ಕೆ ಲಭ್ಯವಿದ್ದು ಗುರುಲಿಂಗ ಜಂಗಮದ ಕುರಿತಾದ ಶ್ರದ್ಧೆ ಭಕ್ತಿಗಳು, ಸಾಮಾಜಿಕ ಅಜ್ಞಾನ, ಮೂಢನಂಬಿಕೆಗಳ ಜೊತೆ ಜೊತೆಗೆ ಬದುಕಿನ ಕಠಿಣತೆಗಳ, ಬಡತನವನ್ನು ಎದುರಿಸುವ ನಿಟ್ಟಿನಲ್ಲಿ ಅವರ ವಚನಗಳು ದಾರಿ ದೀಪವಾಗಿವೆ.

ವಚನಕಾರರಾದ ಉರಿಲಿಂಗಪೆದ್ದಿಗಳ ದೃಷ್ಟಿಯಲ್ಲಿ ಜಾತಿ ಮತ, ಮೇಲು ಕೀಳು ಎಂಬ ಯಾವ ಭಾವಗಳಿಗೂ ಆಸ್ಪದವಿಲ್ಲ. ಹುಟ್ಟಿದ ಪ್ರತಿಯೊಂದು ನದಿಯು ಸಾಗರವನ್ನು ಸೇರುವ ಮೂಲಕ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವಂತೆ ಯಾವುದೇ ಜಾತಿಯ ಹಣೆಪಟ್ಟಿ ಹಚ್ಚಿಕೊಂಡು ಹುಟ್ಟಿದರೂ ಕೂಡ ಗುರು ಕಾರುಣ್ಯವನ್ನು ಪಡೆದ ಸರ್ವ ಜನರು ಅಂತಿಮವಾಗಿ ಶರಣ ಧರ್ಮ ಎಂಬ ಸಮುದ್ರವನ್ನು ಸೇರುವರು ಎಂಬುದು ಅವರ ನಿಲುವಾಗಿತ್ತು.

ಬಹುಮುಖ ಪ್ರತಿಭೆಯ ಶರಣ ಉರಿಲಿಂಗ ಪೆದ್ದಿಗಳು ಒಂದೆಡೆ ಅಂತರಂಗದ ಆರಾಧಕರಾದರೆ ಮತ್ತೊಂದು ಕಡೆ ಸಮಾಜ ಸುಧಾರಕರಾಗಿ ಧರ್ಮದ ಬೆಳಕನ್ನು ಹೊತ್ತ ದೀಪವನ್ನು ಹಿಡಿದು ಸಮಾಜಕ್ಕೆ ಬೆಳಕಾದರು.

ಅವರ ವಚನಗಳ ಭಾವವು ಕೊಡುವ ಅರಿವಿನ ಜ್ಯೋತಿಯ ಬೆಳಕಿನಲ್ಲಿ ನಾವೆಲ್ಲರೂ ಮುನ್ನಡೆಯೋಣ ಎಂಬ ಆಶಯದೊಂದಿಗೆ



ವೀಣಾ ಹೇಮಂತ್ ಗೌಡ ಪಾಟೀಲ್
ಮುಂಡರಗಿ ಗದಗ್

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from Mihir Akash K.R, #78, Daya Marga Near Geetha School, Siddartha Nagar Mysore-570011, Editor K.N Ravi,